
ಪ್ರಕ್ಷುಬ್ಧ ನೇಪಾಳ


# ಕಾರ್ಮಿಕ ದೃಷ್ಟಿಕೋನ

ಸೆಪ್ಟೆಂಬರ್ 2025 ಬೆಲೆ: ರೂ. 7/-

ಸಂಪುಟ:38
ಸಂಚಿಕೆ:07

ಸೋಷಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ–ಕಮ್ಯುನಿಸ್ಟ್ SUCI(C) ಕರ್ನಾಟಕ ರಾಜ್ಯ ಸಮಿತಿಯ ಮಾಸಿಕ ಮುಖಪತ್ರಿಕೆ


ಒಳ ಪುಟಗಳಲ್ಲಿ.............


ಪುಟ 3 ಆರ್ಥಿಕತೆಯ ಮಿಲಿಟರೀಕರಣ
ಪುಟ 5 ಸರ್ಕಾರಿ ಶಾಲೆಗಳನ್ನು ರಕ್ಷಿಸಿ
ಪುಟ 6 ಗುಜರಾತ್ ಮತ್ತು ಬಿಹಾರದಲ್ಲಿ ಕುಸಿದ ಸೇತುವೆಗಳು
ಪುಟ 7 ಇತಿಹಾಸ ಪಠ್ಯಪುಸ್ತಕದಿಂದ ಮೊಘಲ್ ಕಾಲಕ್ಕೆ ಖೊಕ್!
ಪುಟ 8 ಅಸ್ಸಾಂ : ರಾಕ್ಷಸೀ ತೆರವು ಕಾರ್ಯಾಚರಣೆ ಮತ್ತು ಕೊಲೆಗಳು
ಪುಟ 9 ಜಿಲ್ಲಾ ಕೇಂದ್ರಗಳಲ್ಲಿ ಆಶಾಗಳ ಅಹೋರಾತ್ರಿ ಧರಣಿ
ಪುಟ 10 ಬ್ಯಾಂಕ್ ಬಡ್ಡಿದರ ಕಡಿತ


### ಎಸ್.ಐ.ಆರ್: ಪೌರತ್ವ ಹಕ್ಕಿನ ನಿರಾಕರಣೆ!

## ಮುಕ್ತವಾದ ನ್ಯಾಯಸಮ್ಮತ ಚುನಾವಣೆ ನಡೆಯಲಿ!!

ಬಿಹಾರ್ ರಾಜ್ಯದಲ್ಲಿ ಇದೇ ನವೆಂಬರ್‌ನಲ್ಲಿ ವಿಧಾನಸಭಾ ಚುನಾವಣೆ ನಡೆಯಲಿದೆ. ಅದರ ಪೂರ್ವಭಾವಿ ತಯಾರಿಯಾಗಿ ಭಾರತದ ಚುನಾವಣಾ ಆಯೋಗವು 'ಮತಪಟ್ಟಿಯ ವಿಶೇಷ ತೀವ್ರತಮ ಪರಿಷ್ಕರಣೆ' ಅಥವಾ ಎಸ್‌ಐಆರ್ ಎಂಬ ಹೆಸರಿನ ಮತಪಟ್ಟಿ ಪರಿಷ್ಕರಣೆಯ ಕಾರ್ಯಕ್ಕೆ ಕೈಹಾಕಿದೆ. ಈ ಹಿಂದೆ ಆಯೋಗವು ರಾಜ್ಯದಲ್ಲಿ 7.89 ಕೋಟಿ ಮತದಾರರು ಇದ್ದಾರೆ ಎಂದು ಹೇಳಿತ್ತು. ಈಗ ಮೊದಲ ಕರಡು ಪರಿಷ್ಕೃತ ಪಟ್ಟಿಯಲ್ಲಿ 65 ಲಕ್ಷ ಹೆಸರುಗಳನ್ನು ಸೇರಿಸದೆ, ರಾಜ್ಯದ ಮತದಾರರ ಒಟ್ಟು ಸಂಖ್ಯೆಯನ್ನು 7.24 ಕೋಟಿ ಎಂದು ತೋರಿಸಲಾಗಿದೆ. ಮತದಾರರ ಪಟ್ಟಿಯಲ್ಲಿ ಹೆಸರು ಇಲ್ಲದೆ ಹೋದರೆ ಅಂತಹವರು ಮತದಾನದ ಹಕ್ಕನ್ನು ಕಳೆದುಕೊಳ್ಳುತ್ತಾರೆ. ಮೃತರು, ವಲಸೆ ಹೋದವರು, ಪೌರತ್ವದ ದಾಖಲೆ ನೀಡಲಾಗದವರನ್ನು ಪಟ್ಟಿಯಲ್ಲಿ ಸೇರಿಸಿಲ್ಲ ಎಂಬುದು ಚುನಾವಣಾ ಆಯೋಗದ ಸಮರ್ಥನೆ! ಪಟ್ಟಿಯಲ್ಲಿ ಹೆಸರಿಲ್ಲದೆ ಹೋದರೆ, ಮತದಾನದ ಹಕ್ಕು ಮಾತ್ರ ಹೋಗುವುದಿಲ್ಲ, ಅದು ವಾಸ್ತವದಲ್ಲಿ ಪೌರತ್ವವನ್ನೇ ನಿರಾಕರಿಸಿದಂತಾಗುತ್ತದೆ. ಮತ ಪಟ್ಟಿಯಲ್ಲಿ 'ಮೃತರು' ಎಂದು ಘೋಷಿತರಾದವರೇ ಸ್ವತ: ಆಯೋಗದ ಕಚೇರಿಗೆ ಆಗಮಿಸಿ ದೂರು ದಾಖಲಿಸಿದ ಘಟನೆಗಳು ಈ ಪರಿಷ್ಕರಣಾ ಕಾರ್ಯದ ಪೊಳ್ಳುತನವನ್ನು ಬಯಲು ಮಾಡಿವೆ.

**ಪೌರತ್ವವನ್ನು ಸಾಬೀತು ಪಡಿಸುವ ಕಷ್ಟಕರ ಕಾರ್ಯ**

ಸಾಂವಿಧಾನಿಕ ಅಂಗವಾದ ಚುನಾವಣಾ ಆಯೋಗವು ತಾಟಸ್ಥ್ಯದ ತತ್ವವನ್ನು ಕಡೆಗಣಿಸಿ, ನಡೆಸಿರುವ ಭಾರಿ ಪ್ರಮಾಣದ 'ಕೈಚಳಕ'ದಿಂದ, ಲಕ್ಷಾಂತರ ಜನರು ತಮ್ಮ ಮತದಾನದ ಹಕ್ಕನ್ನು ಕಳೆದುಕೊಂಡಿದ್ದಾರೆ. ಅಲ್ಲದೆ, ಅವರು 'ವಿದೇಶಿ' ಎಂಬ

2ನೇ ಪುಟಕ್ಕೆ....

## ಮದ್ದೂರು ಹಿಂಸಾಚಾರ: ಎಸ್‌ಯುಸಿಐ(ಸಿ) ಖಂಡನೆ

ಮಂಡ್ಯ ಜಿಲ್ಲೆಯ ಮದ್ದೂರಿನಲ್ಲಿ ಇತ್ತೀಚೆಗೆ ನಡೆದ ಕಲ್ಲು ತೂರಾಟ ಮತ್ತು ಹಿಂಸಾಚಾರದ ಬಗ್ಗೆ ಎಸ್‌ಯುಸಿಐ ಕಮ್ಯುನಿಸ್ಟ್ ಪಕ್ಷದ ರಾಜ್ಯ ಕಾರ್ಯದರ್ಶಿಗಳಾದ ಕಾ. ಉಮಾ ಆತಂಕ ವ್ಯಕ್ತಪಡಿಸಿದ್ದಾರೆ.

ತಮ್ಮ ಹೇಳಿಕೆಯಲ್ಲಿ ಅವರು, "ಮದ್ದೂರಿನ ಗಲಭೆಗೆ ಕಾರಣರಾದವರನ್ನು ಪತ್ತೆಹಚ್ಚಿ, ಅವರಿಗೆ ನಿಷ್ಪಕ್ಷಪಾತವಾಗಿ ಕಠಿಣ ಶಿಕ್ಷೆ ನೀಡಬೇಕು, ಸಾಮಾನ್ಯ ಜನತೆ ದ್ವೇಷದ ಪ್ರಚಾರಕ್ಕೆ ಬಲಿಯಾಗದೆ ತಮ್ಮ ಕೋಮು ಸಾಮರಸ್ಯ ಹಾಗೂ ಒಗ್ಗಟ್ಟನ್ನು ಕಾಪಾಡಿಕೊಳ್ಳಬೇಕು ಮತ್ತು ಇಂತಹ ಘಟನೆಗಳ ರಾಜಕೀಯ ದುರ್ಲಾಭ ಪಡೆಯಲು ರಾಜಕೀಯ ಪಕ್ಷ ಮತ್ತು ಸಂಘಟನೆಗಳಿಗೆ ಯಾವುದೇ ಅವಕಾಶವನ್ನು ಜಿಲ್ಲಾಡಳಿತ ನೀಡಬಾರದು ಎಂದು ಎಸ್‌ಯುಸಿಐ(ಸಿ) ಒತ್ತಾಯಿಸುತ್ತದೆ" ಎಂದು ತಿಳಿಸಿದ್ದಾರೆ. ■

## ಭ್ರಷ್ಟಾಚಾರ–ಸೋಷಲ್ ಮೀಡಿಯಾ ಬ್ಯಾನ್ ವಿರುದ್ಧ ಪ್ರಕ್ಷುಬ್ಧಗೊಂಡ ನೇಪಾಳ

**ಎಸ್‌ಯುಸಿಐ(ಸಿ) ಪಕ್ಷದ ಪ್ರಧಾನ ಕಾರ್ಯದರ್ಶಿ ಕಾ. ಪ್ರವಾಶ್ ಘೋಷ್ ಅವರು 09.09.2025ರಂದು ಈ ಕೆಳಗಿನ ಹೇಳಿಕೆಯನ್ನು ನೀಡಿದ್ದಾರೆ:**

"ಮೇ 2008ರಲ್ಲಿ ನೇಪಾಳದಲ್ಲಿ ಕುಖ್ಯಾತ ರಾಜಪ್ರಭುತ್ವವನ್ನು ಅಧಿಕಾರದಿಂದ ಕೆಳಗಿಳಿಸಿದ ನಂತರ, ಕಳೆದ 17 ವರ್ಷಗಳಲ್ಲಿ 13 ಬಾರಿ ಸರ್ಕಾರಗಳು ಬದಲಾಗಿವೆ. ಎಲ್ಲಾ ಸರ್ಕಾರಗಳು ವಿದೇಶಿ ಸಾಮ್ರಾಜ್ಯಶಾಹಿಗಳೊಂದಿಗೆ ಸೇರಿಕೊಂಡು ಬಂಡವಾಳಶಾಹಿ ವರ್ಗದ ಹಿತಾಸಕ್ತಿಗಳನ್ನು ಮಾತ್ರ ಕಾಪಾಡಿದ್ದರಿಂದ, ಜನರ ಯಾವುದೇ ಮೂಲಭೂತ ಅಗತ್ಯಗಳನ್ನು ಪೂರೈಸಲು ಸಾಧ್ಯವಾಗಲಿಲ್ಲ. ಎಲ್ಲಾ ಸಂಸದೀಯ ಬೂರ್ಜ್ವಾ ಪಕ್ಷಗಳು ಭ್ರಷ್ಟಾಚಾರದಲ್ಲಿ ಆಳವಾಗಿ ಮುಳುಗಿವೆ. ತೀವ್ರ ನಿರುದ್ಯೋಗದ ಸಮಸ್ಯೆ ಯುವಜನರನ್ನು ಕಾಡುತ್ತಿದೆ. ಇತ್ತೀಚೆಗೆ, ಅವರು ಭ್ರಷ್ಟ ಪ್ರಧಾನಿ ಕೆ.ಪಿ. ಶರ್ಮಾ ಓಲಿ ಸರ್ಕಾರದ ವಿರುದ್ಧ ಪ್ರತಿಭಟನೆಯಲ್ಲಿ ತೊಡಗಿದ್ದಾರೆ. ಯುವಜನರ ಆಕ್ರೋಶವನ್ನು ಗಮನಿಸಿ, ಆಡಳಿತವು ಸಾಮಾಜಿಕ ಮಾಧ್ಯಮವನ್ನು ನಿಷೇಧಿಸಿದೆ, ಇದು ಯುವಕರನ್ನು ಮತ್ತಷ್ಟು ಕೆರಳಿಸಿದೆ. ಸರ್ಕಾರವು ಪ್ರತಿಭಟನಾಕಾರರ ಮೇಲೆ ಪೊಲೀಸರನ್ನು ಛೂ ಬಿಟ್ಟಿದೆ. ಪೊಲೀಸರ ಮಾರಣಾಂತಿಕ ದಾಳಿಯಿಂದ ಈಗಾಗಲೇ 25ಕ್ಕೂ ಹೆಚ್ಚು ಜನರು ಸಾವನ್ನಪ್ಪಿದ್ದಾರೆ ಮತ್ತು 300ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ.

ನೇಪಾಳ ಸರ್ಕಾರವು ಯುವಕರ ಮೇಲೆ



ನಡೆಸಿದ ಈ ಘೋರ ದಾಳಿಯನ್ನು ನಾವು ತೀವ್ರವಾಗಿ ಖಂಡಿಸುತ್ತೇವೆ ಮತ್ತು ಯುವಜನರ ನ್ಯಾಯಯುತ ಆಗ್ರಹಗಳನ್ನು ತಕ್ಷಣವೇ ಒಪ್ಪಿಕೊಳ್ಳಬೇಕೆಂದು ಸರ್ಕಾರಕ್ಕೆ ಒತ್ತಾಯಿಸುತ್ತೇವೆ. ನೇಪಾಳದ ಹೋರಾಟದ ಯುವಜನರಿಗೆ ನಮ್ಮ ಕ್ರಾಂತಿಕಾರಿ ಶುಭಾಶಯಗಳನ್ನು ತಿಳಿಸುತ್ತೇವೆ ಹಾಗೂ ಈ ಹೋರಾಟದಲ್ಲಿ ತಮ್ಮ ಪ್ರಾಣವನ್ನು ತ್ಯಾಗ ಮಾಡಿದ ಹುತಾತ್ಮರ ಕುಟುಂಬಗಳಿಗೆ ನಮ್ಮ ತೀವ್ರ ಸಂತಾಪವನ್ನು ವ್ಯಕ್ತಪಡಿಸುತ್ತೇವೆ." ■

### ಕಾಮ್ರೇಡ್ ಶಿವದಾಸ್ ಘೋಷ್‌ರವರ 49ನೇ ಸಂಸ್ಮರಣಾ ದಿನಾಚರಣೆ

## "ಸಮಾಜವಾದಿ ವ್ಯವಸ್ಥೆಯ ಸ್ಥಾಪನೆಯೇ ಪ್ರಸ್ತುತ ಸಮಸ್ಯೆಗಳಿಗೆ ಪರಿಹಾರ": ಕಾ. ಕೆ.ಉಮಾ

**ಭಾರತದ ದುಡಿಯುವ ಜನತೆಯ ಹೋರಾಟದ ಇತಿಹಾಸದಲ್ಲಿ ಆಗಸ್ಟ್ 5, ಮಹತ್ವದ ದಿನ. ಮಾರ್ಕ್ಸ್‌ವಾದಿ ಸಿದ್ಧಾಂತವನ್ನು ಅತ್ಯಂತ ಸಮರ್ಪಕವಾಗಿ ಭಾರತದ ನೆಲಕ್ಕೆ ಅಳವಡಿಸಿದ ಅಪ್ರತಿಮ ಚಿಂತಕರು, ತತ್ವಜ್ಞಾನಿಗಳು ಆದ ಕಾಮ್ರೇಡ್ ಶಿವದಾಸ್ ಘೋಷ್ ನಮ್ಮನ್ನಗಲಿದ ದಿನ. ಬಂಡವಾಳಶಾಹಿ ವಿರೋಧಿ ಸಮಾಜವಾದಿ ಕ್ರಾಂತಿ ನೆರವೇರಿ, ದುಡಿಯುವ ವರ್ಗದ ಕೈಗೆ ಅಧಿಕಾರ ದೊರಕಿದಾಗ ಮಾತ್ರವೇ ಆರ್ಥಿಕವಾಗಿ, ಸಾಮಾಜಿಕವಾಗಿ ಎಲ್ಲಾ ರೀತಿಯ ಅಸಮಾನತೆಗಳು ಸಂಪೂರ್ಣವಾಗಿ ತೊಲಗುವುದು ಎಂಬ ಸತ್ಯವನ್ನು ಅರಿತ ಕಾಮ್ರೇಡ್ ಘೋಷ್‌ರವರು ಒಂದು ನೈಜ ಕಮ್ಯುನಿಸ್ಟ್ ಪಕ್ಷವನ್ನು ಕಟ್ಟಲು ಪರಿಶ್ರಮದಾಯಕ ಹೋರಾಟವನ್ನು ನಡೆಸಿದರು. ಅಂತಿಮವಾಗಿ ಏಪ್ರಿಲ್ 24, 1948ರಂದು ಅವರು ಬೆರಳೆಣಿಕೆಯ ಸಹಯೋಧರೊಂದಿಗೆ ಸೇರಿ ಈ ನೆಲದ ನೈಜ ಕಮ್ಯುನಿಸ್ಟ್ ಪಕ್ಷ, ಸೋಷಲಿಸ್ಟ್ ಸೆಂಟರ್ ಆಫ್ ಇಂಡಿಯಾ(ಕಮ್ಯುನಿಸ್ಟ್) ಅನ್ನು ಸ್ಥಾಪಿಸಿದರು. ಶ್ರಮಿಕ ಜನತೆಯ, ಶೋಷಿತರ ಉಳಿವಿಗೆ ಇರುವ ಏಕೈಕ ಆಯುಧವಾದ ಈ ಪಕ್ಷ ಇಂದು ದೇಶದ 27 ರಾಜ್ಯಗಳಲ್ಲಿ ಜನ ಬೆಂಬಲವನ್ನು ಗಳಿಸುತ್ತಾ ಜನ ಹೋರಾಟದ ಪಕ್ಷವಾಗಿ ಬೆಳೆದಿದೆ.**
**ರಾಜ್ಯದ ಹಲವೆಡೆಗಳಲ್ಲಿ ಅವರ ಸಂಸ್ಮರಣಾ ದಿನವನ್ನು ಬಹಳ ಶ್ರದ್ಧೆಯಿಂದ ಆಚರಿಸಲಾಯಿತು.**

**ಬೆಂಗಳೂರು:**

ನಗರದ ಗಾಂಧಿ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ, ಪಕ್ಷದ ರಾಜ್ಯ ಕಾರ್ಯದರ್ಶಿಗಳೂ, ಕೇಂದ್ರ ಸಮಿತಿ ಸದಸ್ಯರೂ ಆದ ಕಾ. ಕೆ. ಉಮಾ, ಮಾರ್ಕ್ಸ್‌ವಾದದ ಆಧಾರದಲ್ಲಿರುವ ಕಾ. ಶಿವದಾಸ್ ಘೋಷ್ ಚಿಂತನೆಗಳು ಇಂದಿಗೂ ಹೇಗೆ ಪ್ರಸ್ತುತವಾಗಿವೆ ಎಂದು ವಿವರಿಸಿದರು: ಸ್ವಾತಂತ್ರ್ಯ ಚಳವಳಿಯಲ್ಲಿ ಸೆರೆವಾಸ ಅನುಭವಿಸುತ್ತಿದ್ದಾಗಲೂ, ಕಾ. ಘೋಷ್ ರಾಜಕೀಯ ಅಧ್ಯಯನ ಮತ್ತು ಚರ್ಚೆಯಲ್ಲಿ ತಮ್ಮನ್ನು ಆಳವಾಗಿ ತೊಡಗಿಸಿಕೊಂಡಿದ್ದರು; ಕ್ರಾಂತಿಕಾರಿ ಸಿದ್ಧಾಂತವನ್ನು, ಉನ್ನತ ಸಂಸ್ಕೃತಿ ಮತ್ತು ಮೌಲ್ಯಗಳೊಂದಿಗೆ ಬೆಸೆಯಬೇಕು ಎಂಬ ದೃಢ ನಿಶ್ಚಯದಿಂದ ಎಸ್‌ಯುಸಿಐ(ಸಿ) ಪಕ್ಷವನ್ನು ಸ್ಥಾಪಿಸಿದರು. ನಮ್ಮ ದೇಶದ ಸಾಮಾಜಿಕ–ರಾಜಕೀಯ ಸಮಸ್ಯೆಗಳ ಕುರಿತಾದ ಅವರ ಗಾಢ ತಿಳುವಳಿಕೆಯು, ವರ್ತಮಾನದ ಅನ್ಯಾಯಗಳನ್ನು ನಾವು ಹೇಗೆ ಅರ್ಥ ಮಾಡಿಕೊಳ್ಳಬಹುದು ಮತ್ತು ವಿರೋಧಿಸಬಹುದು ಎಂಬುದಕ್ಕೆ ಮಾರ್ಗದರ್ಶನ ನೀಡುತ್ತದೆ.

ಇತರ ಎಲ್ಲ ದೇಶಗಳಂತೆ, ಭಾರತವು ಸಹ ಜಾಗತಿಕ ಸಾಮ್ರಾಜ್ಯಶಾಹಿ ಶಕ್ತಿಗಳೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುತ್ತಿದೆ. ಹಾಗಾಗಿ, ವಿಶ್ವ ಸಾಮ್ರಾಜ್ಯಶಾಹಿ ಶಕ್ತಿಯ ನೇತಾರನಾದ ಅಮೆರಿಕಾದ ಕುಮ್ಮಕ್ಕಿನಿಂದ, ಪ್ಯಾಲೆಸ್ಟೀನ್ನಿನ ಗಾಜ಼ಾ ಮೇಲೆ ಇಸ್ರೇಲ್ ನಿರಂತರವಾಗಿ ದಾಳಿ ಎಸಗುತ್ತಿದ್ದರೆ ಭಾರತ ಅದನ್ನು ಪರೋಕ್ಷವಾಗಿ ಬೆಂಲಿಸುತ್ತಿದೆ.

ಕೇಂದ್ರ ಸರ್ಕಾರದ ಕೈಯಲ್ಲಿ ಅಧಿಕಾರವು ಹೆಚ್ಚು ಹೆಚ್ಚು ಕೇಂದ್ರಿಕೃತವಾಗುತ್ತಿದ್ದಂತೆ, ಆಡಳಿತದಲ್ಲಿನ ಫ್ಯಾಸಿಸ್ಟ್ ಪ್ರವೃತ್ತಿಯ ಲಕ್ಷಣ ಸ್ಪಷ್ಟವಾಗುತ್ತಿದೆ. ಸಿಬಿಐ, ಇಡಿ, ಚುನಾವಣಾ ಆಯೋಗ ಮುಂತಾದ ಸಂಸ್ಥೆಗಳ ಸ್ವಾಯತ್ತತೆಯನ್ನು ನಾಶಪಡಿಸಲಾಗುತ್ತಿದೆ. ಸರ್ಕಾರವನ್ನು ಪ್ರಶ್ನಿಸುವ ಪತ್ರಕರ್ತರು ಮತ್ತು ಸಾಮಾಜಿಕ ಕಾರ್ಯಕರ್ತರನ್ನು ಯುಎಪಿಎನಂತಹ ಕಠಿಣ ಕಾನೂನುಗಳ ಅಡಿಯಲ್ಲಿ ಶಿಕ್ಷಿಸಲಾಗುತ್ತಿದೆ.

ಸಾಂಸ್ಕೃತಿಕ ಅಧಃಪತನ ಎಲ್ಲೆಡೆ ಗೋಚರಿಸುತ್ತಿದೆ. ಮಾಧ್ಯಮಗಳಲ್ಲಿ ಅಶ್ಲೀಲತೆ–ಹಿಂಸೆಯ ಪ್ರಸಾರ, ಮದ್ಯಪಾನ–ಮಾದಕವಸ್ತುಗಳ ವ್ಯಸನ, ಇವೆಲ್ಲವೂ



ಏರುಗತಿಯಲ್ಲಿದ್ದು, ಹೆಣ್ಣುಮಕ್ಕಳ ಮೇಲಿನ ದೌರ್ಜನ್ಯ, ಅತ್ಯಾಚಾರಗಳು ಹೆಚ್ಚಲು ಮುಖ್ಯ ಕಾರಣವಾಗುತ್ತಿದೆ. ಹಣದುಬ್ಬರ, ಬೆಲೆ ಏರಿಕೆ, ನಿರುದ್ಯೋಗ ಮತ್ತು ಬಡತನ ಹೆಚ್ಚುತ್ತಲೇ ಇವೆ. ಒಂದೆಡೆ ಕಾರ್ಪೊರೇಟ್ ಸಂಸ್ಥೆಗಳ ಲಕ್ಷಾಂತರ ಕೋಟಿ ಮೊತ್ತದ ಸಾಲ ಮನ್ನವಾಗುತ್ತಿದ್ದರೆ, ಇನ್ನೊಂದೆಡೆ ಆಶಾ ಕಾರ್ಯಕರ್ತರು ಮತ್ತು ಅತಿಥಿ ಉಪನ್ಯಾಸಕರಂತಹ ಸೇವೆ ಸಲ್ಲಿಸುತ್ತಿರುವ ನೌಕರರಿಗೆ

4ನೇ ಪುಟಕ್ಕೆ....

## ಪೌರತ್ವ ಹಕ್ಕಿನ ನಿರಾಕರಣೆ!

1ನೇ ಪುಟದಿಂದ

ಹ ಣ ಪ ಟ್ಟಿ ಂ ು ು ನ ್ನೂ ಸಹ ಹೊತ್ತುಕೊಳ್ಳುವ ಪರಿಸ್ಥಿತಿಯನ್ನು ಎದುರಿಸುವ ಎಲ್ಲ ಸಾಧ್ಯತೆಗಳಿವೆ. ಇದು ಅತ್ಯಂತ ಆಘಾತಕಾರಿ ಕ್ರಮವಾಗಿದೆ. ನವೆಂಬರ್ ತಿಂಗಳಲ್ಲಿ ಚುನಾವಣೆಯನ್ನು ನಡೆಸಬೇಕು ಎನ್ನುವ




ವೇಳಾಪಟ್ಟಿಯ ಪ್ರಕಾರ, 2025ರ ಜೂನ್ 24ರಂದು ಎಸ್‌ಐಆರ್ ಮಾಡಲು ಆಯೋಗವು ದಿಢೀರ್ ಅಧಿಸೂಚನೆಯನ್ನು ಹೊರಡಿಸಿತು ಮತ್ತು ಅದರ ಮರುದಿನದಿಂದಲೇ, ಕೇವಲ ಒಂದು ತಿಂಗಳೊಳಗೆ ಮುಗಿಸಬೇಕು ಎನ್ನುವ ಗಡುವಿನೊಂದಿಗೆ 7.89 ಕೋಟಿ ಮತದಾರರ ಎಣಿಕೆ ಕಾರ್ಯವು ಪ್ರಾರಂಭವಾಯಿತು. ವಿದೇಶಿ ನುಸುಳುಕೋರರನ್ನು ಗುರುತಿಸಿ ಮತದಾರರ ಪಟ್ಟಿಯಿಂದ ಅವರನ್ನು ಕೈಬಿಡುವುದು ತನ್ನ 'ಸಾಂವಿಧಾನಿಕ ಜವಾಬ್ದಾರಿ' ಮತ್ತು ಹಾಗೆಯೇ, ಉದ್ಯೋಗ ನಿಮಿತ್ತ ಅಥವಾ ಇತರೆ ಕಾರಣಗಳಿಗಾಗಿ ವಿವಿಧ ಪ್ರದೇಶಗಳಿಗೆ ವಲಸೆ ಹೋದವರು ಆಯಾ ರಾಜ್ಯಗಳಲ್ಲಿ ಮತದಾರ ಪಟ್ಟಿಯಲ್ಲಿ ತಮ್ಮನ್ನು ನೋಂದಾಯಿಸಿಕೊಂಡಿದ್ದರೆ, ಅಂತಹವರನ್ನೂ ಸಹ ಗುರುತಿಸಬೇಕು; ಅದಕ್ಕಾಗಿಯೇ ಈ ಪರಿಷ್ಕರಣೆ ತುರ್ತಾಗಿ ಅಗತ್ಯವಾಗಿದೆ ಎಂದು ಆಯೋಗವು ಹೇಳಿದೆ. ಈ ಪ್ರಕ್ರಿಯೆಯಲ್ಲಿ ಪ್ರತಿಯೊಬ್ಬ ಮತದಾರನೂ ಸಹ ತಾನು 'ಅಸಲಿ' ಭಾರತೀಯನೆಂಬ ದಾಖಲೆಯನ್ನು ಸಲ್ಲಿಸಬೇಕು. ಇಲ್ಲಿ ಆಯೋಗದ ಪ್ರಕಾರ ಆಧಾರ್ ಕಾರ್ಡ್, ಮತದಾರನ ಗುರುತಿನ ಚೀಟಿ, ಪಡಿತರ ಚೀಟಿ – ಇವ್ಯಾವುವೂ ಮಾನ್ಯವಲ್ಲ. ಇಷ್ಟಲ್ಲದೆ, 1987ರ ಜುಲೈ 1ರ ಮೊದಲು ಜನಿಸಿದವರು ತಮ್ಮ ಜನ್ಮ ದಿನಾಂಕ ಮತ್ತು ಜನ್ಮಸ್ಥಳದ ದಾಖಲೆ ನೀಡಬೇಕು, 1987 ಜುಲೈ 1ರಿಂದ 2004ರ ಡಿಸೆಂಬರ್ 2ರ ನಡುವೆ ಜನಿಸಿದವರು ತಮ್ಮ ದಾಖಲೆಗಳ ಜೊತೆಯಲ್ಲಿ, ತಮ್ಮ ಪೋಷಕರಲ್ಲಿ ಯಾರಾದರೂ ಒಬ್ಬರ ಜನ್ಮ ದಿನಾಂಕ ಮತ್ತು ಜನ್ಮಸ್ಥಳದ ದಾಖಲೆಯನ್ನೂ ಮತ್ತು 2004ರ ಡಿಸೆಂಬರ್ 2ರ ನಂತರ ಜನಿಸಿದವರು ತಮ್ಮ ಜನ್ಮ ದಿನಾಂಕ ಮತ್ತು ಜನ್ಮಸ್ಥಳದ ದಾಖಲೆಗಳ ಜೊತೆಯಲ್ಲಿ ತಮ್ಮ ಇಬ್ಬರೂ ಪೋಷಕರ ಜನ್ಮ ದಿನಾಂಕ ಮತ್ತು ಜನ್ಮಸ್ಥಳದ ದಾಖಲೆಗಳನ್ನು ಸಲ್ಲಿಸಬೇಕು ಎಂದು ಆಯೋಗವು ಹೇಳಿತ್ತು. ಅಂದರೆ ಈ ಮೂಲಕ, ಪೌರತ್ವ ಕಾಯ್ದೆ, 2019ರ ಮೂಲಕ ಜಾರಿ ಮಾಡಲಾದ ಆದರೆ ಮುಂದೆ ಸ್ಥಗಿತಗೊಂಡಿದ್ದ, ರಾಷ್ಟ್ರೀಯ ಪೌರತ್ವ ದಾಖಲಾತಿ(ಎನ್‌ಆರ್‌ಸಿ–NRC)ಯನ್ನು ಮುಂದುವರೆಸಲು ಹಿಂಬಾಗಿಲಿನ ಪ್ರವೇಶದ ಪ್ರಯತ್ನವನ್ನು ನಡೆಸುತ್ತಿದೆಯೇ ಎಂಬ ಆತಂಕವು ಜನರಲ್ಲಿ ಆಳವಾಗಿ ಮನೆಮಾಡಿದೆ. ಇದಲ್ಲದೆ, ಆಧಾರ್ ಕಾರ್ಡ್, ಪಡಿತರ ಚೀಟಿ ಮತ್ತು ಎಲ್ಲಕ್ಕಿಂತ ಮುಖ್ಯವಾಗಿ ಮತದಾರರ ಚೀಟಿ ಊರ್ಜಿತ ದಾಖಲೆಗಳಲ್ಲ ಎಂದು ಆಯೋಗವು ಆದೇಶ ನೀಡಿದೆ. ಚುನಾವಣಾ ಆಯೋಗವು ತಾನೇ ಫೋಟೋ ಲಗತ್ತಿಸಿ ನೀಡಿರುವ ಮತದಾರರ ಗುರುತಿನ ಚೀಟಿಯನ್ನು ಮೂಲಭೂತ ದಾಖಲೆ ಎಂದು ಒಪ್ಪುವುದಿಲ್ಲ ಎಂದಿರುವುದೇ ಬಹುದೊಡ್ಡ ವಿಪರ್ಯಾಸವಾಗಿದೆ. ಆಯೋಗವು ಈ ಹಿಂದೆ ಅನುಮತಿಸಿದ್ದ 11 ದಾಖಲೆಗಳ ಜೊತೆಯಲ್ಲಿ ಆಧಾರ್ ಕಾರ್ಡ್‌ನ್ನೂ ಪರಿಗಣಿಸುವಂತೆ ಸರ್ವೋಚ್ಚ ನ್ಯಾಯಾಲಯವು ಇತ್ತೀಚೆಗೆ ನಿರ್ದೇಶಿಸಿದೆ ಮತ್ತು ಆಯೋಗವು ಮತಪಟ್ಟಿಯಲ್ಲಿ ಸೇರಿಸದ 65 ಲಕ್ಷ ಜನರ ಪಟ್ಟಿಯನ್ನು ಕಾರಣ ಸಹಿತ ಬಿಡುಗಡೆ ಮಾಡಲೂ ಸಹ ಆಯೋಗಕ್ಕೆ ಆದೇಶಿಸಿದೆ. ಪೌರತ್ವದ ಮಾನದಂಡಗಳನ್ನು ಗುರುತಿಸುವುದು ಚುನಾವಣಾ ಆಯೋಗದ ಮುಖ್ಯ ಕರ್ತವ್ಯವಲ್ಲ; ಬದಲಿಗೆ, ಈ ಹಿಂದೆ, ತಾನೇ ಸೂಚಿಸಿರುವ ಗುರುತಿನ ದಾಖಲೆಗಳ ಮೂಲಕ ನಿಖರವಾದ ಮತದಾರರ ಪಟ್ಟಿಯನ್ನು ತಯಾರಿಸಿ, ಅದರ ಆಧಾರದ ಮೇಲೆ ಮುಕ್ತವಾದ ನ್ಯಾಯಸಮ್ಮತ ಚುನಾವಣೆಯನ್ನು ನಡೆಸುವುದು ಮಾತ್ರ ಎಂಬುದನ್ನು ಗಮನಿಸಬೇಕು. ಆದರೆ, ಅದಕ್ಕೆ ವ್ಯತಿರಿಕ್ತವಾಗಿ, ಎಸ್‌ಐಆರ್ ಮೂಲಕ ಆಯೋಗವು ತದ್ವಿರುದ್ಧವಾಗಿ ಕೆಲಸ ಮಾಡುತ್ತಿದೆ. ಇದರಿಂದ ಉಂಟಾಗುವ ಪರಿಣಾಮಗಳು ವಿನಾಶಕಾರಿಯಾಗಿರುತ್ತವೆ.

ಇಂದು ಕೋಟ್ಯಂತರ ಕೂಲಿ ಕಾರ್ಮಿಕರು ಹೊಟ್ಟೆಪಾಡಿಗಾಗಿ ವಲಸೆ ಹೋಗುವುದು ಸರ್ವೇಸಾಮಾನ್ಯವಾಗಿದೆ. ಹೀಗೆ ದುಡಿಯುವವರು ತಮ್ಮ ಮತದಾನದ ಹಕ್ಕನ್ನು ಉಳಿಸಿಕೊಳ್ಳಲು ದಾಖಲೆಗಳನ್ನು ಹಿಡಿದುಕೊಂಡು ದಿನಗಟ್ಟಲೆ ಕಚೇರಿಗಳಿಗೆ ಅಲೆದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಉದ್ಯೋಗವೇ ಹೊಂದಿಲ್ಲದವರು ಉದ್ಯೋಗ ಗುರುತಿನ ಚೀಟಿಯನ್ನೋ, ಪಿಂಚಣಿ ಆದೇಶವನ್ನೋ ಎಲ್ಲಿಂದ ತರಬಲ್ಲರು? 1987ಕ್ಕಿಂತ ಹಿಂದಿನ ಕಾಲದಲ್ಲಿ ಕೆಲವೇ ಕೆಲವು ಜನರು ಬ್ಯಾಂಕ್ ಖಾತೆಯನ್ನೋ ಅಥವಾ ಅಂಚೆ ಖಾತೆಯನ್ನೋ ಅಥವಾ ವಿಮಾ ಪಾಲಿಸಿಯನ್ನೋ ಹೊಂದಿರುತ್ತಿದ್ದರು. ಉಳಿದವರ ಪಾಡೇನು? ಅನೇಕರ ಬಳಿ ಜನನ ಪ್ರಮಾಣಪತ್ರಗಳೇ ಲಭ್ಯವಿಲ್ಲ. ಶಿಕ್ಷಣದಿಂದಲೇ ವಂಚಿತರಾದವರು ಶೈಕ್ಷಣಿಕ ಪ್ರಮಾಣಪತ್ರವನ್ನು ತರುವುದಾದರೂ ಎಲ್ಲಿಂದ? ಮತ್ತೆ, ಬಹುಪಾಲು ಜನರು ಬಡತನವನ್ನೇ ಹಾಸಿಹೊದ್ದು ಮಲಗಿರುವವರು. ಇಂದಿನ ಪರಿಸ್ಥಿತಿಯಲ್ಲಿ ಅವರು ಹೊಂದಿರಲಾಗದ ದಾಖಲೆಗಳಿಗಾಗಿ ಆಯೋಗವು ಅವರನ್ನು ಪೀಡಿಸುತ್ತಿದೆ. ಈ ವಿಷಯದಲ್ಲಿ ಅತಿ ಹೆಚ್ಚು ತೊಂದರೆಯನ್ನು ಅನುಭವಿಸುವವರು ಬುಡಕಟ್ಟು ಸಮುದಾಯಗಳು, ಇತರ ಹಿಂದುಳಿದ ವರ್ಗಗಳು ಮತ್ತು ಧಾರ್ಮಿಕ ಅಲ್ಪಸಂಖ್ಯಾತ ಅವಿದ್ಯಾವಂತ ಬಡಜನರು. ಅಸ್ಸಾಂನಲ್ಲಿ ಎನ್‌ಆರ್‌ಸಿ ಹೆಸರಿನಲ್ಲಿ 19 ಲಕ್ಷ ಹಿಂದೂಗಳ ಮತ್ತು ಮುಸ್ಲಿಮರನ್ನೆಲ್ಲಾ ಒಳಗೊಂಡ ಅಮಾಯಕ ಜನರ ಬದುಕನ್ನು ಅಸ್ತವ್ಯಸ್ತಗೊಳಿಸಿದಂತೆ, ಬಿಹಾರದಲ್ಲಿಯೂ ಸಹ, ಈ ತೀವ್ರ ಪರಿಷ್ಕರಣೆಯ ಮೂಲಕ, 65 ಲಕ್ಷ ಜನರ ಮತ್ತು ಅವರ ಲಕ್ಷಾಂತರ ಮಕ್ಕಳ ಬದುಕನ್ನು ದುರ್ಭರಗೊಳಿಸುವ ಒಂದು ದುಷ್ಟ ಕುತಂತ್ರವು




ನಡೆಯುತ್ತಿದೆ.

### ದೇಶಾದ್ಯಂತ ಬಿಹಾರದ ಮಾದರಿ

ಬಿಹಾರದಂತೆಯೇ ಇಂತಹ ಮತಪಟ್ಟಿ ಪರಿಷ್ಕರಣೆಯನ್ನು ದೇಶಾದ್ಯಂತ ನಡೆಸಲಾಗುವುದು ಎಂದು ಚುನಾವಣಾ ಆಯೋಗವು ಘೋಷಿಸಿದೆ. ಅಂದರೆ, ಇಡೀ ದೇಶದ ಜನತೆಯನ್ನು ಬೆದರಿಸುವ ಪ್ರಕ್ರಿಯೆ ಈಗಾಗಲೇ ಪ್ರಾರಂಭವಾಗಿದೆ. ಜೊತೆಗೆ, ಇತ್ತೀಚೆಗೆ ಮುಕ್ತಾಯವಾದ ಕೆಲವು ರಾಜ್ಯ ವಿಧಾನಸಭಾ ಚುನಾವಣೆಗಳಲ್ಲಿ, ಮತಪಟ್ಟಿಯಲ್ಲಿ ಲಕ್ಷಾಂತರ ನಕಲಿ ಮತದಾರರ ಸೇರ್ಪಡೆ, ನಕಲಿ ಮತದಾನ, ನಕಲಿ ಮತ್ತು ಅಮಾನ್ಯ ವಿಳಾಸಗಳಿರುವುದು, ಮಷಿನ್ ರೀಡಬಲ್ ಫಾರ್ಮಾಟ್‌ನಲ್ಲಿ ಡಿಜಿಟಲ್ ಮತ ಪಟ್ಟಿಯನ್ನು ವಿರೋಧ ಪಕ್ಷದೊಂದಿಗೆ ಆಯೋಗವು ಹಂಚಿಕೊಳ್ಳಲು ನಿರಾಕರಿಸಿರುವುದು, ಮತದಾನದ ಸಮಯವು ಮುಗಿದ ನಂತರ ನಡೆದಿರುವ ಮತದಾನ ಪ್ರಕ್ರಿಯೆಯ ಸಿಸಿಟಿವಿ ದೃಶ್ಯಾವಳಿಗಳನ್ನು ನೀಡಲೂ ಸಹ ಆಯೋಗವು ಒಪ್ಪದಿರುವುದು ಮತ್ತು ಇನ್ನಿತರ ಹಲವು ಅಕ್ರಮಗಳ ಬಗ್ಗೆ ಆರೋಪಗಳು ಬಹಳಷ್ಟು ಧೂಳನ್ನು ಎಬ್ಬಿಸಿವೆ.

ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರದ ವ್ಯಾಪ್ತಿಯ ಮಹದೇವಪುರ ವಿಧಾನ ಸಭಾ ಕ್ಷೇತ್ರದಲ್ಲಿ 3 ಮಂದಿ ವಾಸಿಸಲು ಸಾಧ್ಯವಾಗುವ ಮನೆಯ ವಿಳಾಸದಲ್ಲಿ 80 ಮತದಾರರು ದಾಖಲಾಗಿರುವ, ಒಬ್ಬನೇ ವ್ಯಕ್ತಿ ಹಲವಾರು ಮತಗಟ್ಟೆಗಳ ಪಟ್ಟಿಯಲ್ಲಿ ಇರುವುದು – ಇಂತಹ ವಿದ್ಯಮಾನಗಳಿಗೆ ಚುನಾವಣಾ ಆಯೋಗದಿಂದ ಯಾವುದೇ ಒಪ್ಪತಕ್ಕ ವಿವರಣೆ ಲಭ್ಯವಾಗಿಲ್ಲ. ಅದರ ತಪ್ಪನ್ನು ಎತ್ತಿ ತೋರಿಸಿದಾಗ, ಅದನ್ನು ಸರಿಪಡಿಸಿಕೊಳ್ಳುವುದನ್ನು ಬಿಟ್ಟು ಪ್ರಶ್ನೆ ಮಾಡಿದವರನ್ನೇ ಕಡೆಗಣಿಸಿ ಮತ್ತು ಅಂತಿಮವಾಗಿ ಅವರನ್ನೇ ಬೆದರಿಸಿ, ಮೌನವಾಗಿಸುವ ಕೆಲಸವನ್ನು ಚುನಾವಣಾ ಆಯೋಗವು




ಮಾಡುತ್ತಿದೆ. ಹಿಂದೆ ಚುನಾವಣಾ ಆಯುಕ್ತರ ಆಯ್ಕೆ ಸಮಿತಿಯಲ್ಲಿ ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರು ಕಡ್ಡಾಯವಾಗಿ ಇದ್ದರು. ಆದರೆ, ಎರಡು ವರ್ಷಗಳ ಹಿಂದೆ ಕೇಂದ್ರ ಬಿಜೆಪಿ ಸರ್ಕಾರವು ಚುನಾವಣಾ ಆಯುಕ್ತರ ನೇಮಕಾತಿ ನಿಯಮವನ್ನು ಬದಲಿಸಿ, ಪ್ರಧಾನಿ, ಒಬ್ಬ ಸಂಪುಟ ದರ್ಜೆಯ ಸಚಿವರು ಮತ್ತು ವಿರೋಧ ಪಕ್ಷದ ನಾಯಕರಿರುವ ಸಮಿತಿಯು ಚುನಾವಣಾ ಆಯುಕ್ತರನ್ನು ಆಯ್ಕೆ ಮಾಡಬೇಕು ಎನ್ನುವ ಕಾಯ್ದೆಯನ್ನು ಜಾರಿ ಮಾಡಿದೆ. ಇದರಿಂದಾಗಿ, ಸಮಿತಿಯು ಆಯ್ಕೆ ಮಾಡುವ ಆಯುಕ್ತರು ಸರ್ಕಾರದ ಹೌದಪ್ಪಗಳಾಗುವ ಸಾಧ್ಯತೆಯೇ ಹೆಚ್ಚು ಮತ್ತು ಒಂದು ತಟಸ್ಥ ಸಾಂವಿಧಾನಿಕ ಅಂಗ ಸಂಸ್ಥೆಯಾಗಿ ಚುನಾವಣಾ ಆಯೋಗವು ಕಾರ್ಯ ನಿರ್ವಹಿಸಬೇಕು ಎಂಬ ಜನತಾಂತ್ರಿಕ ಆಶಯವು ಇದರಿಂದ ಮಣ್ಣು ಪಾಲಾಗಿದೆ. ಇಲ್ಲದಿದ್ದರೆ, ವಿರೋಧ ಪಕ್ಷಗಳು ಚುನಾವಣಾ ಆಯೋಗದ ನಡೆವಳಿಕೆಯನ್ನು ಕಟುವಾಗಿ ವಿಮರ್ಶಿಸಿದಾಗ, ಆಳುವ ಬಿಜೆಪಿ ಅದಕ್ಕೆ ಪ್ರತಿಕ್ರಿಯೆ ನೀಡುವುದು ಏನನ್ನು ಸೂಚಿಸುತ್ತದೆ?

### ಜನತೆಯನ್ನು ಒಡೆದು ಆಳುವ ಷಡ್ಯಂತ್ರ!

ಈ ಬೆಳವಣಿಗೆಗಳು ಏಕೆ ನಡೆಯುತ್ತಿವೆ? ದೇಶದ ಜನತೆಯ ಬದುಕಿನ ಪ್ರತಿಯೊಂದು ಅಂಶವೂ ಇಂದು

**ತಮ್ಮ ಶೋಷಣಾಯುಕ್ತ ಆಳ್ವಿಕೆಯನ್ನು ಹೇಗಾದರೂ ಮಾಡಿ ಮುಂದುವರೆಸಿಕೊಂಡು ಹೋಗಲು ಆಳುವ ವರ್ಗ ರಚಿಸಿರುವ ಹೀನ ವಿನ್ಯಾಸಗಳಲ್ಲಿ ಎಸ್‌ಐಆರ್ ಕೂಡಾ ಒಂದು. ಅಸಹಾಯಕ ದುಡಿಯುವ ಜನರ ಪೌರತ್ವವನ್ನೇ ನಿರಾಕರಿಸಿ, ಅವರನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸಲು ಅದೀಗ ಚುನಾವಣಾ ಆಯೋಗದ ದುರ್ಬಳಕೆ ಮಾಡುತ್ತಿದೆ.**

ತೀವ್ರ ಬಿಕ್ಕಟ್ಟನ್ನು ಎದುರಿಸುತ್ತಿದೆ. ನಿರುದ್ಯೋಗ ತಾಂಡವವಾಡುತ್ತಿದೆ, ಉದ್ಯೋಗ ನೇಮಕಾತಿ ಸ್ಥಗಿತವಾಗಿದೆ, ಕೈಗಾರಿಕೆಗಳಿಂದ ದೊಡ್ಡ ಸಂಖ್ಯೆಯಲ್ಲಿ ದುಡಿಯುವವರ ವಜಾ ಮತ್ತು ವೇತನ ಕಡಿತಗಳು ನಿರಂತರವಾಗಿ ನಡೆಯುತ್ತಿವೆ, ಬೆಳೆದ ಬೆಳೆಗಳಿಗೆ ನ್ಯಾಯಯುತ ಬೆಲೆ ಸಿಗುತ್ತಿಲ್ಲ, ಗೊಬ್ಬರ, ಬೀಜಗಳು ಮತ್ತು ಕೀಟನಾಶಕಗಳಂತಹ ಒಳಸುರಿಗಳ ಬೆಲೆಗಳು ಗಗನ ಮುಟ್ಟುತ್ತಿವೆ ಮತ್ತು ಸಾಲದಲ್ಲಿ ಮುಳುಗಿರುವ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ, ಕೈಗೆಟುಕದ ಜೀವನ ವೆಚ್ಚವು ಸಾಮಾನ್ಯ ಜನರನ್ನು ದಿಕ್ಕೆಡುವಂತೆ ಮಾಡಿದೆ, ಭ್ರಷ್ಟಾಚಾರಕ್ಕಂತೂ ಮಿತಿಯೇ ಇಲ್ಲವಾಗಿದೆ ಮತ್ತು ಮಹಿಳೆಯರ ಮೇಲಿನ ದೌರ್ಜನ್ಯವು ದಿನನಿತ್ಯದ ವಿದ್ಯಮಾನವಾಗಿದೆ. ಜೊತೆಗೆ, ಸಮಾಜದ ಸಂಸ್ಕೃತಿ ಅವನತಿಯತ್ತ ಸಾಗುತ್ತಿದೆ. ಈಂತಹ ಘೋರ ಪರಿಸ್ಥಿತಿಯಲ್ಲಿ ಶೋಷಿತ–ದಮನಿತ ಜನತೆ ಸಿಡಿದೆದ್ದು, ಒಗ್ಗೂಡಿ ತನ್ನ ವಿರುದ್ಧ ಪ್ರತಿಭಟನೆಯ ಹಾದಿ ಹಿಡಿಯದಿರಲಿ ಎಂದೇ, ಆಳುವ ಬಂಡವಾಳಶಾಹಿ ವರ್ಗವು ಜನರ ನಡುವೆ ಒಡಕನ್ನು ಉಂಟು ಮಾಡಲು ಸತತವಾಗಿ ಪ್ರಯತ್ನಿಸುತ್ತಲೇ ಇದೆ. ಈ ನಿಟ್ಟಿನಲ್ಲಿ ಧರ್ಮದ, ಜನಾಂಗೀಯತೆಗಳ ಆಧಾರದಲ್ಲಿ ಜನೈಕ್ಯತೆಯನ್ನು ಮುರಿಯಲು ಎಸ್‌ಐಆರ್ ಒಂದು ಹುನ್ನಾರ. ಅದರಲ್ಲಿ ಅದು ಯಶಸ್ವಿಯಾದರೆ, ಆಗ ಬಂಡವಾಳಶಾಹಿ ಶೋಷಣೆಯು ಅನಿರ್ಬಂಧಿತವಾಗಿ ಮುಂದುವರಿಯಲು ಸಾಧ್ಯವಾಗುತ್ತದೆ. ಅಷ್ಟಲ್ಲದೆ, ತನಗೆ ಮತ ಹಾಕದವರ ಹಕ್ಕನ್ನೇ ಕಿತ್ತುಕೊಳ್ಳುವ ಬಿಜೆಪಿಯ ಪಿತೂರಿಯೂ ಇಲ್ಲಿದೆ.

ಈ ಪರಿಸ್ಥಿತಿಯಲ್ಲಿ ಸಂಸದೀಯ ವಿರೋಧ ಪಕ್ಷಗಳ ಪಾತ್ರವು ನಿರುತ್ಸಾಹದಾಯಕವಾಗಿದೆ. ಅವುಗಳ ಪ್ರತಿಭಟನೆ ಕೇವಲ ಚುನಾವಣಾ ಹಿತಾಸಕ್ತಿಗೆ ಸೀಮಿತವಾಗಿದೆ. ಮತಗಳ್ಳತನ ನಡೆದಿದೆ ನಿಜ, ಆದರೆ ಇದು ಕೇವಲ ಅಲ್ಪಸಂಖ್ಯಾತ ಮತಗಳನ್ನು ಮಾತ್ರವಲ್ಲ, ಬಹುಸಂಖ್ಯಾತ ಸಮುದಾಯಕ್ಕೆ ಸೇರಿರುವ ಅಸಂಖ್ಯಾತ ಜನರ ಪೌರತ್ವ ಹಕ್ಕುಗಳನ್ನು ದೋಚುವಷ್ಟು ಸಹ ಅಪಾಯಕಾರಿಯಾಗಿದೆ. ಆದ್ದರಿಂದಲೇ ಇದನ್ನು NRC ಯನ್ನು ಹಿಂಬಾಗಿಲಿನಿಂದ ಅನುಷ್ಠಾನಗೊಳಿಸುವ ಪ್ರಯತ್ನವೆಂದು ಸರಿಯಾಗಿಯೇ ಹೇಳಲಾಗುತ್ತಿದೆ. ಆ ಪಕ್ಷಗಳು ಬಿಜೆಪಿಯನ್ನು ಎದುರಿಸಲು ಜಾತಿ ರಾಜಕೀಯ ಮತ್ತು ಸೌಮ್ಯ ಕೋಮುವಾದದಲ್ಲಿ ತೊಡಗಿವೆ.

3ನೇ ಪುಟಕ್ಕೆ....

# ಆರ್ಥಿಕತೆಯ ಮಿಲಿಟರೀಕರಣ ಮತ್ತು ಸಾಮ್ರಾಜ್ಯಶಾಹಿ ಯುದ್ಧ

## ಕಾಮ್ರೇಡ್ ಶಿವದಾಸ್ ಘೋಷ್ ವ್ಯಾಖ್ಯಾನ

ಅಮೆರಿಕಾದ ಆರ್ಥಿಕತೆಯು ಒಂದು ಬಂಡವಾಳಶಾಹಿ ಆರ್ಥಿಕತೆಯಾಗಿದ್ದು, ಹೆಚ್ಚುವರಿ ಬಂಡವಾಳದ ಸಮಸ್ಯೆಯೇ ಅದರ ಸಮಸ್ಯೆ: ಅಂದರೆ, ಹೆಚ್ಚುವರಿ ಹಣಕಾಸು ಬಂಡವಾಳದ ಸಮಸ್ಯೆ.....ಬಂಡವಾಳಶಾಹಿ ವ್ಯವಸ್ಥೆಯಲ್ಲಿ, ಜನಸಾಮಾನ್ಯರ ಆದಾಯವು ಈ ಹೆಚ್ಚುವರಿ ಬಂಡವಾಳಕ್ಕೆ ಅನುಗುಣವಾಗಿ ಹೆಚ್ಚಾಗಲು ಸಾಧ್ಯವಿಲ್ಲ. ನಿಜ, ಹಣದ ರೂಪದಲ್ಲಿ ಅವರ ಆದಾಯ ಸ್ವಲ್ಪ ಹೆಚ್ಚಾಗಬಹುದು, ಆದರೆ ಆಗಲೂ ಸಹ ನಿಜವಾದ ಆದಾಯ ಹೆಚ್ಚಾಗುವುದಿಲ್ಲ; ಬದಲಾಗಿ ಅದು ಇಳಿಯುತ್ತದೆ. ಮತ್ತು ಹಣದುಬ್ಬರವು ಗಂಭೀರ ಪ್ರಮಾಣವನ್ನು ತಲುಪಿದರೆ, ಸರಕುಗಳ ಬೆಲೆಗಳು ವಿಪರೀತವಾಗಿ ಏರುತ್ತವೆ ಮತ್ತು ಜನಜೀವನ ಅಸಹನೀಯವಾಗುತ್ತದೆ. ಹೆಚ್ಚುವರಿ ಹಣದ ಕ್ರೋಢೀಕರಣ ಎಂದರೆ ಉದ್ಯಮಗಳಲ್ಲಿ ಹೂಡಿಕೆಯ ದಾರಿ ಮುಚ್ಚಿ ಹೋಗಿದೆ ಎಂದರ್ಥ. ಹೀಗಾದಾಗ, ಸಹಜವಾಗಿ ಉತ್ಪಾದನೆ ಕುಸಿಯುತ್ತದೆ. ಇದು ಅನಿವಾರ್ಯವಾಗಿ ನಿರುದ್ಯೋಗದ ಸಮಸ್ಯೆಯನ್ನು ಉಲ್ಬಣಗೊಳಿಸುತ್ತದೆ. ಇದರ ಜೊತೆಗೆ, ಜನಸಂಖ್ಯೆಯ ಹೆಚ್ಚಳವು ಒಂದು ಹೆಚ್ಚುವರಿ ಸಮಸ್ಯೆಯಾಗುತ್ತದೆ. ವಾದಕ್ಕಾಗಿ ನಾವು ಜನಸಂಖ್ಯೆ ಸ್ಥಿರವಾಗಿ ಉಳಿದಿದೆ ಎಂದು ಭಾವಿಸಿದರೂ, ಆಗಲೂ, ಅಸ್ತಿತ್ವದಲ್ಲಿರುವ ಜನಸಂಖ್ಯಾ ಮಟ್ಟದಲ್ಲಿ, ನಿರುದ್ಯೋಗದ ಸಮಸ್ಯೆ ತೀವ್ರಗೊಳ್ಳುತ್ತಲೇ ಇರುತ್ತದೆ......ಆದ್ದರಿಂದ, ಇಂತಹ ದುರಂತವನ್ನು ತಪ್ಪಿಸುವ ತುರ್ತು ಅವಶ್ಯಕತೆಯಿಂದ, ಬಂಡವಾಳಿಗರು ಕೃತಕ ವಿಧಾನಗಳಿಂದ ಮಾರುಕಟ್ಟೆಯಲ್ಲಿ ಒಂದು ಏರಿಕೆಯನ್ನು ಸೃಷ್ಟಿಸಬೇಕಾಗುತ್ತದೆ. ಅಂತಹ ಒಂದು ನಿರ್ದಿಷ್ಟ ಪರಿಸ್ಥಿತಿಯಲ್ಲಿ ಮಿಲಿಟರೀಕರಣದ ಪ್ರವೃತ್ತಿಯು ಕಾಣಿಸಿಕೊಳ್ಳುತ್ತದೆ.

### ಆರ್ಥಿಕತೆಯ ಮಿಲಿಟರೀಕರಣ

ಉತ್ಪಾದನೆಯು ಒಂದು ನಿರ್ದಿಷ್ಟ ಮಟ್ಟದಲ್ಲಿ ದೀರ್ಘಕಾಲದವರೆಗೆ ಸ್ಥಿರವಾಗಿರಲು ಸಾಧ್ಯವಿಲ್ಲ. ಉತ್ಪಾದನೆಯು ಹೆಚ್ಚಾಗದಿದ್ದರೆ, ಅದು ಕಡಿಮೆಯಾಗುವುದು ಖಚಿತ, ಏಕೆಂದರೆ, ಬಂಡವಾಳಶಾಹಿ ವ್ಯವಸ್ಥೆಯಲ್ಲಿ, 'ಮಾರುಕಟ್ಟೆ'ಗೆ ಬೇಡಿಕೆಯು ಹೆಚ್ಚಾಗುತ್ತದೆ ಅಥವಾ ಕಡಿಮೆಯಾಗುತ್ತದೆ. ಜೊತೆಗೆ, ಬಂಡವಾಳಶಾಹಿ ವ್ಯವಸ್ಥೆಯಲ್ಲಿ, ಈ ಬೇಡಿಕೆಯನ್ನು ಮನುಷ್ಯನ ನಿಜವಾದ ಅಗತ್ಯಗಳ ಮತ್ತು ಅವಶ್ಯಕತೆಗಳ ಮಾನದಂಡದಿಂದ ನಿರ್ಧರಿಸಲಾಗುವುದಿಲ್ಲ; ಬದಲಾಗಿ, ಒಬ್ಬ ಮನುಷ್ಯನ 'ಅಗತ್ಯಗಳನ್ನು' ಅವನ ಕೊಳ್ಳುವ ಶಕ್ತಿಯಿಂದ ಮಾತ್ರ ನಿರ್ಧರಿಸಲಾಗುತ್ತದೆ. ಅವನ ಆದಾಯ ಮತ್ತು ಮಾರುಕಟ್ಟೆ ಬೆಲೆಗಳ ಪ್ರಕಾರ ಕೊಳ್ಳುವ ಶಕ್ತಿಯನ್ನು ಗಣನೆಗೆ ತೆಗೆದುಕೊಂಡು ಅವನ 'ಅಗತ್ಯಗಳನ್ನು' ನಿರ್ಧರಿಸಲಾಗುತ್ತದೆ. ಇದರ ಜೊತೆಗೆ, ಉತ್ಪಾದನೆಯು ಕುಸಿದಾಗ, ಸರಕುಗಳ ಮಾರುಕಟ್ಟೆ ಬೆಲೆಗಳು ಏರುತ್ತವೆ ಮತ್ತು ಕಡಿಮೆ ಆದಾಯದ ಗುಂಪಿನ ಜನರ ಮತ್ತು ನಿರುದ್ಯೋಗಿಗಳ ಕೊಳ್ಳುವ ಶಕ್ತಿ ಸಹಜವಾಗಿ ಮತ್ತಷ್ಟು ಕಡಿಮೆಯಾಗುತ್ತದೆ. ಆದ್ದರಿಂದ, ಮಾರುಕಟ್ಟೆ ಹೆಚ್ಚು ಹೆಚ್ಚು ಕುಗ್ಗುತ್ತದೆ. ಅದಕ್ಕಾಗಿಯೇ, ಬಂಡವಾಳಶಾಹಿ ಆರ್ಥಿಕತೆಯ ನಿಯಮದ ಪ್ರಕಾರ, ಇತರ ದೇಶಗಳಲ್ಲಿ ಬಂಡವಾಳವನ್ನು ಹೂಡಿಕೆ ಮಾಡಲು ಒಂದು ಮಾರ್ಗ ಇರಬೇಕು. ಎರಡನೆಯದಾಗಿ, ಬಂಡವಾಳಶಾಹಿ ದೇಶದಲ್ಲಿ ಎಷ್ಟೇ ಕೈಗಾರಿಕೆಗಳು, ಎಷ್ಟೇ ಉದ್ಯೋಗಾವಕಾಶಗಳು ಇದ್ದರೂ, ಇವೆಲ್ಲವೂ ಎಲ್ಲರಿಗೂ ಉದ್ಯೋಗವನ್ನು ಒದಗಿಸಲು ಸಾಧ್ಯವಿಲ್ಲ. ಹಾಗೆಂದು, ಇಡೀ ದೇಶ ನಿರುದ್ಯೋಗಿಗಳಿಂದ ತುಂಬಿರುವುದನ್ನು ಸಹ ಅವರು ಒಪ್ಪಿಕೊಳ್ಳಲು ಸಾಧ್ಯವಿಲ್ಲ, ಏಕೆಂದರೆ, ಅದು ಮತ್ತಷ್ಟು ಆಳವಾದ ಬಿಕ್ಕಟ್ಟನ್ನು ಸೃಷ್ಟಿಸುತ್ತದೆ.

ಆದ್ದರಿಂದ, ಸಾಕಷ್ಟು ಕೈಗಾರಿಕೀಕರಣದ ಮೂಲಕ ಸಾಮಾನ್ಯ ರೀತಿಯಲ್ಲಿ ಉತ್ಪಾದನೆಯನ್ನು ಹೆಚ್ಚಿಸಲು ಅವರಿಗೆ ಸಾಧ್ಯವಾಗದಿದ್ದಾಗ, ಎಲ್ಲಾ ಬಂಡವಾಳಶಾಹಿ ದೇಶಗಳ ಆರ್ಥಿಕತೆಗಳಲ್ಲಿ ಶಸ್ತ್ರಾಸ್ತ್ರಗಳ ಉತ್ಪಾದನೆಗೆ ಒಂದು ಒತ್ತಡ, ಕೈಗಾರಿಕೆಗಳ ಮಿಲಿಟರೀಕರಣದ ಪ್ರವೃತ್ತಿಯು ಕಾಣಿಸಿಕೊಳ್ಳುತ್ತದೆ. ಇದರ ಪ್ರಯೋಜನವೆಂದರೆ, ತಾತ್ಕಾಲಿಕವಾಗಿಯಾದರೂ, ಈ ಕ್ರಮದಿಂದ ಮಾರುಕಟ್ಟೆಯಲ್ಲಿ ಕೃತಕ ಏರಿಕೆಯನ್ನು ಸೃಷ್ಟಿಸಲು ಸಾಧ್ಯವಾಗುತ್ತದೆ. ಮತ್ತೆ, ಮಾರುಕಟ್ಟೆಯಲ್ಲಿ ಏರಿಕೆ ಇಲ್ಲದೆ, ಕೈಗಾರಿಕೆಗಳು ನಡೆಯಲು ಸಾಧ್ಯವಿಲ್ಲ, ಉತ್ಪಾದನೆ ಹೆಚ್ಚಾಗುವುದಿಲ್ಲ ಮತ್ತು ಬಂಡವಾಳ ಹೂಡಿಕೆಗೆ ಯಾವುದೇ ಪ್ರೇರಣೆ ಇರುವುದಿಲ್ಲ; ಪರಿಣಾಮವಾಗಿ ಕಾರ್ಖಾನೆಗಳಲ್ಲಿ ಪಾಳಿಗಳ (ಶಿಫ್ಟ್) ಸಂಖ್ಯೆ ಕಡಿಮೆಯಾಗುತ್ತದೆ, ಕಾರ್ಖಾನೆಗಳು ಮುಚ್ಚುತ್ತವೆ ಮತ್ತು ನಿರುದ್ಯೋಗಿಗಳ ಸಂಖ್ಯೆ ಮತ್ತಷ್ಟು ಹೆಚ್ಚಾಗುತ್ತದೆ......ನಂತರ ಒಂದು ದಿನ ಹೆಚ್ಚುತ್ತಿರುವ ನಿರುದ್ಯೋಗದ ಪ್ರಭಾವದಿಂದ ಇಡೀ ಉತ್ಪಾದನಾ ವ್ಯವಸ್ಥೆಯೇ ಕುಸಿಯಬಹುದು. ಮತ್ತು ಉತ್ಪಾದನೆ ಹಾಗೂ ಕೈಗಾರಿಕೆಗಳನ್ನು ನಡೆಸಿಕೊಂಡು ಹೋಗುವುದು ಅಸಾಧ್ಯವಾಗಬಹುದು.....

ಎಲ್ಲಾ ಕಡೆಗಳಿಂದ ಒತ್ತಡಕ್ಕೊಳಗಾಗಿ ಮತ್ತು ಹೆಚ್ಚುತ್ತಿರುವ ಬಿಕ್ಕಟ್ಟುಗಳಿಂದ ನಲುಗಿ, ಸಾಮ್ರಾಜ್ಯಶಾಹಿಯು ಹೆಚ್ಚು ಹೆಚ್ಚು ಮಿಲಿಟರೀಕರಣಗೊಂಡ ಆರ್ಥಿಕತೆಯತ್ತ ವಾಲುತ್ತಿದೆ. ಮತ್ತು ಆರ್ಥಿಕತೆ ಎಷ್ಟು ಹೆಚ್ಚು ಮಿಲಿಟರೀಕರಣವಾಗುತ್ತದೆಯೋ, ಸಾಮ್ರಾಜ್ಯಶಾಹಿಯು ತನ್ನ ಸಾಹಸೀ ಕೃತ್ಯಗಳಲ್ಲಿ ತೊಡಗಿಕೊಳ್ಳುವ ಪ್ರವೃತ್ತಿ ಅಷ್ಟೇ ಹೆಚ್ಚಾಗುತ್ತದೆ.....

.....ಕೈಗಾರಿಕೆಗಳ ಈ ಮಿಲಿಟರೀಕರಣದ ಅರ್ಥವೇನು? ಅಂದರೆ, ಬೇಡಿಕೆಗಳನ್ನಿಡುವುದು ಸರ್ಕಾರವೇ ಮತ್ತು ಉತ್ಪನ್ನಗಳನ್ನು ಖರೀದಿಸುವುದೂ ಸರ್ಕಾರವೇ. ಉತ್ಪನ್ನಗಳನ್ನು ಮಾರಾಟ ಮಾಡಲು ಮಾರುಕಟ್ಟೆ, ಅಂದರೆ, ಜನಸಾಮಾನ್ಯರ ಕೊಳ್ಳುವ ಶಕ್ತಿಯ ಮೇಲೆ ಅವಲಂಬಿತವಾಗಿರಬೇಕಾದ ಅಗತ್ಯವಿಲ್ಲ. ಕೇವಲ, ಸರ್ಕಾರದ ಮಿಲಿಟರಿ ಬಜೆಟ್ ಮಾತ್ರ ಹೆಚ್ಚುತ್ತಲೇ ಇರುತ್ತದೆ. ಆದ್ದರಿಂದ, ತಾತ್ಕಾಲಿಕವಾಗಿಯಾದರೂ, ಕೈಗಾರಿಕೆಗಳು ನಾವು ಆರ್ಥಿಕ ಹಿಂಜರಿತ ಎಂದು ಕರೆಯುವ ಪರಿಸ್ಥಿತಿಯಿಂದ–ಸರಕುಗಳಿಗೆ ಮಾರುಕಟ್ಟೆಯಿಲ್ಲ, ಬೇಡಿಕೆಗಳಿಲ್ಲ, ಕಾರ್ಮಿಕರಿಗೆ ಕೆಲಸವಿಲ್ಲದಂತಹ ಪರಿಸ್ಥಿತಿಯಿಂದ ಪಾರಾಗುತ್ತವೆ. ಆಗ ಪರಿಸ್ಥಿತಿ ಹೀಗಾಗುತ್ತದೆ: ಸರ್ಕಾರವು ಬಾಂಬರ್‌ಗಳ, ಫೈಟರ್‌ಗಳ ಮತ್ತು ಇತರ ಮಿಲಿಟರಿ ಉಪಕರಣಗಳ ಮತ್ತು ಯಂತ್ರಾಂಶಗಳ ತಯಾರಿಕೆಗೆ ಬೇಡಿಕೆಗಳನ್ನಿಡುತ್ತದೆ, ಬಂಡವಾಳಿಗರು ಅವನ್ನು ಉತ್ಪಾದಿಸುತ್ತಾರೆ ಮತ್ತು ಸರ್ಕಾರವೇ ಅವುಗಳನ್ನು ಖರೀದಿಸುತ್ತದೆ. ಮತ್ತು ಅದು ಜನರ ಕೊಳ್ಳುವ ಶಕ್ತಿಯ ಮೇಲೆ ಅವಲಂಬಿತವಾಗಿರಬೇಕಾಗಿಲ್ಲದ ಕಾರಣ, ಹೆಚ್ಚುತ್ತಿರುವ ಆರ್ಥಿಕ ಹಿಂಜರಿತದ ಒತ್ತಡದಿಂದ ಆರ್ಥಿಕತೆಯನ್ನು ಒಂದು ಹಂತದವರೆಗೆ ತಾತ್ಕಾಲಿಕವಾಗಿ ರಕ್ಷಿಸಬಹುದು.

ಆದರೆ ಅದರಲ್ಲಿ ಒಂದು ಅಂತರ್ಗತ ವೈರುಧ್ಯವಿದೆ. ಅದು ಹೀಗಿದೆ: ಹೆಚ್ಚೆಚ್ಚು ಮಿಲಿಟರಿ ಉಪಕರಣಗಳನ್ನು ಮತ್ತು ಶಸ್ತ್ರಾಸ್ತ್ರಗಳನ್ನು ಉತ್ಪಾದಿಸಿದಂತೆ, ಇವುಗಳನ್ನು ಉಪಯೋಗಿಸದಿದ್ದರೆ, ಉತ್ಪಾದಿಸಿದ ಯುದ್ಧ ಸಾಮಗ್ರಿಗಳ ನಿರಂತರ ಸಂಗ್ರಹಣೆಯಿಂದಾಗಿ ಆರ್ಥಿಕತೆಯಲ್ಲಿ ಒಂದು ನಿಶ್ಚಲತೆಯ ಪ್ರವೃತ್ತಿ ಕಾಣಿಸಿಕೊಳ್ಳುವುದು ಖಚಿತ; ಇದರ ಪರಿಣಾಮವಾಗಿ ಯುದ್ಧ ಕೈಗಾರಿಕೆಗಳನ್ನು ಒಂದೊಂದಾಗಿ ಮುಚ್ಚಬೇಕಾಗುತ್ತದೆ. ಮತ್ತೆ, ಸರ್ಕಾರವೂ ಸಹ ಈ ಸಾಮಗ್ರಿಗಳನ್ನು ಅಂತ್ಯವಿಲ್ಲದೆ ಮತ್ತು ಉದ್ದೇಶವಿಲ್ಲದೆ ಸಂಗ್ರಹಿಸಿಡಲೆಂದೇ ಖರೀದಿಸಲು ಸಾಧ್ಯವಿಲ್ಲ. ಅದಕ್ಕೆ ಯುದ್ಧ ಅವಶ್ಯಕ....

### ಉಸುಕಿನ ಮೇಲೆ ನಿಂತಿರುವ ಅಮೆರಿಕನ್ ಆರ್ಥಿಕತೆ

.....ಅಮೆರಿಕನ್ ಆರ್ಥಿಕತೆಯು ಯಾವುದೇ ಕ್ಷಣದಲ್ಲಿ ಕುಸಿದು ಬೀಳಬಹುದು ಎನ್ನುವಂತಿದೆ. ಅದರ ಇಡೀ ಆರ್ಥಿಕ ವ್ಯವಸ್ಥೆಯು ಯುದ್ಧ ಆರ್ಥಿಕತೆಯ ಮೇಲೆ ನಿಂತಿದೆ. ಪ್ರಸ್ತುತ ಅದರ ಆರ್ಥಿಕ ಸ್ಥಿರತೆಯನ್ನು ನಿಭಾಯಿಸುತ್ತಿರುವ ಯುದ್ಧದ ಪ್ರಕಾರವು ಸ್ಥಳೀಯ, ಭಾಗಶಃ, ತಾತ್ಕಾಲಿಕವಾದದ್ದು. ಅಂದರೆ, ಯುದ್ಧ ಸಾಮಗ್ರಿಗಳನ್ನು ಉಪಯೋಗಿಸಲು, ಅವರಿಗೆ ಸ್ಥಳೀಯ ಮತ್ತು ಭಾಗಶಃ ಯುದ್ಧಗಳು ಬೇಕು. ಈ ಮೂಲಭೂತ ಆರ್ಥಿಕ ವೈಶಿಷ್ಟ್ಯವು ಒಂದಾದ ಮೇಲೊಂದು ಬಿಕ್ಕಟ್ಟಿಗೆ ಕಾರಣವಾಗುತ್ತಿದೆ. ಇದು ಅಮೆರಿಕಾದ ಇಂದಿನ ಯುದ್ಧ ನೀತಿಯ ಮೂಲವಾಗಿದೆ.

> **ತಮ್ಮ ಕುಸಿಯುತ್ತಿರುವ ಆರ್ಥಿಕತೆಯನ್ನು ತಾತ್ಕಾಲಿಕವಾಗಿಯಾದರೂ ಕೃತಕವಾಗಿ ಉತ್ತೇಜಿಸಲು ಮಿಲಿಟರೀಕರಣಕ್ಕೆ ಮೊರೆ ಹೋಗುವುದೊಂದೇ ಸಾಮ್ರಾಜ್ಯಶಾಹಿಗಳ ಮುಂದಿರುವ ಏಕೈಕ ಮಾರ್ಗ. ವಿಶ್ವದಾದ್ಯಂತ ನಡೆಯುತ್ತಿರುವ ಯುದ್ಧಕ್ಕೆ ಮೂಲ ಕಾರಣ ಇದೇ. ಹಾಗಾಗಿಯೇ ಲೆನಿನ್ ಹೇಳಿದ್ದು: 'ಸಾಮ್ರಾಜ್ಯವಾದ ಯುದ್ಧಕ್ಕೆ ಜನ್ಮ ನೀಡುತ್ತದೆ.'**

...ಶಸ್ತ್ರಾಸ್ತ್ರ ಪೈಪೋಟಿ ಮತ್ತು ಯುದ್ಧಕ್ಕಾಗಿಯ ಸರ್ವಸಿದ್ಧತೆಗಳ ವಿಷಯದಲ್ಲಿ, ಸಾಮ್ರಾಜ್ಯಶಾಹಿಗಳು ತಮ್ಮ ಹಿಂದಿನ ಎಲ್ಲಾ ದಾಖಲೆಗಳನ್ನು ಮುರಿದಿದ್ದಾರೆ. ಸಮಾಜವಾದಿ ಶಿಬಿರದ ಸುತ್ತಲೂ ಸಾಮ್ರಾಜ್ಯಶಾಹಿಗಳು ನಿರ್ಮಿಸಿರುವ ಮಿಲಿಟರಿ ನೆಲೆಗಳು ಕ್ಷಣಮಾತ್ರದಲ್ಲಿ ಕಾರ್ಯಾಚರಣೆಗೆ ಸಿದ್ಧವಾಗಿರುವ ಸಾಮೂಹಿಕ ವಿನಾಶದ ಮಾರಣಾಂತಿಕ ಶಸ್ತ್ರಾಸ್ತ್ರಗಳಿಂದ ತುಂಬಿವೆ.... ಯುದ್ಧ ಎಂದರೆ ಕೇವಲ ವಿಶ್ವ ಯುದ್ಧವೇ? ಯಾರಾದರೂ ಯುದ್ಧದ ವಿರುದ್ಧ ಇದ್ದರೆ, ಅವರು ಕೇವಲ ವಿಶ್ವ ಯುದ್ಧದ ವಿರುದ್ಧ ಇದ್ದಾರೆ ಎಂದರ್ಥವೇ? ಸಾಮ್ರಾಜ್ಯಶಾಹಿಗಳಿಂದ ಅಲ್ಲಿ ಇಲ್ಲಿ ಹುಟ್ಟಿಕೊಂಡ ಈ ಸ್ಥಳೀಯ ಅಥವಾ ಭಾಗಶಃ ಯುದ್ಧಗಳು ಸಹ ಯುದ್ಧಗಳಲ್ಲವೇ? ಅಮೆರಿಕವು ಇತರ ರಾಷ್ಟ್ರಗಳ ಮೇಲೆ ಆಕ್ರಮಣ ಮಾಡುತ್ತಿರುವ ಮತ್ತು ಅವುಗಳನ್ನು ಪರಸ್ಪರ ಯುದ್ಧಕ್ಕೆ ತಳ್ಳುತ್ತಿರುವ ರೀತಿ, ಅಥವಾ ಅವುಗಳನ್ನು ಸಂಘರ್ಷ ಮತ್ತು ಯುದ್ಧಕ್ಕೆ ಎಳೆಯಲು, ಒಂದು ರಾಷ್ಟ್ರದ ಬಗ್ಗೆ ಮತ್ತೊಂದು ರಾಷ್ಟ್ರಕ್ಕೆ ಮಾಹಿತಿಯನ್ನು ಪೂರೈಸುತ್ತಿರುವುದು, ಇವು ಯುದ್ಧದ ಕುತಂತ್ರಗಳಲ್ಲವೇ?

.....ಜರ್ಮನಿಯ ಗೆಸ್ಟಾಪೋ(ನಾಝಿ ರಹಸ್ಯ ಪೊಲೀಸ್ ಪಡೆ) ಚಟುವಟಿಕೆಗಳು ಮತ್ತು ಪಂಚದಳ (ಆಂತರಿಕ ದ್ರೋಹಿ ಪಡೆ)ದ ಚಟುವಟಿಕೆಗಳು ನಾಗರಿಕತೆಯ ವಿರುದ್ಧದ ಗಂಭೀರ ಪಿತೂರಿಗಳೆಂದು ಕರೆಯಲ್ಪಡುತ್ತವೆ.....ಆದರೆ, ಅಮೆರಿಕಾ ಮಾಡದ ಯಾವುದೇ ಘೋರ ಅಪರಾಧವಿಲ್ಲ. ನಾಝಿಗಳನ್ನು ಯುದ್ಧಾಪರಾಧಿಗಳೆಂದು ಖಂಡಿಸಲಾಯಿತು.... ಇಂದು ಅಮೆರಿಕಾ ವಿಶ್ವದ ಅನೇಕ ದೇಶಗಳಲ್ಲಿ ಮಾಡುತ್ತಿರುವುದನ್ನು ನೋಡಿದರೆ, ಅದು ನಾಝಿಗಳೂ ನಾಚಿಕೊಳ್ಳುವಂತಿದೆ. ಇಂದು ಸಿಐಎ ಮತ್ತು ಎಫ್‌ಬಿಐ ಎಲ್ಲೆಡೆ ಮಾಡುತ್ತಿರುವುದಾದರೂ ಏನು? ಅವರು ತೊಡಗಿಸಿಕೊಳ್ಳದ ಯಾವುದೇ ರೀತಿಯ ಘೋರ ಕೃತ್ಯವಿದೆಯೇ? ಅವರು ವಿಶ್ವದಾದ್ಯಂತ ಎಲ್ಲಾ ರೀತಿಯ ದುಷ್ಕೃತ್ಯಗಳಲ್ಲಿ ತೊಡಗಿದ್ದಾರೆ – ರಾಜಕೀಯ ಕೊಲೆಗಳನ್ನು ಮಾಡುವುದು, ದಂಗೆಗಳನ್ನು ಆಯೋಜಿಸುವುದು, ಇತ್ಯಾದಿ. ಈ ಎಲ್ಲಾ ಚಟುವಟಿಕೆಗಳ ಏಕೈಕ ಉದ್ದೇಶವೆಂದರೆ ವಿಶ್ವದಾದ್ಯಂತ ಅಲ್ಲಿ ಇಲ್ಲಿ ಯುದ್ಧಭೀತಿಯನ್ನು ಮುಂದುವರೆಸಿಕೊಂಡು ಹೋಗುವುದು, ಸ್ಥಳೀಯ ಮತ್ತು ಭಾಗಶಃ ಯುದ್ಧಗಳನ್ನು ಆಯೋಜಿಸುವುದು, ಒಂದು ರಾಷ್ಟ್ರವನ್ನು ಮತ್ತೊಂದರೊಂದಿಗೆ ಸಂಘರ್ಷ ಮತ್ತು ಯುದ್ಧದಲ್ಲಿ ಸಿಕ್ಕಿಸುವುದು, ತನ್ಮೂಲಕ, ತನ್ನಲ್ಲಿ ಸಂಗ್ರಹವಾಗುತ್ತಿರುವ ಮತ್ತು ಬಳಕೆಯಲ್ಲಿಲ್ಲದ ಹಳೆಯ ಸಾಂಪ್ರದಾಯಿಕ ಶಸ್ತ್ರಾಸ್ತ್ರಗಳನ್ನು ವಿವಿಧ ದೇಶಗಳು ಖರೀದಿಸುವಂತೆ ಪ್ರೇರೇಪಿಸುವ ಮೂಲಕ ಅವನ್ನು ಬಳಸಬಹುದು. ಹಾಗಾಗಿ, ಯುದ್ಧಗಳು ಹೆಚ್ಚಾದಷ್ಟೂ, ವಿಶ್ವದಲ್ಲಿ ಹೆಚ್ಚು ಯುದ್ಧಭೀತಿ, ಯುದ್ಧಭೀತಿ ಹೆಚ್ಚಾದಷ್ಟೂ ಅವರಿಗೆ ಹೆಚ್ಚು ಲಾಭ!

.....ಸಾಮ್ರಾಜ್ಯಶಾಹಿ ಆಳ್ವಿಕ ಕೂಟಗಳ ರಕ್ತದಲ್ಲೇ ರಾಕ್ಷಸ ಗುಣವಿದೆ. ಮತ್ತು ಯಾವುದೇ ಸಾಮ್ರಾಜ್ಯಶಾಹಿ ದೇಶದಲ್ಲಿ, ಒಬ್ಬ ಆಳ್ವಿಕನು ವೈಯಕ್ತಿಕವಾಗಿ ದುರುಳನಲ್ಲದಿದ್ದರೂ ಸಹ, ಅವನಿಗೆ ಸಾಮ್ರಾಜ್ಯಶಾಹಿ ಆರ್ಥಿಕತೆ ಮತ್ತು ರಾಜಕೀಯದ ಅವಶ್ಯಕತೆಗಳಿಂದಾಗಿ ಯುದ್ಧಕ್ಕೆ ಸಿದ್ಧತೆ ನಡೆಸುವುದನ್ನು ಹೊರತುಪಡಿಸಿ ಬೇರೆ ಆಯ್ಕೆಯಿಲ್ಲ.

.....ದುರ್ಬಲ ಮತ್ತು ಹಿಂದುಳಿದ ಬಂಡವಾಳಶಾಹಿ ದೇಶಗಳ ಮೇಲೆ ಆರ್ಥಿಕ ಮತ್ತು ರಾಜಕೀಯ ಪ್ರಾಬಲ್ಯವನ್ನು ಸ್ಥಾಪಿಸಲು ಪ್ರಬಲ ಬಂಡವಾಳಶಾಹಿ ದೇಶಗಳ ನಡುವಿನ ಸ್ಪರ್ಧೆಯನ್ನು ಆಧರಿಸಿದ ವೈರುಧ್ಯವು ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಈ ಎಲ್ಲಾ ಸಂಗತಿಗಳು ಸಾಮ್ರಾಜ್ಯಶಾಹಿ ಯುಗದಲ್ಲಿ ಯುದ್ಧಗಳ ಅನಿವಾರ್ಯತೆಯ ಬಗ್ಗೆ ಲೆನಿನ್ ಅವರ ವಿಶ್ಲೇಷಣೆಯು ಮೊದಲಿನಂತೆಯೇ ಇನ್ನೂ ಪ್ರಸ್ತುತವಾಗಿದೆ ಎಂಬುದನ್ನು ನಿಸ್ಸಂದೇಹವಾಗಿ ತೋರಿಸುತ್ತವೆ.

....ವಿಶ್ವದಾದ್ಯಂತ ಸಮಾಜವಾದಿ ಕ್ರಾಂತಿಯು ವಿಜಯಶಾಲಿಯಾದಾಗ ಅಥವಾ ಪ್ರಸ್ತುತ ಸಮಾಜವಾದಿ ರಾಷ್ಟ್ರಗಳನ್ನು ಸುತ್ತುವರೆದಿರುವ ಬಂಡವಾಳಶಾಹಿಗಳ ಬದಲಿಗೆ, ವಿಶ್ವ ಸಮಾಜವಾದಿ ವ್ಯವಸ್ಥೆಯು, ಅಳಿದುಳಿದ ಕೆಲವು ಬಂಡವಾಳಶಾಹಿ ದೇಶಗಳನ್ನು ಸುತ್ತುವರಿಯುವಂತೆ ಆದಾಗ ಮಾತ್ರವೇ ಮಾನವ ಸಮಾಜದಿಂದ ಯುದ್ಧವನ್ನು ಶಾಶ್ವತವಾಗಿ ಅಳಿಸಿಹಾಕಲು ಸಾಧ್ಯವಾಗುತ್ತದೆ.

(ಆಧಾರ: 'ಯುದ್ಧ, ಶಾಂತಿ ಮತ್ತು ಶಾಂತಿಯುತ ಸಹಬಾಳ್ವೆ','ನವೆಂಬರ್ ಕ್ರಾಂತಿಯ ಪಾಠಗಳು' ಮತ್ತು 'ಘಳಿಗೆಯ ಕರೆ') ■

---

## ಪೌರತ್ವ ಹಕ್ಕಿನ ನಿರಾಕರಣೆ!

2ನೇ ಪುಟದಿಂದ

ಈ ಹಿಂದೆ ಆಡಳಿತ ನಡೆಸಿದ ಬಹುಪಾಲು ವಿರೋಧ ಪಕ್ಷಗಳು ತಾವೇ ಅಧಿಕಾರದಲ್ಲಿರುವಾಗ ಚುನಾವಣಾ ಅಕ್ರಮಗಳನ್ನು ನಡೆಸಿದ್ದು ರಹಸ್ಯವಾದ ಸಂಗತಿ ಏನಲ್ಲ. ಜನರು ತಮ್ಮ ದೈನಂದಿನ ಬದುಕಿನಲ್ಲಿ ಎದುರಿಸುತ್ತಿರುವ ಯಾವುದೇ ಸಮಸ್ಯೆಗಳನ್ನು ಪರಿಹರಿಸಲು ವಿಫಲವಾಗಿರುವುದರಿಂದ ಬಿಜೆಪಿಯು ವೇಗವಾಗಿ ಜನಪ್ರಿಯತೆಯನ್ನು ಕಳೆದುಕೊಳ್ಳುತ್ತಿದೆ ಮತ್ತು ಹಾಗಾಗಿ, ಏನಾದರೂ ಸರಿಯೇ ಶತಾಯಗತಾಯ ತಾನು ಅಧಿಕಾರದಲ್ಲಿ ಉಳಿಯಲು, ಕೋಮುವಾದದ ತನ್ನ ಟ್ರಂಪ್‌ಕಾರ್ಡನ್ನು ಅದು ಬಳಸುತ್ತಿರುವುದಲ್ಲದೆ, ಭಾರತದ ಚುನಾವಣಾ ಆಯೋಗವನ್ನು ದುರ್ಬಳಕೆ ಮಾಡಿಕೊಂಡು ಮತದಾನ ವ್ಯವಸ್ಥೆಯನ್ನು ತಿರುಚಲು ಪ್ರಯತ್ನಿಸುತ್ತಿರುವುದು ಸ್ಪಷ್ಟವಾಗಿ ಕಾಣುತ್ತಿದೆ.

### ಬೇಕು ಪ್ರಬಲ ಪ್ರತಿರೋಧ!

ಈ ಕೊಳೆತ ಬಂಡವಾಳಶಾಹಿ ಆಡಳಿತದಲ್ಲಿ, ಇಂತಹ ದಾಳಿಗಳು ಒಂದರ ನಂತರ ಒಂದರಂತೆ ಬರುತ್ತಲೇ ಇರುತ್ತವೆ ಎಂಬುದನ್ನು ದುಡಿಯುವ ಜನರು ಅರಿತುಕೊಳ್ಳಬೇಕು. ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ನಂತರ, ಈ ದಾಳಿಗಳು ಹೆಚ್ಚು ಆಕ್ರಮಣಕಾರಿಯಾಗಿವೆ. ಅಲ್ಪಸಂಖ್ಯಾತರನ್ನು ವಿಶೇಷವಾಗಿ ಗುರಿ ಮಾಡಲಾಗುತ್ತಿದೆ ಎಂಬುದು ನಿಜ. ಆದರೆ, ಈ ದಾಳಿಗಳು ಧರ್ಮ, ಜಾತಿ ಅಥವಾ ಸಮುದಾಯವನ್ನು ಲೆಕ್ಕಿಸದೆ ಎಲ್ಲ ಜನರ ಮೇಲೂ ಇವೆ ಎಂಬುದೂ ಸಹ ಅಷ್ಟೇ ಸತ್ಯ. ಇದನ್ನು ಪ್ರತಿರೋಧಿಸಲು, ನಮಗೆ ಪ್ರಜ್ಞಾಪೂರ್ವಕವಾದ ಸಂಘಟಿತ ಹೋರಾಟದ ಅಗತ್ಯವಿದೆ. ಆಳುವ ಪಕ್ಷಗಳ ಜನವಿರೋಧಿ ಸ್ವರೂಪವನ್ನು ನಾವು ಗುರುತಿಸಬೇಕು. ಈ ಅರಿವನ್ನು ಮೂಡಿಸುವುದು ಮತ್ತು ವಿಶಾಲ ಜನ ಚಳುವಳಿಗಳನ್ನು ಮತ್ತು ಜನ ಸಮಿತಿಗಳನ್ನು ರೂಪಿಸುವುದು ಈಗ ಜನ ಸಾಮಾನ್ಯರ ಜವಾಬ್ದಾರಿಯಾಗಿದೆ. ಈ ಉದ್ದೇಶದಿಂದ, ಕೇಂದ್ರ ಸರ್ಕಾರ ಹಾಗೂ ಚುನಾವಣಾ ಆಯೋಗದ ಈ ಕ್ರಮದ ವಿರುದ್ಧ ಪ್ರತಿಭಟನೆಯ ದನಿ ಎತ್ತಲು ಸೋಷಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ(ಕಮ್ಯುನಿಸ್ಟ್) ಪಕ್ಷದ ಕರ್ನಾಟಕ ರಾಜ್ಯ ಸಮಿತಿಯು ರಾಜ್ಯದ ಜನರಿಗೆ ಕರೆ ನೀಡುತ್ತದೆ. ■

## ಕಾಮ್ರೇಡ್ ಶಿವದಾಸ್ ಘೋಷ್‌ರವರ 49ನೇ ಸಂಸ್ಮರಣೆ

1ನೇ ಪುಟದಿಂದ ಅತ್ಯಲ್ಪ ವೇತನ ನೀಡಲಾಗುತ್ತಿದೆ. ಅತಿ ಶ್ರೀಮಂತರು ಮತ್ತು ಕಡು ಬಡವರ ನಡುವಿನ ಅಂತರ ಅಗಾಧವಾಗಿ ಬೆಳೆದಿದೆ. ಈ ಎಲ್ಲಾ ಸಮಸ್ಯೆಗಳ ವಿರುದ್ಧ ಸಂಘಟಿತ ಜನಾಂದೋಳನ ಬೆಳೆಸುತ್ತಾ, ಬಂಡವಾಳಶಾಹಿ ವಿರೋಧಿ ಸಮಾಜವಾದಿ ಕ್ರಾಂತಿಯತ್ತ ಮುನ್ನಡೆಯಬೇಕಿದೆ ಎಂದವರು ಕರೆ ನೀಡಿದರು. ಜಿಲ್ಲಾ ಸಮಿತಿ ಸದಸ್ಯರಾದ ಕಾ. ಎಸ್. ಶೋಭಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

**6.8.2025: ಶಹಾಬಾದ್**

ಶಹಾಬಾದಿನಲ್ಲಿ ನಡೆದ ಕಾರ್ಯಕ್ರಮವನ್ನು ಉದ್ದೇಶಿಸಿ ಎಸ್‌ಯುಸಿಐ(ಸಿ)ನ ರಾಜ್ಯ ಸಮಿತಿಯ ಸದಸ್ಯರಾದ ಕಾ. ವಿ.ಎನ್. ರಾಜಶೇಖರ್ ಮಾತನಾಡುತ್ತಾ, "1947ರಲ್ಲಿ ಬ್ರಿಟಿಷರಿಂದ ದೇಶದ ಬಂಡವಾಳಶಾಹಿಗಳಿಗೆ ಅಧಿಕಾರ ಹಸ್ತಾಂತರವಾಗಿದೆಯೇ ವಿನಃ ದೇಶದ ಜನಸಾಮಾನ್ಯರಿಗೆ ಸ್ವಾತಂತ್ರ್ಯ ದೊರಕಲಿಲ್ಲ. ಬಂಡವಾಳಶಾಹಿಗಳ ಸೂತ್ರದಂತೆ ಕಾಂಗ್ರೆಸ್, ಬಿಜೆಪಿ ಇನ್ನಿತರ ಪಕ್ಷಗಳು ಪಾತ್ರ ನಿರ್ವಹಿಸುತ್ತಿವೆ. ಶಿಕ್ಷಣ, ಆರೋಗ್ಯ ಎಲ್ಲವೂ ಖಾಸಗೀಕರಣಗೊಳ್ಳುತ್ತಿದ್ದು ಬಡಜನರು ಮತ್ತು ಮಧ್ಯಮವರ್ಗದ ಜನರು ಪರದಾಡುವಂತಾಗಿದೆ. ಹೊಲಗದ್ದೆಗಳಲ್ಲಿ, ಕಾರ್ಖಾನೆಗಳಲ್ಲಿ ಹಗಲು ರಾತ್ರಿ ಕಷ್ಟಪಟ್ಟು ದುಡಿಯುವ ನಮ್ಮ ರೈತರು, ಕಾರ್ಮಿಕರು ಒಪ್ಪತ್ತಿನ ಊಟಕ್ಕೂ ಪರದಾಡುವಂತಾಗಿದೆ. ಸ್ವಾತಂತ್ರ ಸಂಗ್ರಾಮದಲ್ಲಿ ಭಗತ್ ಸಿಂಗ್, ನೇತಾಜಿ ಸುಭಾಷ್ ಚಂದ್ರ ಬೋಸ್‌ರಂತಹ ಕ್ರಾಂತಿಕಾರಿಗಳು ಕಂಡಂತಹ ಸಮಾನತೆಯ ಸಮಾಜವನ್ನು ಸ್ಥಾಪಿಸಲು ತಾವೆಲ್ಲರೂ ಮುಂದೆ ಬರಬೇಕು." ಎಂದು ಕರೆ ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ರಾಘವೇಂದ್ರ ಎಂ. ಜಿ. ನಿರ್ವಹಿಸಿದರು.




**05.05.2025: ಬಳ್ಳಾರಿ**

ಪಕ್ಷದ ಕಛೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಪಕ್ಷದ ಜಿಲ್ಲಾ ಕಾರ್ಯದರ್ಶಿಗಳಾದ ಕಾ. ರಾಧಾಕೃಷ್ಣ ಉಪಾಧ್ಯ ಮಾತನಾಡಿ, ಮಹಾನ್ ನಾಯಕ ಶಿವದಾಸ್ ಘೋಷ್‌ರವರು, 'ಯಾವುದೇ ದೇಶ ಹಸಿವೆಯಿಂದ ಬಳಲುತ್ತಿದ್ದರೂ ಸಹ ಮಾನವ ಮೌಲ್ಯಗಳನ್ನು ಹೊಂದಿದ್ದರೆ ಅನ್ಯಾಯದ ವಿರುದ್ಧ ಸಿಡಿದೇಳಬಹುದು. ಆದರೆ ಮಾನವ ಮೌಲ್ಯಗಳಿಲ್ಲದಿದ್ದರೆ ಸರ್ವಸ್ವವನ್ನೂ ಕಳೆದುಕೊಂಡಂತೆ' ಎಂದು ಹೇಳಿದ್ದನ್ನು ಉಲ್ಲೇಖಿಸುತ್ತಾ, ನಾವು ಅವರು ಹಾಕಿಕೊಟ್ಟ ದಾರಿಯಲ್ಲೇ ನಡೆದು ಉನ್ನತ ಸಮಾಜ ಕಟ್ಟಲು ಮುಂದೆ ಬರಬೇಕಿದೆ, ಎಂದು ವಿವರಿಸಿದರು.

ಜಿಲ್ಲಾ ಸಮಿತಿಯ ಸದಸ್ಯರಾದ ಕಾ. ಸೋಮಶೇಖರ ಗೌಡ ಪ್ರಾಸ್ತಾವಿಕವಾಗಿ ಮಾತನಾಡಿದರು.




ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜಿಲ್ಲಾ ಸಮಿತಿಯ ಸದಸ್ಯರಾದ ಕಾ. ಮಂಜುಳ ಎಂ.ಎನ್ ವಹಿಸಿದ್ದರು.

**16.05.2025: ಧಾರವಾಡ**

ಧಾರವಾಡ ಜಿಲ್ಲಾ ಸಮಿತಿಯಿಂದ ನಗರದ ನಿವೃತ್ತ ಸರ್ಕಾರಿ ನೌಕರರ ಭವನದಲ್ಲಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಪಕ್ಷದ ರಾಜ್ಯ ಸಮಿತಿ ಸದಸ್ಯರಾದ ಕಾ. ರಾಮಾಂಜನಪ್ಪ ಆಲ್ದಳ್ಳಿಯವರು ಮಾತನಾಡುತ್ತಾ, ಕಾಮ್ರೇಡ್ ಘೋಷ್ ಚಿಂತನೆ, ಕಾರ್ಮಿಕ ವರ್ಗದ ಕೈಯಲ್ಲಿನ ಒಂದು ಬಲಿಷ್ಠ ಅಸ್ತ್ರವಾಗಿದೆ, ಜೀವನ ಸಿದ್ಧಾಂತವಾಗಿದೆ. 1917ರಲ್ಲಿ ಲೆನಿನ್ ನೇತೃತ್ವದಲ್ಲಿ ಸಮಾಜವಾದಿ ಕ್ರಾಂತಿಯ ಮೂಲಕ ಲಾಭದಾಹಿ ಶೋಷಕ




ಬಂಡವಾಳಶಾಹಿ ವ್ಯವಸ್ಥೆಯನ್ನು ಕಿತ್ತೊಗೆದು ಮಾನವನಿಂದ ಮಾನವನ ಶೋಷಣೆಯನ್ನು ಕೊನೆಗಾಣಿಸಿ, ಕಾರ್ಮಿಕರನ್ನು ದೇಶದ ಸಂಪತ್ತಿನ ಒಡೆಯರನ್ನಾಗಿ ಮಾಡಿದ ಸೋವಿಯತ್ ರಷ್ಯಾ ನಮಗೆ ಮಾದರಿಯಾಗಿದೆ. ಈ ನಿಟ್ಟಿನಲ್ಲಿ ನಾವೂ ಮುನ್ನಡೆಯಬೇಕು ಎಂದು ಪ್ರೇರೇಪಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪಕ್ಷದ ಜಿಲ್ಲಾ ಕಾರ್ಯದರ್ಶಿ ಕಾ. ಲಕ್ಷ್ಮಣ್ ಜಡಗನ್ನವರ ವಹಿಸಿದ್ದರು.

**17.05.2025: ಮೈಸೂರು**

ಪಕ್ಷದ ಕಚೇರಿಯಲ್ಲಿ ನಡೆದ ಕಾರ್ಯಕ್ರಮಕ್ಕೆ ಮುಖ್ಯ ಭಾಷಣಕಾರರಾಗಿ ಆಗಮಿಸಿದ್ದ ಪಕ್ಷದ ರಾಜ್ಯ ಸಮಿತಿ ಸದಸ್ಯರಾದ ಕಾ. ಕೆ.ಸೋಮಶೇಖರ್ ಮಾತನಾಡಿ, "ಯಾವ ಬಂಡವಾಳಶಾಹಿ ವ್ಯವಸ್ಥೆ, ಪ್ರಜಾಪ್ರಭುತ್ವದ ಹೆಸರಿನಲ್ಲಿ ಸ್ವಾತಂತ್ರ್ಯ, ಸಮಾನತೆ, ಸಹೋದರತೆಯ ಮೌಲ್ಯಗಳನ್ನು ಎತ್ತಿಹಿಡಿಯಿತೋ ಇಂದು ಅದೇ ಮೌಲ್ಯಗಳನ್ನು ಕಾಲಡಿಯಲ್ಲಿ ಹೊಸಕಿ ಹಾಕುತ್ತಿದೆ. ಇನ್ಫೋಸಿಸ್‌ನ ನಾರಾಯಣ ಮೂರ್ತಿಯಂತಹವರು ದೇಶಕ್ಕಾಗಿ ದಿನಕ್ಕೆ ಹನ್ನೆರಡು ಗಂಟೆ ದುಡಿಯಬೇಕು ಎಂದು ಕರೆ ನೀಡುತ್ತಿದ್ದಾರೆ. ಆದರೆ ಇದು ದೇಶದ ಹಿತಕ್ಕಲ್ಲ ಬದಲಿಗೆ, ಬಡವರ ಬೆವರಿನಲ್ಲಿ ತಮ್ಮ ಖಜಾನೆಯನ್ನು ತುಂಬಿಸುವ ಸಲುವಾಗಿ, ಇದಕ್ಕಾಗಿಯೇ ಕಾರ್ಮಿಕರು ಜೀವತೆತ್ತು ಗಳಿಸಿಕೊಂಡ ಕಾರ್ಮಿಕ ಕಾಯ್ದೆ ಕಾನೂನುಗಳನ್ನು ಕಿತ್ತೆಸೆಯುತ್ತಿದ್ದಾರೆ" ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪಕ್ಷದ ಜಿಲ್ಲಾ ಕಾರ್ಯದರ್ಶಿಗಳಾದ ಕಾ. ಬಿ.ರವಿಯವರು ಸಹ ಮಾತನಾಡಿದರು. ಪಕ್ಷದ ಜಿಲ್ಲಾ ಸಮಿತಿ




ಸದಸ್ಯರಾದ ಕಾ.ಎಂ. ಉಮಾದೇವಿಯವರು ಈ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು.

ರಾಜ್ಯದ ಇನ್ನಿತರ ಜಿಲ್ಲೆಗಳಲ್ಲಿ ಪಕ್ಷದ ಕಛೇರಿಯಲ್ಲಿ ಕಾ: ಶಿವದಾಸ್ ಘೋಷ್‌ರವರಿಗೆ ಗೌರವಪೂರ್ವಕ ನಮನವನ್ನು ಸಲ್ಲಿಸಲಾಯಿತು.

## ಗಣಿಬಾಧಿತ ಪರಿಸರ ಮತ್ತು ಜನರ ಪುನಶ್ಚೇತನಕ್ಕೆ ಒತ್ತಾಯಿಸಿ ಸಮಾವೇಶ




ಗಣಿಬಾಧಿತ ಪ್ರದೇಶಗಳ ಅಭಿವೃದ್ಧಿಗೆ ಮತ್ತು ಅಲ್ಲಿಯ ಪರಿಸರ ಹಾಗೂ ಜನರ ಬದುಕು ಹಸನಾಗಿಸುವ ಹಾಗೂ ಪುನಶ್ಚೇತನಗೊಳಿಸುವ ಕಾರ್ಯಕ್ರಮ ರೂಪಿಸಬೇಕು, ಇದಕ್ಕೆ ಮೀಸಲಾಗಿಟ್ಟಿರುವ ಹಣವನ್ನು ಕರ್ನಾಟಕ ಗಣಿ ಪರಿಸರ ಪುನಶ್ಚೇತನ ನಿಗಮ(ಕೆಎಂಇಆರ್‌ಸಿ) ದಿಂದ ಬಿಡುಗಡೆಗೊಳಿಸಬೇಕೆಂದು ಒತ್ತಾಯಿಸಿ 'ಗಣಿಬಾಧಿತ ಪರಿಸರ ಮತ್ತು ಜನ ಬದುಕಿನ ಪುನಶ್ಚೇತನ ಹೋರಾಟ ಸಮಿತಿ' ಯಿಂದ, ಬಳ್ಳಾರಿಯ ಗಾಂಧಿಭವನದ ಒಳ ಕ್ರೀಡಾಂಗಣದಲ್ಲಿ ರಾಜ್ಯಮಟ್ಟದ ಸಮಾವೇಶವನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿ ಸಮಾಜ ಪರಿವರ್ತನ ಸಮುದಾಯದ ಶ್ರೀ.ಎಸ್.ಆರ್.ಹಿರೇಮಠ್, ಎಸ್‌ಯುಸಿಐ(ಸಿ) ಪಕ್ಷದ ಕಾ.ನಾಗಲಕ್ಷ್ಮಿ ಮತ್ತು ಕಾ. ಆರ್. ಸೋಮಶೇಖರ್ ಗೌಡ, ಹಾಗೂ ಸಮಿತಿಯ ಸಂಚಾಲಕ ಕೆ.ಆರ್.ಎಸ್. ಪಕ್ಷದ ಶ್ರೀ. ರವಿಕೃಷ್ಣಾ ರೆಡ್ಡಿ ಮತ್ತು ಶ್ರೀ. ದೀಪಕ್, ಹೋರಾಟಗಾರರಾದ ಕಾ. ಕೆ.ವಿ.ಭಟ್, ಶ್ರೀ. ಚಾಗನೂರು ಮಲ್ಲಿಕಾರ್ಜುನ ರೆಡ್ಡಿ, ಶ್ರೀ. ಶ್ರೀಶೈಲ ಆಲದಹಳ್ಳಿ, ಶ್ರೀ. ಚಾಮರಸ ಮಾಲೀಪಾಟೀಲ್ ಮುಂತಾದವರು ಇದ್ದರು. ಬಳ್ಳಾರಿ, ವಿಜಯನಗರ, ಚಿತ್ರದುರ್ಗ, ತುಮಕೂರು, ಜಿಲ್ಲೆಗಳ ಗಣಿಬಾಧಿತ ಹಳ್ಳಿಗಳ ನೂರಾರು ಜನ ಸಮಾವೇಶದಲ್ಲಿ ಭಾಗವಹಿಸಿದ್ದರು.

## ಐಸಿಐಸಿಐ ನೌಕರರ ವಜಾ ಖಂಡಿಸಿ ಎಐಬಿಇಯುಎಫ್ ಪ್ರತಿಭಟನೆ




22.08.2025: ಬೆಂಗಳೂರು: ಕಾರ್ಮಿಕ ಕಾನೂನುಗಳನ್ನು ಉಲ್ಲಂಘಿಸಿ ಕಳೆದ ಕೆಲವು ವರ್ಷಗಳಲ್ಲಿ 10 ಸಾವಿರಕ್ಕೂ ಹೆಚ್ಚು ಉದ್ಯೋಗಿಗಳನ್ನು ಐಸಿಐಸಿಐ ಬ್ಯಾಂಕ್ ವಜಾಗೊಳಿಸಿದೆ. ಇದನ್ನು ಖಂಡಿಸಿ ಎಐಯುಟಿಯುಸಿ ಮತ್ತು ಅದಕ್ಕೆ ಸಂಯೋಜಿತಗೊಂಡಿರುವ ಆಲ್ ಇಂಡಿಯಾ ಬ್ಯಾಂಕ್ ಎಂಪ್ಲಾಯೀಸ್ ಯುನಿಟಿ ಫೋರಂ(ಎಐಬಿಇಯುಎಫ್) ಸದಸ್ಯರು ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿದರು. ಈ ಕೂಡಲೇ ಈ ಕಾನೂನುಬಾಹಿರ ಕ್ರಮಗಳನ್ನು ಸರಿಪಡಿಸಿ ಮರು ನೇಮಕ ಮಾಡಿಕೊಳ್ಳಬೇಕು, ವಜಾಗೊಂಡಿರುವ ನೌಕರರಿಗೆ ಪರಿಹಾರ ನೀಡಲು ಸರ್ಕಾರ ಮುಂದಾಗಬೇಕು ಎಂದು ಒತ್ತಾಯಿಸಲಾಯಿತು. ಪ್ರತಿಭಟನೆಯ ನೇತೃತ್ವವನ್ನು ಎಐಯುಟಿಯುಸಿಯ ರಾಜ್ಯಾಧ್ಯಕ್ಷರಾದ ಕಾ. ಕೆ.ಸೋಮಶೇಖರ್, ಇನ್ನೋರ್ವ ನಾಯಕರಾದ ಕಾ. ಕೆ.ವಿ.ಭಟ್ ಹಾಗೂ ಎಐಬಿಇಯುಎಫ್‌ನ ಅಖಿಲ ಭಾರತ ಅಧ್ಯಕ್ಷರಾದ ಕಾ. ಪೂರ್ಣಚಂದ್ರ ಬೆಹರಾ, ಕಾರ್ಯದರ್ಶಿ, ಕಾ. ಜಗನಾಥ್ ರಾಯ್ ಮಂಡಲ್ ಮತ್ತೋರ್ವ ನಾಯಕರಾದ ಕಾ. ಗೌರಿಶಂಕರ್ ದಾಸ್ ವಹಿಸಿದ್ದರು.

## ಸರ್ಕಾರಿ ಶಾಲೆಗಳನ್ನು ರಕ್ಷಿಸಿ, ಬಲಪಡಿಸಲು

# 50 ಲಕ್ಷ ಸಹಿ ಸಂಗ್ರಹ ಅಭಿಯಾನದ ಸಮಾರೋಪ

6200ಕ್ಕೂ ಹೆಚ್ಚು ಸರ್ಕಾರಿ ಶಾಲೆಗಳನ್ನು ಮುಚ್ಚಲು ಹೊರಟಿದ್ದ ಕರ್ನಾಟಕ ರಾಜ್ಯ ಕಾಂಗ್ರೆಸ್ ಸರ್ಕಾರದ ನೀತಿಯನ್ನು ವಿರೋಧಿಸಿ ಎಐಡಿಎಸ್‌ಓ ಕರ್ನಾಟಕ ರಾಜ್ಯ ಸಮಿತಿಯು ರಾಜ್ಯವ್ಯಾಪಿ 50 ಲಕ್ಷ ಸಹಿ ಸಂಗ್ರಹ ಅಭಿಯಾನಕ್ಕೆ ಕರೆ ನೀಡಿತು. 'ಹಬ್ ಅಂಡ್ ಸ್ಪೋಕ್' ಹೆಸರಿನಲ್ಲಿ ಶಾಲೆಯನ್ನು ಮುಚ್ಚುವ ಈ ನಿರ್ಧಾರದ ವಿರುದ್ಧ 'ಸರ್ಕಾರಿ ಶಾಲೆಗಳನ್ನು ರಕ್ಷಿಸಿ, ಬಲಪಡಿಸಿ' ಎಂಬ ಆಗ್ರಹದೊಂದಿಗೆ ನಡೆದ ಅಭಿಯಾನಕ್ಕೆ ರಾಜ್ಯದ ಜನತೆಯು ಅಭೂತಪೂರ್ವ ಬೆಂಬಲ ವ್ಯಕ್ತಪಡಿಸಿ 50 ಲಕ್ಷ ಸಹಿ ನೀಡಿದರು.


ಪ್ರೊ. ಎ. ಮುರಿಗೆಪ್ಪ


ಕಾ. ಶಿಬಾಶಿಷ್ ಪ್ರಹರಾಜ್


ಕಾ. ಕೆ.ಎಸ್. ಅಶ್ವಿನಿ


ಕಾ. ಅಜಯ್ ಕಾಮತ್

ಮೇ 1, ವಿಶ್ವ ಕಾರ್ಮಿಕ ದಿನಾಚರಣೆಯಂದು ಆರಂಭಗೊಂಡ ಸಹಿಸಂಗ್ರಹ ಅಭಿಯಾನವು 100 ದಿನಗಳಲ್ಲೇ 50 ಲಕ್ಷ ಸಹಿಸಂಗ್ರಹವನ್ನು ಪೂರೈಸಿತು. ಇದರ ಸಮಾರೋಪವಾಗಿ ಆಗಸ್ಟ್ 21ರಂದು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನವನದಲ್ಲಿ ರಾಜ್ಯದ ಜನತೆಯ ಸಮಾವೇಶವನ್ನು ಆಯೋಜಿಸಲಾಯಿತು.

ಈ ಐತಿಹಾಸಿಕ ಸಮಾವೇಶದ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ, ಹಂಪಿ ಕನ್ನಡ ವಿಶ್ವ


ಶ್ರೀಮತಿ ಅನಿತಾ ನಜಾರೆಯವರಿಗೆ ಕಾ. ಸುಭಾಷ್ ಮತ್ತು ಕಾ. ಅಭಯಾ ದಿವಾಕರ್ ಸಹಿಸಂಗ್ರಹವನ್ನು ಒಪ್ಪಿಸುತ್ತಿರುವುದು

ವಿದ್ಯಾನಿಲಯ ಮಾಜಿ ಕುಲಪತಿಗಳಾದ ಪ್ರೊ. ಎ. ಮುರಿಗೆಪ್ಪ ಮಾತನಾಡಿ, ತನ್ನ ಮೇಲಿನ ಭಾರವನ್ನು ಇಳಿಸಿಕೊಳ್ಳಲು ಸರ್ಕಾರಿ ಶಾಲೆಗಳನ್ನು ಮುಚ್ಚಿ ಖಾಸಗಿ ಶಾಲೆಗಳಿಗೆ ಮಣೆ ಹಾಕುತ್ತಿರುವ ಸರ್ಕಾರವು ತನ್ನ ಜವಾಬ್ದಾರಿಯಿಂದ ನುಣುಚಿಕೊಳ್ಳುವ ಷಡ್ಯಂತ್ರ ನಡೆಸಿದೆ. ಈ ಮೂಲಕ ಬಡಮಕ್ಕಳ ಭವಿಷ್ಯವನ್ನು ಹಾಳುಗೆಡವುತ್ತಿದೆ. ಕಡಿಮೆ ಸಂಖ್ಯೆಯ ನೆಪದಲ್ಲಿ ಸರ್ಕಾರಿ ಶಾಲೆಗಳನ್ನು ಮುಚ್ಚಿದರೆ, ಒಪ್ಪತ್ತಿನ ಊಟಕ್ಕೂ ಕಷ್ಟಪಡುತ್ತಿರುವ ಸಾಮಾನ್ಯ ಜನರ ಮಕ್ಕಳು ಖಾಸಗಿ ಶಾಲೆಗಳಿಗೆ ತಮ್ಮ ಮಕ್ಕಳನ್ನು ಕಳುಹಿಸಲು ಸಾಧ್ಯವಿಲ್ಲ. ವಿದ್ಯಾರ್ಥಿಗಳ ಸಂಖ್ಯೆ ಎಷ್ಟೇ ಇದ್ದರೂ ಸರ್ಕಾರಿ ಶಾಲೆಗಳನ್ನು ಮುಚ್ಚಬಾರದು. ಬದಲಾಗಿ ಸರ್ಕಾರಿ ಶಾಲೆಗಳು ಎದುರಿಸುತ್ತಿರುವ ಶಿಕ್ಷಕರ ಹಾಗೂ ಮೂಲಭೂತ ಸೌಕರ್ಯಗಳ ಕೊರತೆಯನ್ನು ಪರಿಹರಿಸಿ ದಾಖಲಾತಿ ಹೆಚ್ಚಿಸುವುದು ಸರ್ಕಾರದ ಆದ್ಯ ಕರ್ತವ್ಯವಾಗಬೇಕು ಮತ್ತು ಶಿಕ್ಷಣಕ್ಕೆ ಒತ್ತು ನೀಡಬೇಕೆಂದು ಅವರು ಕರ್ನಾಟಕ ಸರ್ಕಾರವನ್ನು ಆಗ್ರಹಿಸಿದರು. ಮುಂದುವರೆದು, ಬಡವರ ಮಕ್ಕಳಿಂದ ಶಿಕ್ಷಣವನ್ನು ಕಸಿಯುತ್ತಿರುವ ಸರ್ಕಾರದ ಷಡ್ಯಂತ್ರದ ವಿರುದ್ಧ ಬಲಿಷ್ಠ ಹೋರಾಟವನ್ನು ಬೆಳೆಸುವಲ್ಲಿ ಎಐಡಿಎಸ್‌ಓ ರಾಜ್ಯದ ಏಕೈಕ ವಿದ್ಯಾರ್ಥಿ ಸಂಘಟನೆಯಾಗಿದೆ ಎಂದು ಅವರು ಶ್ಲಾಘಿಸಿದರು.

ಎಐಡಿಎಸ್‌ಓ ಕೇಂದ್ರ ಕೌನ್ಸಿಲ್‌ನ ಪ್ರಧಾನ ಕಾರ್ಯದರ್ಶಿಗಳಾದ ಕಾ. ಶಿಬಾಶಿಷ್ ಪ್ರಹರಾಜ್, ಮುಖ್ಯ ಭಾಷಣಕಾರರಾಗಿ ಮಾತನಾಡುತ್ತಾ, ಸ್ವಾತಂತ್ರ್ಯಾನಂತರ ಅಧಿಕಾರಕ್ಕೇರಿದ ಎಲ್ಲ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಶಿಕ್ಷಣವನ್ನು ವ್ಯಾಪಾರೀಕರಣಗೊಳಿಸುತ್ತಾ ಬಂದಿವೆ. ಸರ್ಕಾರಗಳ ಈ ಜನವಿರೋಧಿ ನೀತಿಗಳ ವಿರುದ್ಧ ಎಐಡಿಎಸ್‌ಓ ದೇಶಾದ್ಯಂತ ಹೋರಾಡುತ್ತಿದೆ. ಅದರ ನೇತೃತ್ವದಲ್ಲಿ ಕರ್ನಾಟಕದ ವಿದ್ಯಾರ್ಥಿಗಳು ನಡೆಸಿದ ಹೋರಾಟದ ಫಲವಾಗಿ, ಇಂದು ಕರ್ನಾಟಕದ ಶಿಕ್ಷಣ ಸಚಿವರು, ಒಂದೇ ಒಂದು ಸರ್ಕಾರಿ ಶಾಲೆಯನ್ನು ಮುಚ್ಚುವುದಿಲ್ಲ ಎಂದು ಹೇಳಿದ್ದಾರೆ. ಇದು ರಾಜ್ಯದ ವಿದ್ಯಾರ್ಥಿಗಳ ಹಾಗೂ ಸಾಮಾನ್ಯ ಜನತೆಯ ಒಗ್ಗಟ್ಟು ಮತ್ತು ಹೋರಾಟಕ್ಕೆ ದೊರೆತಿರುವ ಜಯವಾಗಿದೆ ಎಂದು ಅಭಿನಂದನೆ ಸಲ್ಲಿಸಿದರು.

ಎಐಡಿಎಸ್‌ಓ ರಾಜ್ಯ ಕಾರ್ಯದರ್ಶಿ ಕಾ. ಅಜಯ್ ಕಾಮತ್ ಮಾತನಾಡಿ, ಸರ್ಕಾರವು ಶಿಕ್ಷಕರ ಮೂಲಕ ಹಲವೆಡೆ ಈ ಕಾರ್ಯಕ್ರಮಕ್ಕೆ ವಿದ್ಯಾರ್ಥಿಗಳು ಹಾಜರಾಗದಂತೆ ತಡೆಯಲು ಯತ್ನಿಸಿದೆ. ಅನೇಕ ಶಾಲಾ –ಕಾಲೇಜುಗಳಲ್ಲಿ ದಿಢೀರ್ ಪರೀಕ್ಷೆಗಳನ್ನು ನಡೆಸಲಾಗುತ್ತಿದೆ. ಮಕ್ಕಳನ್ನು ಫ್ರೀಡಂ ಪಾರ್ಕಿಗೆ ಕಳುಹಿಸದಂತೆ ಪಾಲಕರನ್ನು ಬೆದರಿಸಲಾಗಿದೆ. ಆದರೆ ಈ ಎಲ್ಲಾ ಅಡೆತಡೆಗಳನ್ನು ಮೀರಿ ವಿದ್ಯಾರ್ಥಿಗಳು ಈ ಹೋರಾಟಕ್ಕೆ ಧಾವಿಸಿ ತಾವು ನೇತಾಜಿ – ಭಗತ್ ಸಿಂಗರ ನೈಜ ಅನುಯಾಯಿಗಳೆಂದು ಸಾಬೀತುಪಡಿಸಿದ್ದಾರೆ ಎಂದು ಪ್ರಶಂಸಿಸಿದರು.

ರಾಜ್ಯ ಅಧ್ಯಕ್ಷರಾದ ಕಾ.ಅಶ್ವಿನಿ ಕೆ. ಎಸ್ ಮಾತನಾಡಿ, ಸರ್ಕಾರಿ ಶಾಲೆ ಉಳಿಸಲು ವಿದ್ಯಾರ್ಥಿಗಳು ಮಾಡಿರುವ ಈ ಕೆಲಸ ಐತಿಹಾಸಿಕವಾದದ್ದು. ರಾಜ್ಯಾದ್ಯಂತ ಎಐಡಿಎಸ್‌ಓ ಬೆಳೆಸಿದ ಹೋರಾಟದ ಒತ್ತಡದಿಂದ ಶಿಕ್ಷಣ ಸಚಿವರಾದ ಮಧು ಬಂಗಾರಪ್ಪ, ಒಂದೇ ಒಂದು ಶಾಲೆಯನ್ನು ಮುಚ್ಚುವುದಿಲ್ಲ ಎಂದು ಸದನದಲ್ಲಿ ಹೇಳಿದ್ದಾರೆ. ಆದರೆ ಈ ಆಶ್ವಾಸನೆ ನಂಬಿ ಹೋರಾಟವನ್ನು ನಾವು ಕೈ ಬಿಡುವಂತಿಲ್ಲ ಎಂದು ವಿದ್ಯಾರ್ಥಿಗಳನ್ನು ಎಚ್ಚರಿಸಿದರು. 'ಹಬ್ ಅಂಡ್ ಸ್ಪೋಕ್' ಹೆಸರಿನಲ್ಲಿ ಶಾಲೆಗಳನ್ನು ವಿಲೀನಗೊಳಿಸುವ ಆದೇಶವನ್ನು ಅಧಿಕೃತವಾಗಿ ವಾಪಸು ಪಡೆಯುವವರೆಗೂ ವಿದ್ಯಾರ್ಥಿಗಳ ಹೋರಾಟ ಮುಂದುವರೆಯಲಿದೆ ಎಂದು ಘೋಷಿಸಿದರು.

ಎಐಡಿಎಸ್‌ಓ ತಮಿಳುನಾಡು ರಾಜ್ಯಾಧ್ಯಕ್ಷರಾದ ಕಾ. ಸೆಬಾಸ್ಟಿಯನ್ ಮಾತನಾಡಿ, ಶಿಕ್ಷಣದಲ್ಲಿ ವೈಜ್ಞಾನಿಕ ಚಿಂತನೆಯನ್ನು ಕುಂಠಿತಗೊಳಿಸಿ, ವಿದ್ಯಾರ್ಥಿಗಳಲ್ಲಿ ಪ್ರಶ್ನೆ ಮಾಡುವ ಮನೋಭಾವ ಇಲ್ಲವಾಗುವಂತೆ, ಸರ್ಕಾರಗಳು ತಮ್ಮ ನೀತಿಗಳ ಮೂಲಕ ಅವೈಜ್ಞಾನಿಕ ಚಿಂತನೆಗಳನ್ನು ಹರಡುತ್ತಿವೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಶಾಲೆಗಳನ್ನು ಮುಚ್ಚಿ ನಾಗರಿಕತೆಯನ್ನು ಅಜ್ಞಾನಕ್ಕೆ ದೂಡುವ ಹುನ್ನಾರದ ವಿರುದ್ಧ ಕರ್ನಾಟಕದ ವಿದ್ಯಾರ್ಥಿಗಳು ನಡೆಸಿರುವ ಹೋರಾಟ ದೇಶಕ್ಕೆ ಮಾದರಿಯಾಗಿದೆ ಎಂದು ಅಭಿನಂದಿಸಿದರು. ಸಮಾವೇಶದಲ್ಲಿ ಭಾಗವಹಿಸಲು ಸಾಧ್ಯವಾಗದ ಪ್ರೊ. ಬರಗೂರು ರಾಮಚಂದ್ರಪ್ಪ, ನ್ಯಾಯಮೂರ್ತಿ ಸಂತೋಷ ಹೆಗ್ಡೆ, ಚಿತ್ರನಟ ಶ್ರೀ.ಕಿಶೋರ್ ಹೋರಾಟವನ್ನು ಅಭಿನಂದಿಸಿ ತಮ್ಮ ಸಂದೇಶವನ್ನು ಕಳುಹಿಸಿದರು.

ಪ್ರಾಥಮಿಕ ಶಿಕ್ಷಣ ಇಲಾಖೆಯ ನಿರ್ದೇಶಕರಾದ ಶ್ರೀಮತಿ ಅನಿತಾ ನಜಾರೆ, ಸರ್ಕಾರದ ಪರವಾಗಿ ಸಮಾವೇಶಕ್ಕೆ ಆಗಮಿಸಿ ರಾಜ್ಯದ ಜನತೆಯು ನೀಡಿದ 50 ಲಕ್ಷ ಸಹಿಗಳನ್ನು ಸ್ವೀಕರಿಸಿದರು. ರಾಜ್ಯದ ಸರ್ಕಾರಿ ಶಾಲೆಗಳು ಎದುರಿಸುತ್ತಿರುವ ಗಂಭೀರ ಸಮಸ್ಯೆಗಳಾದ ಶಿಕ್ಷಕರ ಕೊರತೆ ಹಾಗೂ ಮೂಲಭೂತ ಸೌಕರ್ಯಗಳ ಕೊರತೆಯನ್ನು ನೀಗಿಸುವಂತೆ ಒತ್ತಾಯಿಸಿದ ಮನವಿ ಪತ್ರವನ್ನು ಅವರಿಗೆ ಸಲ್ಲಿಸಲಾಯಿತು.

ಕಾರ್ಯಕ್ರಮದ ನಿರೂಪಣೆಯನ್ನು ಎಐಡಿಎಸ್‌ಓ ರಾಜ್ಯ ಉಪಾಧ್ಯಕ್ಷರಲ್ಲಿ ಒಬ್ಬರಾದ ಕಾ. ಅಭಯಾ ದಿವಾಕರ್ ನಡೆಸಿಕೊಟ್ಟರು. ಎಐಡಿಎಸ್‌ಓದ ಇನ್ನಿತರ ರಾಜ್ಯ ನಾಯಕರು ಹಾಗೂ ರಾಜ್ಯದ ವಿವಿಧ ಶಾಲಾ – ಕಾಲೇಜಿನ ಸಾವಿರಾರು ವಿದ್ಯಾರ್ಥಿಗಳು ಭಾಗವಹಿಸಿದ್ದರು.


ಸಮರಶೀಲ ಹೋರಾಟಗಾರರು

## 'ಸರ್ಕಾರಿ ಶಾಲೆ ಮುಚ್ಚುವುದಿಲ್ಲ'– ಶಿಕ್ಷಣ ಸಚಿವ ಮಧು ಬಂಗಾರಪ್ಪ ಸ್ಪಷ್ಟನೆ

### ರಾಜ್ಯದ ವಿದ್ಯಾರ್ಥಿಗಳು ಹಾಗೂ ಜನತೆಯ ಹೋರಾಟಕ್ಕೆ ಸಂದ ಜಯ!

**ಕಡಿಮೆ ದಾಖಲಾತಿ ಕಾರಣದಿಂದ ರಾಜ್ಯದಲ್ಲಿ ಒಂದೇ ಒಂದು ಸರ್ಕಾರಿ ಶಾಲೆಯನ್ನು ಮುಚ್ಚಿಲ್ಲ ಮತ್ತು ಭವಿಷ್ಯದಲ್ಲೂ ಯಾವುದೇ ಶಾಲೆಗಳನ್ನು ಮುಚ್ಚುವುದಿಲ್ಲ ಎಂದು ವಿಧಾನಸಭೆಯಲ್ಲಿ ಶಿಕ್ಷಣ ಸಚಿವರು ನೀಡಿದ ಹೇಳಿಕೆಯನ್ನು ಎಐಡಿಎಸ್‌ಓ ರಾಜ್ಯ ಕಾರ್ಯದರ್ಶಿ ಕಾ. ಅಜಯ್ ಕಾಮತ್ ಸ್ವಾಗತಿಸಿದ್ದಾರೆ. ಸರ್ಕಾರಿ ಶಾಲೆಗಳನ್ನು ಮುಚ್ಚುವ ಅಥವಾ ವಿಲೀನಗೊಳಿಸುವ ಸರ್ಕಾರದ ಹಿಂದಿನ ನಿರ್ಧಾರವನ್ನು ಬಲವಾಗಿ ವಿರೋಧಿಸಿ, ರಾಜ್ಯಾದ್ಯಂತ ಎಐಡಿಎಸ್‌ಓ ಹಮ್ಮಿಕೊಂಡಿದ್ದ 50 ಲಕ್ಷ ಸಹಿ ಸಂಗ್ರಹ ಅಭಿಯಾನಕ್ಕೆ ವಿದ್ಯಾರ್ಥಿಗಳು, ಪೋಷಕರು, ಶಿಕ್ಷಕರು, ಬುದ್ಧಿಜೀವಿಗಳು ಮತ್ತು ನಾಗರಿಕರು ಸೇರಿದಂತೆ ಲಕ್ಷಾಂತರ ಜನರು ಮುಂಬಂದು ಬೆಂಬಲ ನೀಡಿದ್ದಾರೆ. ಇದು ಜನರ ಒಗ್ಗಟ್ಟಿನ ಪ್ರಯತ್ನದ ಮೂಲಕ ಜನ ಚಳವಳಿಗೆ ಸಂದ ಜಯ. ಆದರೆ, ಸರ್ಕಾರದ ಹಿಂದಿನ ಆದೇಶ ಇನ್ನೂ ಜಾರಿಯಲ್ಲಿದೆ. ಹೀಗಾಗಿ, ಅದನ್ನು ಅಧಿಕೃತವಾಗಿ ಹಿಂತೆಗೆದುಕೊಳ್ಳುವವರೆಗೂ ರಾಜ್ಯದ ವಿದ್ಯಾರ್ಥಿಗಳು ಮತ್ತು ಜನರು ಎಚ್ಚರದಿಂದ ಮತ್ತು ಒಗ್ಗಟ್ಟಾಗಿ ಇರಬೇಕು ಎಂದವರು ಮನವಿ ಮಾಡಿದ್ದಾರೆ. ಹಾಗೂ, ಸರ್ಕಾರ, ಶಿಥಿಲಗೊಂಡಿರುವ 21000 ಕ್ಕೂ ಹೆಚ್ಚು ಶಾಲಾ ಕಟ್ಟಡಗಳ ದುರಸ್ತಿ ಮತ್ತು ಪುನರ್ ನಿರ್ಮಾಣ ಮಾಡಲು ಕ್ರಮ ಕೈಗೊಳ್ಳಬೇಕು. 61000 ಹೆಚ್ಚು ಖಾಲಿ ಇರುವ ಬೋಧಕರ ಹುದ್ದೆಗಳನ್ನು ತುರ್ತಾಗಿ ಭರ್ತಿ ಮಾಡಿಕೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.**



# ಗುಜರಾತ್ – ಬಿಹಾರ: ಕುಸಿದ ಸೇತುವೆಗಳು ಹೊಣೆ ಯಾರದ್ದು?

2025ರ ಜುಲೈ 9 ರಂದು ಮುಂಜಾನೆ 7.30 ರ ಸುಮಾರಿಗೆ ವಡೋದರಾ ಜಿಲ್ಲೆಯ ಮುಜ್ಪುರ್‌ನಿಂದ ಆನಂದ್ ಜಿಲ್ಲೆಯ ಗಂಭೀರಾವನ್ನು ಸಂಪರ್ಕಿಸುವ ಒಂದು ಕಿಲೋಮೀಟರ್ ಉದ್ದದ ಸೇತುವೆ ಕುಸಿಯಿತು. ಸೇತುವೆ ಮೇಲೆ ಚಲಿಸುತ್ತಿದ್ದ ವಾಹನಗಳು ಮಹಿಸಾಗರ್ ನದಿ ಸೇರಿದವು. ಟ್ಯಾಂಕರ್ ಒಂದು ನದಿ ಅಂಚಿನಲ್ಲಿ ತೂರಾಡುತ್ತಿದ್ದ ದೃಶ್ಯ ದುಗುಡ ಹುಟ್ಟಿಸುವಂತಿತ್ತು. ಘಟನೆ ಸಂಭವಿಸುತ್ತಿದ್ದಂತೆಯೇ, ನಲವತ್ತು ವರ್ಷಗಳಷ್ಟು ಹಳೆಯದಾದ ಈ ಸೇತುವೆಯ "ಅಪಾಯಕಾರಿ ಸ್ಥಿತಿ" ಬಗ್ಗೆ ಅಧಿಕಾರಿಗಳು ಅನೇಕ ಬಾರಿ ಎಚ್ಚರಿಕೆ ನೀಡಿದ್ದರೂ ಅವುಗಳನ್ನೆಲ್ಲಾ ನಿರ್ಲಕ್ಷಿಸಲಾಗಿದೆಯೆಂಬ ಆರೋಪಗಳು ಕೇಳಿಬಂದವು. 2022ರಲ್ಲಿ ಒಮ್ಮೆ ಈ ಕುರಿತಾಗಿ ಸರ್ಕಾರಿ ಅಧಿಕಾರಿಗಳನ್ನು ಎಚ್ಚರಿಸಿದಾಗ ಈ ಸೇತುವೆ "ದೀರ್ಘಕಾಲ ಉಳಿಯಲಾರದು" ಎಂದು ಅವರು ಒಪ್ಪಿಕೊಂಡಿದ್ದರು ಎಂಬುದು ಕೂಡ ಈಗ ಬೆಳಕಿಗೆ ಬಂದಿದೆ.

ಆದರೂ, ಯಾವುದೇ ತುರ್ತು ದುರಸ್ತಿ ಕ್ರಮವನ್ನೂ ಕೈಗೊಂಡಿರಲಿಲ್ಲ. ಖಾಸಗಿ ಸಲಹೆಗಾರರೊಬ್ಬರು ಸೇತುವೆ ಹೆಚ್ಚು ಕಾಲ ಉಳಿಯುವುದಿಲ್ಲ ಎಂಬ ತಮ್ಮ ಸಮೀಕ್ಷೆಯ ವರದಿಯನ್ನು ಒಪ್ಪಿಸಿದ್ದರು ಎಂಬುದನ್ನು ರಸ್ತೆ ಮತ್ತು ಕಟ್ಟಡ (ಆರ್&ಬಿ) ಇಲಾಖೆಯ ಅಧಿಕಾರಿಯೊಬ್ಬರು ಒಪ್ಪಿಕೊಂಡಿದ್ದಾರೆ: "ಸೇತುವೆ ಹೆಚ್ಚು ಕಾಲ ಉಳಿಯುವುದಿಲ್ಲ ಎಂದು ನಾವೂ ನಂಬುತ್ತೇವೆ... ಆದರೆ ನಾವು ಸೇತುವೆಯನ್ನು ಹೇಗೆ ಮುಚ್ಚಬಹುದು? ನಾವು ನಮ್ಮ ಮೇಲಧಿಕಾರಿಗಳಿಗೆ ಮಾಹಿತಿ ನೀಡಿದ್ದೇವೆ. ಸೇತುವೆಯನ್ನು ಪುನಃ ನಿರ್ಮಿಸಲು ಅಥವಾ ಬಲಪಡಿಸಲು ಪ್ರಸ್ತಾವನೆಯನ್ನು ಕಳುಹಿಸಲಾಗಿದೆ. ನಮ್ಮ ವಿನ್ಯಾಸ ತಂಡವು ಅದನ್ನು ಪರಿಶೀಲಿಸುತ್ತದೆ." ಆದಾಗ್ಯೂ, ಆರ್&ಬಿ ಇಲಾಖೆಯ ವಡೋದರಾ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್, ಈ ತಪಾಸಣೆಯ ಸಮಯದಲ್ಲಿ ಯಾವುದೇ ಪ್ರಮುಖ ರಚನಾತ್ಮಕ ದೋಷಗಳೂ ತಮ್ಮ ಇಲಾಖೆಯ ಗಮನಕ್ಕೆ ಬಂದಿರಲಿಲ್ಲ ಎಂದು ಹೇಳುತ್ತಾರೆ: "ಸೇತುವೆ ಮುಚ್ಚುವ ಯಾವುದೇ ಬೇಡಿಕೆಯೂ ಇರಲಿಲ್ಲ. ನಮ್ಮ ವರದಿಗಳು ಗಂಭೀರ ಹಾನಿಯನ್ನು ಸೂಚಿಸಲಿಲ್ಲ. ಬೇರಿಂಗ್ ಕೋಟ್‌ನಲ್ಲಿ ಸಮಸ್ಯೆ ಇತ್ತು, ಆದರೆ ಅದನ್ನು ಕಳೆದ ವರ್ಷ ದುರಸ್ತಿ ಮಾಡಲಾಗಿದೆ", ಎಂದಿದ್ದಾರೆ. ಇಂತಹ ಹೇಳಿಕೆಗಳು ಮತ್ತು ಪ್ರತಿವಾದಗಳ ನಡುವೆ, ರಸ್ತೆಗಳು ಮತ್ತು ಕಟ್ಟಡಗಳ ಇಲಾಖೆಯನ್ನು ನಿರ್ವಹಿಸುತ್ತಿರುವ ಗುಜರಾತ್‌ನ ಬಿಜೆಪಿ ಮುಖ್ಯಮಂತ್ರಿ ತಮ್ಮ ಮಾನ ಕಾಪಾಡಿಕೊಳ್ಳಲು ನಾಲ್ಕು ಇಂಜಿನಿಯರ್‌ಗಳನ್ನು ಅಮಾನತುಗೊಳಿಸಿದರು. ತಮ್ಮ ಇಲಾಖೆಯಿಂದಲೇ ಜರುಗಿದ ಇಷ್ಟು ದೊಡ್ಡ ಮಟ್ಟದ ಅವಘಡಕ್ಕೆ ನಾಲ್ಕು ಜನರ ಮೇಲೆ ಗೂಬೆ ಕೂರಿಸಿ ಮುಖ್ಯ ಮಂತ್ರಿಗಳು ತಮ್ಮ ಕೈತೊಳೆದುಕೊಂಡರು!

ಸೇತುವೆಗಳು ಕುಸಿದಿರುವುದು ಇದೇನೂ ಮೊದಲಲ್ಲ. ಮೂರು ವರ್ಷಗಳ ಹಿಂದೆ, 2022 ರಲ್ಲಿ, ರಾಜ್ಯದ ಪ್ರವಾಸಿ ಆಕರ್ಷಣೆ "ತಾಂತ್ರಿಕ ಅದ್ಭುತ" ಎಂದೆಲ್ಲಾ ಪ್ರಚಾರ ಮಾಡಿದ್ದ ಗುಜರಾತ್‌ನ ಮೊರ್ಬಿ ಪಟ್ಟಣದ 754 ಅಡಿ ಉದ್ದ ಮತ್ತು 4.5 ಅಡಿ ಅಗಲದ ತೂಗು ಪಾದಚಾರಿ ಸೇತುವೆ ನದಿಗೆ ಬಿದ್ದು, 140 ಜೀವಗಳನ್ನು ಬಲಿ ತೆಗೆದುಕೊಂಡಿತು, ಅಸುನೀಗಿದವರಲ್ಲಿ ಮೂರನೇ ಒಂದು ಭಾಗ ಮಕ್ಕಳು. ಸೇತುವೆಯನ್ನು ಮಾರ್ಚ್ 2022 ರಿಂದ ಮುಚ್ಚಲಾಗಿತ್ತು ಮತ್ತು 2008 ರಿಂದ ಸೇತುವೆಯನ್ನು ನಿರ್ವಹಿಸಲು ಗುತ್ತಿಗೆ ಪಡೆದ ಕೈಗಾರಿಕೋದ್ಯಮಿ ಜಯ್‌ಸುಖಭಾಯಿ ಪಟೇಲ್ ಒಡೆತನದ ಒರೆವಾ ಗ್ರೂಪ್ ಅದನ್ನು ನವೀಕರಿಸುತ್ತಿತ್ತು. ಗುಜರಾತಿ ಹೊಸ ವರ್ಷಕ್ಕೆ ಹೊಂದಿಕೆಯಾಗುವಂತೆ ಅಕ್ಟೋಬರ್ 26, 2022 ರಂದು ಇದನ್ನು ಸಾರ್ವಜನಿಕರಿಗೆ ತೆರೆಯಲಾಗಿತ್ತು. ಒಂದು ದಿನ ಮುಂಚಿತವಾಗಿ, ಜಯ್‌ಸುಖಭಾಯಿ ಪಟೇಲ್ ಸುದ್ದಿಗೋಷ್ಠಿಯಲ್ಲಿ ನವೀಕರಣ ಕಾರ್ಯಕ್ಕೆ 20 ಮಿಲಿಯನ್ ರೂಪಾಯಿ ವೆಚ್ಚವಾಗಿದೆ ಎಂದು ಹೇಳಿದ್ದರು. ದುರಸ್ತಿ ಕಾರ್ಯದ ಗುಣಮಟ್ಟ, ಯಂತ್ರೋಪಕರಣಗಳು ಮತ್ತು ಸಂಸ್ಥೆ ನೇಮಿಸಿಕೊಂಡ ಗುತ್ತಿಗೆದಾರರನ್ನು ಹೊಗಳಿದ್ದಲ್ಲದೇ, "ಮುಂದಿನ 8–10 ವರ್ಷಗಳವರೆಗೆ ಸೇತುವೆಗೆ ಏನೂ ಆಗುವುದಿಲ್ಲ" ಮತ್ತು "ಜವಾಬ್ದಾರಿಯುತವಾಗಿ ಬಳಸಿದರೆ, 15 ವರ್ಷಗಳವರೆಗೆ ಯಾವುದೇ ದುರಸ್ತಿ ಅಗತ್ಯವಿಲ್ಲ" ಎಂದೂ ಹೇಳಿದ್ದರು! ಅಪಘಾತದ ನಂತರ, ಪೊಲೀಸರು ಒರೆವಾ ಕಂಪನಿಗೆ ಸಂಬಂಧಿಸಿದ ಇಬ್ಬರು ವ್ಯವಸ್ಥಾಪಕರು ಮತ್ತು ಇಬ್ಬರು ಗುಮಾಸ್ತರು, ಹಾಗೆಯೇ ಇಬ್ಬರು ಗುತ್ತಿಗೆದಾರರು ಮತ್ತು ಮೂವರು ಭದ್ರತಾ ಸಿಬ್ಬಂದಿ, ಒಟ್ಟು ಒಂಬತ್ತು ಜನರನ್ನು ಬಂಧಿಸಿದ್ದರು. ಅವರ ಮೇಲೆ ಕೊಲೆ ಎಂದು ಪರಿಗಣಿಸಲಾಗದ ಅಪರಾಧವಾದ ನರಹತ್ಯೆ ಆರೋಪದ ಮೇಲೆ ತನಿಖೆ ನಡೆಸಲಾಗುತ್ತಿದೆ. ಆದರೆ ಈ ಪ್ರಕರಣದಲ್ಲಿ ಯಾವೊಬ್ಬರಿಗೂ ಇಂದಿಗೂ ಶಿಕ್ಷೆಯಾಗಿಲ್ಲ. ಬದಲಾಗಿ ಮುಖ್ಯ ಆರೋಪಿ ಜಯ್‌ಸುಖಭಾಯಿ ಪಟೇಲನಿಗೆ ಮೊರ್ಬಿ ಜಿಲ್ಲೆಯಲ್ಲಿ 2024 ರಲ್ಲಿ ನಡೆದ ಪಾಟಿದಾರ್ ಸಭೆಯಲ್ಲಿ ಸನ್ಮಾನ ದೊರಕಿತು! ಒರೆವಾ ಕಂಪನಿಯು "ಅನರ್ಹ" ಗುತ್ತಿಗೆದಾರರನ್ನು ನೇಮಿಸಿಕೊಂಡಿದೆ ಮತ್ತು "ಕಳಪೆ" ದುರಸ್ತಿ ನಡೆಸಿದೆ ಎಂದು ಆರೋಪಿಸಿ ಗುಜರಾತ್ ಸರ್ಕಾರ ತನ್ನ ಜವಾಬ್ದಾರಿಗಳಿಂದ ಕೈತೊಳೆದುಕೊಂಡಿತು. ಕಾಮಗಾರಿ ಕಳಪೆ ಎಂದು ತಿಳಿದಿದ್ದರೂ ಅತಿ ಹೆಚ್ಚು ಜನಸಂದಣಿ ಇರುವ ದಿನ ಸೇತುವೆಯನ್ನು ಸಾರ್ವಜನಿಕರಿಗೆ ಏಕೆ ತೆರೆಯಲಾಯಿತು? ಕೈಗಾರಿಕೋದ್ಯಮಿ ಜಯ್‌ಸುಖ್ ಪಟೇಲನನ್ನು ಅಪಘಾತಕ್ಕೆ ಸಂಬಂಧಿಸಿದಂತೆ ಬಂಧಿಸಲಾಗಿದ್ದರೂ ಸುಪ್ರೀಂ ಕೋರ್ಟ್ ಮಾರ್ಚ್ 2024 ರಲ್ಲಿ ಅವರಿಗೆ ಜಾಮೀನು ನೀಡಿದ ಕೆಲವೇ ದಿನಗಳಲ್ಲಿ ಆತ ಸ್ಥಳೀಯ ನ್ಯಾಯಾಲಯದ ಬಿಡುಗಡೆ ಆದೇಶದೊಂದಿಗೆ ಜೈಲಿನಿಂದಲೂ ಹೊರಬಂದರು.

ಕಥೆ ಇನ್ನೂ ಮುಗಿದಿಲ್ಲ! ಬಿಜೆಪಿ ತನ್ನ ಕೈಗೊಂಬೆ ಜೆಡಿ(ಯು) ನೊಂದಿಗೆ ಅಧಿಕಾರ ಹಂಚಿಕೊಂಡಿರುವ, ಇನ್ನು ಕೆಲವೇ ದಿನಗಳಲ್ಲಿ ಚುನಾವಣೆ ಎದುರಿಸಲಿರುವ ಬಿಹಾರದಲ್ಲಿ ಜುಲೈ 2024 ರ ಎರಡು ವಾರಗಳಲ್ಲೇ 12 ಸೇತುವೆಗಳು ಕುಸಿದವು. "ಬಿಚ್ಲೆ ಪುಲ್" ಎಂದೂ ಕರೆಯಲ್ಪಡುವ ಸೇತುವೆಯ ಕುಸಿತದಿಂದ ಕನಿಷ್ಠ 80,000 ಜನರು ತೊಂದರೆಗೊಳಗಾದರು. ಮತ್ತೊಂದು ಸೇತುವೆಯನ್ನು 2012 ರಲ್ಲಿ ಮುಖ್ಯಮಂತ್ರಿ ಗ್ರಾಮೀಣ ಸಡಕ್ ಯೋಜನೆ ಅಡಿಯಲ್ಲಿ ನಿರ್ಮಿಸಲಾಗಿತ್ತು. ಆ ಪ್ರದೇಶದಿಂದ ಖಗಾರಿಯಾಗೆ ಪ್ರಯಾಣಿಸಲು ಯಾವುದೇ ರಸ್ತೆ ಸಂಪರ್ಕ ಇಲ್ಲದ ಕಾರಣ ಈ ಸೇತುವೆ ಸಂಪರ್ಕದ ಏಕೈಕ ಮಾರ್ಗವಾಗಿತ್ತು.

ಗಂಗಾ ನದಿಯ ಮೇಲೆ ನವಯುಗ್ ಇಂಜಿನಿಯರಿಂಗ್ ಕಂಪನಿ ಲಿಮಿಟೆಡ್, ಎಲ್ಲಾ ಹವಾಮಾನಗಳಿಗೆ ಆಗುವಂತಹ ವೇಗದ ಸೇತುವೆಯ ಒಂದು ಭಾಗವನ್ನು ನಿರ್ಮಿಸಿದ್ದು, ಅದೂ ಕುಸಿಯಿತು. ಈ ಕಾಮಗಾರಿಯನ್ನು ರಾಜ್ಯ ಸರ್ಕಾರದ ನಿಯಂತ್ರಣದಲ್ಲಿರುವ ರಾಜ್ಯ ರಸ್ತೆ ಅಭಿವೃದ್ಧಿ ನಿಗಮ ಲಿಮಿಟೆಡ್ (ಬಿಎಸ್‌ಆರ್‌ಡಿಸಿಎಲ್) ನೋಡಿಕೊಳ್ಳುತ್ತಿತ್ತು. ಸಮಸ್ತಿಪುರದ ನಂದನಿ ಲಗುನಿಯಾ ರೈಲ್ವೆ ನಿಲ್ದಾಣದ ಬಳಿ ಈ ಸೇತುವೆ ಕುಸಿದಿತ್ತು. ಸೇತುವೆ ಕುಸಿದಿರುವುದು ತಿಳಿಯಬಾರದೆಂದು ಅಧಿಕಾರಿಗಳು ಬಿದ್ದಿರುವ ಭಾಗಗಳನ್ನು ಮಣ್ಣಿನ ಅಡಿಯಲ್ಲಿ ಹೂಳಲು ಪ್ರಯತ್ನಿಸುತ್ತಿದ್ದರೆಂಬ ಆರೋಪಗಳು ಕೇಳಿಬಂದವು.

ಹೀಗೆ ಕಾಮಗಾರಿಯ ಮಧ್ಯದಲ್ಲೇ ಕುಸಿದ ಬಿಹಾರದ ಅನೇಕ ಸೇತುವೆಗಳು ದೇಶದಾದ್ಯಂತ ಸುದ್ದಿಮಾಡಿವೆ, ಜೊತೆಗೆ ಕಾಮಗಾರಿಯಲ್ಲಿನ ಗುಣಮಟ್ಟದ ಕುಸಿತದ ಬಗ್ಗೆಯೂ ಅನೇಕ ಪ್ರಶ್ನೆ, ಆತಂಕಗಳನ್ನು ಎಬ್ಬಿಸಿವೆ. ಕಳಪೆ ಗುಣಮಟ್ಟದ ಸಾಮಗ್ರಿಗಳು, ನುರಿತ ಕಾರ್ಮಿಕರ ಕೊರತೆ, ಭ್ರಷ್ಟಾಚಾರ ಮತ್ತು ಅಸಮರ್ಪಕ ಯೋಜನಾ ನಿರ್ವಹಣೆಯ ಪಿಡುಗಿಗೆ ಈ ಸೇತುವೆಗಳು ಬಲಿಯಾಗಿವೆ. ಇಂತಹ ವೈಫಲ್ಯಗಳಿಂದ ಆರ್ಥಿಕ ನಷ್ಟ, ನಿರ್ಣಾಯಕ ಸಂಪರ್ಕ ಯೋಜನೆಗಳಲ್ಲಿ ವಿಳಂಬಗಳಾಗುವುದಲ್ಲದೇ ಜೀವಹಾನಿಯ ಭೀತಿ ಕಾಡುತ್ತದೆ.

ಸೇತುವೆಗಳು ಪದೇ ಪದೇ ಕುಸಿಯುತ್ತಿವೆ, ಆದರೆ ಅಪರಾಧಿಗಳನ್ನು ಗುರುತಿಸಿ ಕಠಿಣವಾಗಿ ಶಿಕ್ಷಿಸುತ್ತಿರುವ ಉದಾಹರಣೆಯೇ ಇಲ್ಲ! ಕೆಲವೇ ಕೆಲವು ಕೆಳ ದರ್ಜೆಯ ಅಧಿಕಾರಿಗಳನ್ನು ಕೆಂಗಣ್ಣಿಗೆ ಗುರಿಯಾಗಿಸಿ ಶಿಕ್ಷಿಸಲಾಗುತ್ತಿದೆಯೇ ಹೊರತು ಜವಾಬ್ದಾರಿ ಹೊರಬೇಕಾದ ಸರ್ಕಾರಗಳು ಸಲೀಸಾಗಿ ಪಾರಾಗುತ್ತಿವೆ. ಸರ್ಕಾರವು ಸಂಸ್ಥೆಗಳನ್ನು ಯಾವ ಆಧಾರದ ಮೇಲೆ ನೇಮಿಸುತ್ತಿದೆ? ಸರ್ಕಾರಿ ಅಧಿಕಾರಿಗಳಿಂದ ಕಾಮಗಾರಿಗಳ ತಪಾಸಣೆಗಳು ತೋರಿಕೆಗಲ್ಲದೆ ನೈಜವಾಗಿ ನಡೆಯುತ್ತಿವೆಯೆ? ಇಷ್ಟೆಲ್ಲಾ ತಪಾಸಣೆಗಳು ನಡೆದ ಮೇಲೂ ಸೇತುವೆಗಳು ನೆಲಕಚ್ಚುತ್ತಿರುವಾಗ ಮತ್ತಾವ ಕಾರಣ ಹುಡುಕಬೇಕು? ದೇವರ ಕೈವಾಡವೆಂದೇ?

2016ರಲ್ಲಿ ಕೋಲ್ಕತ್ತಾದಲ್ಲಿ ನಿರ್ಮಾಣ ಹಂತದಲ್ಲಿದ್ದ ಮೇಲ್ಸೇತುವೆಯೊಂದು ಕುಸಿದಾಗ, ಪ್ರಧಾನಿ ಮೋದಿ, "ಅಂತಹ ದೊಡ್ಡ ಅವಘಢ ನಡೆದಿದೆ. ಆದರೂ ಆಕೆ(ಪಶ್ಚಿಮಬಂಗಾಳದ ಟಿ.ಎಂ.ಸಿ ಮುಖ್ಯಮಂತ್ರಿ) ಇನ್ನೊಬ್ಬರ ಮೇಲೆ ಆಪಾದನೆ ಹೊರೆಸುತ್ತಿದ್ದಾರೆ" ಎಂದು ದೂರಿದ್ದರು. ಹಿಂದಿನ ಸಿಪಿಐ(ಎಂ) ಆಡಳಿತದ ಅವಧಿಯಲ್ಲಿ ಸೇತುವೆಯ ಗುತ್ತಿಗೆ ನೀಡಲಾಗಿತ್ತು. ಈ ಮೇಲ್ಸೇತುವೆ ಪೂರ್ಣಗೊಂಡಿದ್ದಲ್ಲಿ ಮುಖ್ಯಮಂತ್ರಿ ಶ್ರೇಯಸ್ಸನ್ನು ತನ್ನ ಮುಡಿಗೇರಿಸಿಕೊಳ್ಳುತ್ತಿದ್ದರು ಎಂದು ಮಾನ್ಯ ಪ್ರಧಾನಿಗಳು ವ್ಯಂಗವಾಡಿದ್ದರು.

ಗುಜರಾತ್ ಅಥವಾ ಬಿಹಾರದಲ್ಲಿ ಸೇತುವೆಗಳು ಕುಸಿಯುತ್ತಿರುವಾಗ, ಪದೇ ಪದೇ ಘೋರ ರೈಲು ಅಪಘಾತಗಳು ಜರುಗುತ್ತಿರುವಾಗ, ಅಥವಾ ಪ್ರಯಾಗ್‌ರಾಜ್‌ನಲ್ಲಿ ನಡೆದ ಮಹಾ ಕುಂಭಮೇಳದಲ್ಲಿ ನೂಕುನುಗ್ಗಲಿನಲ್ಲಿ 100 ಕ್ಕೂ ಹೆಚ್ಚು ಜನರು ಸಾವಿಗೀಡಾದಾಗ, ಪ್ರಧಾನ ಮಂತ್ರಿಗಳ ಇದೇ ತರ್ಕ ಅನ್ವಯಿಸುವುದಿಲ್ಲವೇಕೆ? ಇವೆಲ್ಲಕ್ಕೂ ಯಾರು ಜವಾಬ್ದಾರರು?

ಲಂಚ ಮತ್ತು ಅಧಿಕಾರಕ್ಕಾಗಿ ಕೊಳೆತ ಬಂಡವಾಳಶಾಹಿ ವ್ಯವಸ್ಥೆಯನ್ನು ರಕ್ಷಿಸುವ ಮತ್ತು ಅದರ ಸೇವೆಗೆಯ್ಯುವ ಯಾರೂ ಭ್ರಷ್ಟಾಚಾರ, ದುಷ್ಕೃತ್ಯಗಳಿಂದ ಪಾರಾಗಲು ಸಾಧ್ಯವಿಲ್ಲ. ರಾಜ್ಯ ಹಾಗೂ ಕೇಂದ್ರದ ಅಧಿಕಾರ ಯಾವ ಪಕ್ಷದ ಕೈಯಲ್ಲಾದರೂ ಇರಲಿ, ವ್ಯವಸ್ಥೆಗೆ ಸಂಪೂರ್ಣವಾಗಿ ಭ್ರಷ್ಟಾಚಾರದ ಪಿಡುಗು ಹತ್ತಿದೆ. ಯಾರೂ ಭ್ರಷ್ಟಾಚಾರದಿಂದ ಮುಕ್ತರಾಗಿಲ್ಲ ಅಥವಾ ಭ್ರಷ್ಟಾಚಾರ ಮತ್ತು ದುಷ್ಕೃತ್ಯಗಳಿಗೆ ಬೆಂಬಲ ನೀಡದೆ ಇರುವವರು ಯಾರೂ ಇಲ್ಲ. ಎಲ್ಲಾ ಬೂರ್ಜ್ವಾ ಪಕ್ಷಗಳು ಮತ್ತು ಅವುಗಳ ಅಧಿಕಾರದಾಹಿ ನಾಯಕರು ಒಂದೇ! ಎಲ್ಲರೂ ತಮ್ಮ ಹೆಗಲಿನಿಂದ ಜವಾಬ್ದಾರಿಯನ್ನು ಕೆಳಕ್ಕೆಸಿಯುವವರೇ! ತಮ್ಮ ಪಾಪದ ಕೆಲಸವನ್ನು 'ದೈವೀ ಕೃತ್ಯ' ಎನ್ನುವ ನಿರ್ಲಜ್ಜರು ಇವರು! ■

# ಹಿಮಾಲಯ ರಾಜ್ಯಗಳಲ್ಲಿ ನೈಸರ್ಗಿಕ ವಿಕೋಪಗಳು: ಎಸ್‌ಯುಸಿಐ(ಸಿ) ತೀವ್ರ ಆಘಾತ!





**ಎಸ್‌ಯುಸಿಐ(ಸಿ) ಪಕ್ಷದ ಪ್ರಧಾನ ಕಾರ್ಯದರ್ಶಿಗಳಾದ ಕಾ. ಪ್ರವಾಶ್ ಘೋಷ್ ಈ ಕೆಳಗಿನ ಹೇಳಿಕೆಯನ್ನು ನೀಡಿದ್ದಾರೆ:**

ಕಳೆದ 15 ದಿನಗಳಲ್ಲಿ, ಹಿಮಾಲಯದ ಹಿಮಾಚಲ ಪ್ರದೇಶ, ಉತ್ತರಾಖಂಡ್ ಮತ್ತು ಕಾಶ್ಮೀರ ಪ್ರಾಂತ್ಯಗಳಲ್ಲಿ ಸಂಭವಿಸಿದ ಮೇಘಸ್ಫೋಟ, ಪ್ರವಾಹ ಮತ್ತು ಭೂಕುಸಿತಗಳು ಅನೇಕ ಪ್ರದೇಶಗಳನ್ನು ಅಪ್ಪಳಿಸಿವೆ. ಈ ಘಟನೆಗಳಿಂದ ಸುಮಾರು 100 ಅಮೂಲ್ಯ ಜೀವಗಳು ಬಲಿಯಾಗಿವೆ, ಅಪಾರ ಪ್ರಮಾಣದ ಆಸ್ತಿಪಾಸ್ತಿಗಳಿಗೆ ಹಾನಿಯಾಗಿದೆ ಮತ್ತು ರಸ್ತೆ ಹಾಗೂ ರೈಲು ಸೇವೆಗಳು ಅಸ್ತವ್ಯಸ್ತಗೊಂಡಿವೆ ಎಂದು ತಿಳಿದು ನಾವು ತೀವ್ರ ಆಘಾತಕ್ಕೊಳಗಾಗಿದ್ದೇವೆ. ಅಧಿಕೃತ ಮೂಲಗಳು ಈ ಘಟನೆಗಳನ್ನು ಅನಿರೀಕ್ಷಿತ ನೈಸರ್ಗಿಕ ವಿಕೋಪಗಳು ಎಂದು ಹೇಳುತ್ತಿದ್ದರೂ, ವಾಸ್ತವವೇನೆಂದರೆ, ಧಾರ್ಮಿಕ ಪ್ರವಾಸೋದ್ಯಮಕ್ಕಾಗಿ ಮೂಲಸೌಕರ್ಯ ನಿರ್ಮಾಣ, ನೂರಾರು ಜಲವಿದ್ಯುತ್ ಸ್ಥಾವರಗಳು, ಅಣೆಕಟ್ಟುಗಳು, ಹೋಟೆಲುಗಳ ನಿರ್ಮಾಣ, ರಸ್ತೆಗಳನ್ನು ಅಗಲಗೊಳಿಸುವುದು ಮತ್ತು ಪರಿಸರ ವ್ಯವಸ್ಥೆಗೆ ಹಾನಿಯಾಗದಂತೆ ಹಾಗೂ ಭೂಕಂಪನ ಬಿರುಕುಗಳನ್ನು ಉಲ್ಬಣಗೊಳಿಸದಂತೆ ತಡೆಯಲು ವಿಜ್ಞಾನಿಗಳು ಮತ್ತು ತಜ್ಞರು ಮತ್ತೆ ಮತ್ತೆ ನೀಡಿರುವ ಎಚ್ಚರಿಕೆಗಳನ್ನು ಧಿಕ್ಕರಿಸಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕೈಗೊಂಡಿರುವ ಇಂತಹ 'ಅಭಿವೃದ್ಧಿ' ಕ್ರಮಗಳು ಈ ವಿಕೋಪಗಳಿಗೆ ಕಾರಣವಾಗಿವೆ. ಕೇವಲ ಬೃಹತ್ ನಿರ್ಮಾಣ ಕಂಪನಿಗಳಿಗೆ ದೊಡ್ಡ ಪ್ರಮಾಣದ ವಾಣಿಜ್ಯ ಲಾಭಗಳನ್ನು ಗಳಿಸಲು ಮತ್ತು ಪ್ರವಾಸೋದ್ಯಮದ ಮೂಲಕ ಆದಾಯ ಗಳಿಸಲು ಈ ಅವಿವೇಕಿ ನಿರ್ಧಾರಗಳನ್ನು ತೆಗೆದುಕೊಳ್ಳಲಾಗಿದೆ.

ಇದಲ್ಲದೆ, ಪಳೆಯುಳಿಕೆ ಇಂಧನಗಳನ್ನು ಸುಡುವುದರಿಂದ ಉಂಟಾಗುವ ಗ್ರೀನ್‌ಹೌಸ್ ಅನಿಲಗಳ ಅನಿಯಂತ್ರಿತ ಹೊರಸೂಸುವಿಕೆ, ಮೋಟಾರು ವಾಹನಗಳಿಂದ ವಿವಿಧ ವಾಯು ಮಾಲಿನ್ಯಕಾರಕಗಳ ನಿಯಂತ್ರಣವಿಲ್ಲದ ಹೊರಹೊಮ್ಮುವಿಕೆ, ಕಾರ್ಖಾನೆಗಳಿಂದ ಮಾಲಿನ್ಯ ವಿರೋಧಿ ನಿಯಮಗಳನ್ನು ಉಲ್ಲಂಘಿಸಿ ವಿಷಕಾರಿ ವಸ್ತುಗಳ ಹೊರಸೂಸುವಿಕೆ, ಇವು ಈ ಹವಾಮಾನ ವೈಪರೀತ್ಯಗಳಿಗೆ ಕಾರಣವಾಗಿವೆ. ಇದರಿಂದ ತಾಪಮಾನದಲ್ಲಿ ಅಸಹಜ ಏರಿಕೆ, ವಿಪರೀತ ಮಳೆ, ಹಿಮನದಿಗಳ ಕರಗುವಿಕೆ, ಬೆಟ್ಟಗಳ ರಚನೆಯಲ್ಲಿ ಬಿರುಕುಗಳು ಮತ್ತು ಆಗಾಗ್ಗೆ ಸಂಭವಿಸುವ ಹಾಗೂ ಹೆಚ್ಚು ಶಕ್ತಿಶಾಲಿ ಚಂಡಮಾರುತಗಳು ತೀವ್ರವಾದ ಮತ್ತು ಮಾರಣಾಂತಿಕ ಸಿಡಿಲುಗಳೊಂದಿಗೆ ಘಟಿಸುತ್ತಿವೆ.

ಹಾಗಾಗಿ, ಇವು ಪ್ರಕೃತಿಯ ವಿಕೋಪಗಳಲ್ಲ, ಬದಲಾಗಿ ಮಾನವ ನಿರ್ಮಿತ ದುರಂತಗಳು. ಸಂತ್ರಸ್ತ ಕುಟುಂಬಗಳಿಗೆ ಸೂಕ್ತ ಪರಿಹಾರ ಮತ್ತು ಸರಿಯಾದ ಪುನರ್ವಸತಿ ಒದಗಿಸುವಂತೆ ನಾವು ಒತ್ತಾಯಿಸುತ್ತೇವೆ. ಜಾಗತಿಕ ತಾಪಮಾನ ಏರಿಕೆ ಮತ್ತು ಹವಾಮಾನ ಬದಲಾವಣೆಯ ಸಮಸ್ಯೆಯನ್ನು ಪರಿಣಾಮಕಾರಿಯಾಗಿ ಎದುರಿಸಲು ಪ್ರಬಲ ಸಂಘಟಿತ ಜನರ ಚಳುವಳಿಗಳು ಮಾತ್ರ ಈ ಪುನರಾವರ್ತಿತ ವಿಕೋಪಗಳನ್ನು ತಡೆಯಬಹುದು ಎಂದು ನಾವು ಅಭಿಪ್ರಾಯ ಪಡುತ್ತೇವೆ. ■

## ಇತಿಹಾಸ ಪಠ್ಯಪುಸ್ತಕದಿಂದ ಮೊಘಲ್ ಕಾಲಕ್ಕೆ ಖೊಕ್!

# ಹಿಂದುತ್ವ ಬ್ರಿಗೇಡ್‌ನ ಹೇಯ ಪಿತೂರಿ!!

ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಮಂಡಳಿಯ (ಎನ್‌ಸಿಇಆರ್‌ಟಿ) ಶಿಫಾರಸ್ಸುಗಳನ್ನು ಅನುಸರಿಸಿ ಉತ್ತರ ಪ್ರದೇಶದ ಇತಿಹಾಸ ಶಾಲಾ ಪಠ್ಯಕ್ರಮಕ್ಕೆ ಸಂಬಂಧಿಸಿದಂತೆ ಇತ್ತೀಚೆಗೆ ಹೊರಡಿಸಲಾದ ನಿರ್ದೇಶನಗಳು ಐತಿಹಾಸಿಕ ತಿಳುವಳಿಕೆಯ ಸ್ವರೂಪ, ಮತ್ತದನ್ನು ತಮಗೆ ಬೇಕಾದ ರೀತಿಯಲ್ಲಿ ಪ್ರಸ್ತುತ ಪಡಿಸುವುದರ ಹಿಂದಿನ ಉದ್ದೇಶಗಳ ಬಗ್ಗೆ ತೀವ್ರ ಚರ್ಚೆಯನ್ನು ಹುಟ್ಟು ಹಾಕಿವೆ.

ಹನ್ನೆರಡನೇ ತರಗತಿಯ ಇತಿಹಾಸ ಪಠ್ಯಪುಸ್ತಕ, "ಭಾರತೀಯ ಇತಿಹಾಸದ ವಿಷಯಗಳು: ಭಾಗ–2", ಇದರಿಂದ ಮೊಘಲ್ ಆಸ್ಥಾನದ ಕುರಿತಾದ ಅಧ್ಯಾಯವನ್ನು ತೆಗೆದುಹಾಕಿರುವುದು ಒಂದು ಸಾಮಾನ್ಯ ಪ್ರತ್ಯೇಕ ಘಟನೆಯಲ್ಲ, ಬದಲಾಗಿ ಒಂದು ಗುಪ್ತ ಕಾರ್ಯಸೂಚಿಯೊಂದಿಗೆ ಇತಿಹಾಸವನ್ನು ಪರಿಷ್ಕರಿಸುವ ಅಥವಾ ಪುನರ್‌ರಚಿಸುವ ಪ್ರವೃತ್ತಿಯ ಕಡೆಗೆ ಹಾಕಿರುವ ಹೆಜ್ಜೆ. ಇದಕ್ಕೂ ಮೊದಲು, ಡಾರ್ವಿನ್‌ನ ವಿಕಾಸ ಸಿದ್ಧಾಂತ ಮತ್ತು ರಸಾಯನಶಾಸ್ತ್ರದ ಮೂಲಭೂತ ಸಿದ್ಧಾಂತವಾದ ಮೆಂಡಲಿಯೆಫ್ ಕೋಷ್ಟಕದಂತಹ ನಿರ್ಣಾಯಕ ವೈಜ್ಞಾನಿಕ ಆವಿಷ್ಕಾರಗಳನ್ನು ಕೈಬಿಟ್ಟಿರುವುದನ್ನು ನಾವು ನೋಡಿದ್ದೇವೆ. ಏಕೆಂದರೆ, ಅಪೇಕ್ಷಿತ ಧರ್ಮನಿರಪೇಕ್ಷ, ವೈಜ್ಞಾನಿಕ, ಪ್ರಜಾಪ್ರಭುತ್ವ ಶಿಕ್ಷಣಕ್ಕೆ ಮರಣಶಾಸನವಾದ ರಾಷ್ಟ್ರೀಯ ಶಿಕ್ಷಣ ನೀತಿ–2020 ಅನ್ನು ಜಾರಿಗೆ ತರಬೇಕಾದರೆ, ಸತ್ಯಕ್ಕೆ ಕೊಡಲಿ ಪೆಟ್ಟು ಹಾಕಿ, ವೈಜ್ಞಾನಿಕ ಮನೋಭಾವವನ್ನು ನಾಶಪಡಿಸುವುದು ಅಗತ್ಯವಾಗಿದೆ. ಭಾರತೀಯ ಪರಂಪರೆಯ ಸಮಗ್ರ ತಿಳುವಳಿಕೆಯನ್ನು ನೀಡುವ ನೆಪದಲ್ಲಿ, ಇತಿಹಾಸವನ್ನು ವಿಕೃತಗೊಳಿಸುವುದು, ಪುರಾಣವನ್ನು ಇತಿಹಾಸವೆಂದು ಎತ್ತಿತೋರಿಸುವುದು ಮತ್ತು ಆ ಮೂಲಕ ವಿದ್ಯಾರ್ಥಿಗಳ ಮನಸ್ಸಿನಲ್ಲಿ ದೋಷಪೂರಿತ ವಿಷಯಗಳನ್ನು ತೂರಿಸುವುದು ಈ ಕಾರ್ಯಸೂಚಿಯ ಭಾಗವಾಗಿದೆ ಮತ್ತು ಅವರನ್ನು ನೈಜ ಜ್ಞಾನದಿಂದ ವಂಚಿಸಲಾಗುತ್ತಿದೆ.

**ಇತಿಹಾಸವು ಪ್ರಭುತ್ವದ ಇಷ್ಟಾನಿಷ್ಟದ ವಿಷಯವಲ್ಲ**

ಇಲ್ಲಿ ಬರುವ ಮೂಲಭೂತ ಪ್ರಶ್ನೆಯೆಂದರೆ: ಇತಿಹಾಸವನ್ನು ಮನಸಿಗೆ ತೋಚಿದಂತೆ ಬದಲಾಯಿಸಬಹುದೇ? ಇತಿಹಾಸವು ಕೇವಲ ಯಾವುದೇ ವ್ಯಕ್ತಿಯ ಅಥವಾ ರಾಜಕೀಯ ಆದ್ಯತೆಯ ವಿಷಯವೇ? ಇತಿಹಾಸವು ಭೂತಕಾಲದ ಅಧ್ಯಯನವಾಗಿ, ಪುರಾವೆಗಳು, ವಿಶ್ಲೇಷಣೆ ಮತ್ತು ಸರಿಯಾದ ವ್ಯಾಖ್ಯಾನವನ್ನು ಆಧರಿಸಿದೆ. ಹೊಸ ಆವಿಷ್ಕಾರಗಳು ಮತ್ತು ದೃಷ್ಟಿಗಳೊಂದಿಗೆ ವ್ಯಾಖ್ಯಾನಗಳು ರೂಪುಗೊಳ್ಳುತ್ತವೆ ನಿಜ; ಆದರೆ ನಿರ್ದಿಷ್ಟ ಸಿದ್ಧಾಂತಕ್ಕೆ ಸರಿ ಹೊಂದುವಂತೆ ಸ್ಥಾಪಿತ ಐತಿಹಾಸಿಕ ಸಂಗತಿಗಳನ್ನು ಉದ್ದೇಶಪೂರ್ವಕವಾಗಿ ಬಿಟ್ಟುಬಿಡುವುದು ಅಥವಾ ಬದಲಾಯಿಸುವುದೆಂದರೆ, ಅದು ಇತಿಹಾಸವನ್ನೇ ನಿರಾಕರಿಸುವಂತಹ ಅಪಾಯಕಾರಿ ನಡೆ. ನಿಜವಾದ ಅರ್ಥದಲ್ಲಿ ಇತಿಹಾಸವೆಂದರೆ, ಅದು ಸಾಮಾಜಿಕ ಬೆಳವಣಿಗೆಯ ಅನಾವರಣದ ಮೂಲಕ ಸ್ಥಾಪಿಸಲಾಗುವ ನಿರಾಕರಿಸಲಾಗದ ಸತ್ಯ. ಮುನ್ನೂರು ವರ್ಷಗಳ ಮೊಘಲ್ ಇತಿಹಾಸವನ್ನು (1526–1857) ಪಠ್ಯಪುಸ್ತಕಗಳಿಂದ ಅಳಿಸಿಹಾಕುವ ಪ್ರಯತ್ನವು ಭೂತಕಾಲದ ಒಂದು ಪ್ರಮುಖ ಹಂತವನ್ನು ಕೈಬಿಡುವ ಕ್ರಮವಾಗಿದೆ. ಒಂದು ನಿರ್ದಿಷ್ಟ ಯುಗವು ನಕಾರಾತ್ಮಕ ಅಂಶಗಳನ್ನು ಹೊಂದಿದೆ ಎಂದುಕೊಂಡರೂ, ಅದರ ಇತಿಹಾಸವನ್ನು ಸುಲಭವಾಗಿ ಅಳಿಸಿ ಹಾಕಲು ಸಾಧ್ಯವಿಲ್ಲ.

**ಮೊಘಲ್ ಇತಿಹಾಸದ ಉದ್ದೇಶಪೂರ್ವಕ ಹೊರಗಿಡುವಿಕೆ**

ಮೊಘಲ್ ಅವಧಿ ಮತ್ತು ಅದರ ಹಿಂದಿನ ಸುಲ್ತಾನರ ಅವಧಿಯನ್ನೇ ಏಕೆ ಗುರಿಯಾಗಿಸಲಾಗಿದೆ? ಆಡಳಿತಗಾರರು ಮುಸ್ಲಿಮರಾಗಿದ್ದರಿಂದಲೇ? ಹಾಗಿದ್ದಲ್ಲಿ, ಅಫ್ಘನ್ ಆಡಳಿತಗಾರ ಶೇರ್ ಷಾನ ಐದು ವರ್ಷಗಳ ಆಳ್ವಿಕೆಯನ್ನು ಹೇಗೆ ಸೇರಿಸಿಕೊಳ್ಳಬಹುದು? ಆತ ನಿರ್ಮಿಸಿದ ಐತಿಹಾಸಿಕ ಗ್ರಾಂಡ್ ಟ್ರಂಕ್ ರಸ್ತೆ ಮತ್ತು ಪರಿಚಯಿಸಿದ ನವೀನ ಅಂಚೆ ವ್ಯವಸ್ಥೆಯ ಬಗ್ಗೆ ವಿದ್ಯಾರ್ಥಿಗಳು ತಿಳಿದುಕೊಳ್ಳುವುದಾದರೂ ಹೇಗೆ? ತಮಗೆ ಬೇಡವೆನಿಸಿದ್ದನ್ನು ಕೈಬಿಟ್ಟು, ಬೇಕಾದ್ದನ್ನು ಮಾತ್ರ ಸೇರಿಸಿ, ಅರೆಬರೆ ಇತಿಹಾಸದ ಜ್ಞಾನವನ್ನು ಹೇಗೆ ಸೃಷ್ಟಿಸಬಹುದೇ? ಇತಿಹಾಸದಲ್ಲಿ ಸಂಭವಿಸಿರುವ ಸಂಘರ್ಷದ ಒಂದು ಆಯಾಮವನ್ನು ಮಾತ್ರ ಕೇಂದ್ರೀಕರಿಸುವುದರಿಂದ, ಅದು ಏಕಪಕ್ಷೀಯವಾಗುತ್ತದೆಯೇ ವಿನಃ ಸಮಗ್ರ ಹಾಗೂ ಸಂಕೀರ್ಣ ದೃಷ್ಟಿಕೋನವಾಗಿ ಹೊರಹೊಮ್ಮುವುದಿಲ್ಲ.

ಈ ಪ್ರಯತ್ನಗಳ ಹೊರತಾಗಿಯೂ, ಇತಿಹಾಸವನ್ನು ನಿಜವಾಗಿಯೂ ಅಳಿಸಬಹುದೇ? ಉತ್ತರ ಪ್ರದೇಶ, ಮಧ್ಯಪ್ರದೇಶ, ದೆಹಲಿ, ಪಂಜಾಬ್, ಹರಿಯಾಣ, ಇಡೀ ಉತ್ತರ ಹಾಗೂ ಪಶ್ಚಿಮ ಭಾರತದ ಭೂಭಾಗಗಳಲ್ಲಿ ಹಬ್ಬಿಕೊಂಡಿರುವ ವಾಸ್ತುಶಿಲ್ಪದ ಅದ್ಭುತಗಳು ಮೊಘಲ್ ಯುಗದ ಸ್ಪಷ್ಟ ಪುರಾವೆಗಳಾಗಿ ನಿಂತಿವೆ ಮತ್ತು ಮುಂದೆಯೂ ಇರುತ್ತವೆ ಕೂಡ. ಅವುಗಳನ್ನು ಹೇಗೆ ನಿರ್ಲಕ್ಷಿಸಬಹುದು? ಕೆಂಪುಕೋಟೆಯ ಹೆಸರನ್ನು ಬದಲಿಸಬಹುದೇ? ಪ್ರತಿವರ್ಷ ಸ್ವಾತಂತ್ರ್ಯ ದಿನದಂದು ರಾಷ್ಟ್ರಧ್ವಜವನ್ನು ಎಲ್ಲಿ ಹಾರಿಸಲಾಗುತ್ತದೆ? ತಾಜ್‌ಮಹಲ್, ಇಬಾದತ್ ಖಾನಾ ಮತ್ತು ಜಾಮಾ ಮಸೀದಿಗಳ ಕಥೆಯೇನು? ಈ ರಚನೆಗಳು ಭಾರತದ ಬಹುತ್ವ ಸಂಸ್ಕೃತಿ ಮತ್ತು ಇತಿಹಾಸದೊಂದಿಗೆ ಆಳವಾಗಿ ಬೆಸೆದುಕೊಂಡಿವೆ ಎಂಬುದನ್ನು ನಾವು ಮರೆಯಬಾರದು. ಮೊಘಲರ ಆಳ್ವಿಕೆಯ ಅವಧಿಯಲ್ಲಿ ಯಾವುದೇ ಹಿಂದೂ ಮುಸ್ಲಿಂ ಪ್ರಶ್ನೆ ಇರಲಿಲ್ಲ.

ಎರಡನೆಯದಾಗಿ, ಮುಸ್ಲಿಂ ಚಕ್ರವರ್ತಿಗಳು, ಹಿಂದೂಗಳು ಅಥವಾ ಬೌದ್ಧರ ಮೇಲೆ ತಮ್ಮ ಧರ್ಮವನ್ನು ಹೇರಿದ್ದಕ್ಕೆ ಯಾವುದೇ ಪುರಾವೆಗಳಿಲ್ಲ. ಹೌದು, ಮೊಘಲ್ ಚಕ್ರವರ್ತಿಗಳು ತಮ್ಮ ಆಳ್ವಿಕೆಯನ್ನು ಹೆಚ್ಚಿಸಿಕೊಳ್ಳುವ ಅಂದಿನ ಎಲ್ಲಾ ರಾಜರ ಆಕಾಂಕ್ಷೆಗೆ ಅನುಗುಣವಾಗಿ ಅನೇಕ ಹಿಂದೂ ರಾಜರ ವಿರುದ್ಧ ಯುದ್ಧ ಮಾಡಿದ್ದರು. ಆದರೆ ಆ ಯುದ್ಧಗಳು ಪರಸ್ಪರರ ಪ್ರದೇಶಗಳನ್ನು ಆಕ್ರಮಿಸಿಕೊಳ್ಳುವುದಕ್ಕಾಗಿ ಮಾತ್ರ. ಅವರು, ಆಫ್ಘನ್ ಆಡಳಿತಗಾರ ಶೇರ್ ಶಾನಂತಹ ಅನೇಕ ಮುಸ್ಲಿಂ ರಾಜರ ವಿರುದ್ಧವೂ ಯುದ್ಧ ಮಾಡಿದರು. 1526ರ ಮೊದಲ ಪಾಣಿಪತ್ ಕದನ, ಮೊಘಲ್ ಚಕ್ರವರ್ತಿ ಬಾಬರ್‌ನ ಪಡೆಗಳು ಮತ್ತು ಇಬ್ರಾಹಿಂ ಲೋದಿ ನೇತೃತ್ವದ ಸೈನ್ಯದ ನಡುವೆ ನಡೆಯಿತು. ಅದೇ ರೀತಿ, ಪ್ರದೇಶಗಳ ಮೇಲಿನ ಪ್ರಾಬಲ್ಯಕ್ಕಾಗಿ ಹಿಂದೂ ರಾಜರ ನಡುವೆಯೂ ಯುದ್ಧಗಳು ನಡೆದಿವೆ. ಉದಾಹರಣೆಗೆ ರಾಷ್ಟ್ರಕೂಟರ ವಿರುದ್ಧ ಚೋಳರು, ಕಛ್‌ವಾಹ ನಡೆಸಿದ ಧುಂಧರ್ ಮೇಲಿನ ಆಕ್ರಮಣ (1071) ಇತ್ಯಾದಿ. ನಂದ ರಾಜವಂಶವು ಹಿಂದಿನ ಶಿಶುನಾಗ ರಾಜವಂಶವನ್ನು ಉರುಳಿಸಿತು. ಮೌರ್ಯ ಸಾಮ್ರಾಜ್ಯವನ್ನು ಸ್ಥಾಪಿಸಿದ ಚಂದ್ರಗುಪ್ತ ಮೌರ್ಯ, ನಂದ ರಾಜವಂಶವನ್ನು ಉರುಳಿಸಿದ. ಹಾಗಾಗಿ ಯುದ್ಧಗಳು ಧರ್ಮಗಳ ಆಧಾರದಲ್ಲಿ ನಡೆದಿಲ್ಲ. ಬದಲಿಗೆ ರಾಜಕೀಯ ಮತ್ತು ಆರ್ಥಿಕ ಅಂಶಗಳು ಮಹತ್ವದ ಪಾತ್ರ ವಹಿಸಿವೆ.

**ವಿಭಿನ್ನ ಧರ್ಮದ ರಾಜರು ಮತ್ತವರ ಸೇನಾಧಿಪತಿಗಳು**

1576ರ ಹಳದಿಘಾಟ್ ಯುದ್ಧದ ಸಮಯದಲ್ಲಿ, ಅಕ್ಬರನ ಮೊಘಲ್ ಪಡೆಗಳ ನೇತೃತ್ವವನ್ನು ಹಿಂದೂ ರಜಪೂತ ಜನರಲ್ ರಾಜಾ ಮಾನ್‌ಸಿಂಗ್ ವಹಿಸಿದ್ದ. ಪ್ರತಿಯಾಗಿ ರಾಣಾ ಪ್ರತಾಪ್‌ನ ಸೈನ್ಯವನ್ನು ಅಫ್ಘಾನ್ ಮುಸ್ಲಿಂ ಹಕೀಮ್ ಖಾನ್ ಸುರ್ ಮುನ್ನಡೆಸಿದ್ದ. ಅದರಂತೆ, ಶಿವಾಜಿ ಮತ್ತು ಔರಂಗಜೇಬ್ ಸಂಘರ್ಷದಲ್ಲಿದ್ದಾಗ, ರಜಪೂತ ಜೈಸಿಂಗ್ ಔರಂಗಜೇಬನ ಮುಖ್ಯ ಜನರಲ್ ಆಗಿದ್ದರೆ, ಶಿವಾಜಿಯ ಸೇನಾಪತಿ ಮುಸ್ಲಿಂ ಮೌಲ್ವಿ ಹೈದರ್ ಖಾನ್! ದಕ್ಷಿಣ ಭಾರತದಲ್ಲಿ, ಮರಾಠರು ಟಿಪ್ಪು ಸುಲ್ತಾನನ ಸಾಮ್ರಾಜ್ಯದ ಮೇಲೆ ದಾಳಿ ಮಾಡಿ ಹಿಂದೂ ದೇವಾಲಯಗಳನ್ನು ನಾಶಪಡಿಸಿದರೆ, ಟಿಪ್ಪು ಸುಲ್ತಾನ್ ಸ್ವತಃ ಅದನ್ನು ದುರಸ್ತಿ ಮಾಡಲು ಸಹಾಯ ಮಾಡಿದ. ಈ ಸತ್ಯ ಆಧಾರಿತ, ವಸ್ತುನಿಷ್ಠ ಇತಿಹಾಸವನ್ನು ಮರೆಮಾಚಿ ವಿದ್ಯಾರ್ಥಿಗಳಲ್ಲಿ ಉದ್ದೇಶಪೂರ್ವಕವಾಗಿ ಮುಸ್ಲಿಂ ವಿರೋಧಿ ಭಾವನೆಯನ್ನು ಮೂಡಿಸಲಾಗುತ್ತಿದೆ.

**ಬ್ರಿಟಿಷ್ ಆಡಳಿತಗಾರರ ಧರ್ಮಾಧಾರಿತ ವಿಭಜನೆ**

ಸಾಮ್ರಾಜ್ಯಶಾಹಿ ಬ್ರಿಟಿಷ್ ಇತಿಹಾಸಕಾರರು ಕೋಮು ವಿಭಜನೆಯ ಮೇಲೆ ಕಣ್ಣಿಟ್ಟು ಭಾರತೀಯ ಇತಿಹಾಸವನ್ನು ವ್ಯಾಖ್ಯಾನಿಸಿದರು. 1818 ರಲ್ಲಿ, ಭಾರತೀಯ ಇತಿಹಾಸವನ್ನು 'ಹಿಂದೂ ನಾಗರಿಕತೆ', 'ಮುಸ್ಲಿಂ ನಾಗರಿಕತೆ' ಮತ್ತು 'ಬ್ರಿಟಿಷ್ ಅವಧಿ' ಎಂದು ವಿಭಜಿಸಿ ಇತಿಹಾಸಕ್ಕೆ ಧರ್ಮದ ಲೇಪನ ನೀಡುವುದನ್ನು ಪ್ರಾರಂಭಿಸಿದವನು ಜೇಮ್ಸ್ ಮಿಲ್. ಗಮನಾರ್ಹವಾಗಿ, ವಸಾಹತುಶಾಹಿ ಯುಗದಲ್ಲಿ ಭಾರತಕ್ಕೆ ಕಾಲಿಟ್ಟ ಬ್ರಿಟಿಷ್ ಆಡಳಿತಗಾರರು ಹೈಲಿಬರಿ ಕಾಲೇಜಿನಲ್ಲಿ ಮಿಲ್‌ನ ಐತಿಹಾಸಿಕ ವ್ಯಾಖ್ಯಾನಗಳನ್ನು ಓದಿಕೊಂಡೇ ಬಂದವರು.

19ನೇ ಶತಮಾನದಲ್ಲಿ ಭಾರತದ ಇತಿಹಾಸವನ್ನು ಬರೆಯುವ ಯೋಜನೆಯಲ್ಲಿ ಮುಂಚೂಣಿಯಲ್ಲಿದ್ದ ಬ್ರಿಟಿಷ್ ಇತಿಹಾಸಕಾರರು, ಮುಸ್ಲಿಮರ ವಿರುದ್ಧ ಹಿಂದೂ ಧಾರ್ಮಿಕ ಭಾವನೆಗಳನ್ನು ಕೆರಳಿಸುವ ಕೆಲಸ ಮಾಡಿದರು. ತಮ್ಮ ಆಳ್ವಿಕೆಯ ತಳಪಾಯವನ್ನು ಗಟ್ಟಿಗೊಳಿಸುವ ಸಾಮ್ರಾಜ್ಯಶಾಹಿ ದೃಷ್ಟಿಕೋನ ಈ ಕಾರ್ಯತಂತ್ರದ ಹಿಂದಿತ್ತು. ಈ ದೃಷ್ಟಿಕೋನಕ್ಕೆ ಸೈದ್ಧಾಂತಿಕ ಆಧಾರವನ್ನು ಒದಗಿಸಲು, ಹಲವಾರು ಇಂಗ್ಲಿಷ್ ಇತಿಹಾಸಕಾರರು, ಪುರಾತತ್ವಜ್ಞರು ಹಾಗೂ ಸಂಶೋಧಕರು ತಮ್ಮ ಬರಹಗಳಲ್ಲಿ ಮುಸ್ಲಿಂ ದೊರೆಗಳ ನಿರಂತರ ಕಿರುಕುಳ ಮತ್ತು ದೇವಾಲಯ ನಾಶದ ಘಟನೆಗಳನ್ನು ಉಲ್ಲೇಖಿಸುವ ಮೂಲಕ ಹಿಂದೂಗಳನ್ನು ಪ್ರಚೋದಿಸುವ ಕಾರ್ಯ ಮಾಡಿದರು. ತನ್ಮೂಲಕ ಅವರು ದೇಶವಾಸಿಗಳ ಕಣ್ಣಲ್ಲಿ ತಮ್ಮ ಆಳ್ವಿಕೆಯನ್ನು ನ್ಯಾಯಬದ್ಧಗೊಳಿಸುವ ಹುನ್ನಾರ ಹೊಂದಿದ್ದರು. ಮುಸ್ಲಿಂ ದೊರೆಗಳನ್ನು ಪದಚ್ಯುತಗೊಳಿಸಿ ಅಧಿಕಾರಕ್ಕೆ ಬಂದ ಬ್ರಿಟಿಷ್ ಸಾಮ್ರಾಜ್ಯಶಾಹಿಗಳು ಸಹಜವಾಗಿಯೇ ಮುಸ್ಲಿಂ ವಿರೋಧಿ ಭಾವನೆಯನ್ನು ಬೆಳೆಸಲು ಪ್ರಯತ್ನಿಸಿದರು.

**ಅಧಿಕಾರಸ್ಥರು ಇತಿಹಾಸವನ್ನು ವೈಜ್ಞಾನಿಕವಾಗಿ ವಿಶ್ಲೇಷಿಸದೆ, ತಮ್ಮ ಗುಪ್ತ ಕಾರ್ಯಸೂಚಿಗೆ ಅನುಗುಣವಾಗಿ ಅದನ್ನು ತಿರುಚಿ ವಿದ್ಯಾರ್ಥಿಗಳನ್ನು ದಾರಿ ತಪ್ಪಿಸುವುದು ಅಕ್ಷಮ್ಯ ಅಪರಾಧ**

ಇದಲ್ಲದೆ, ಇಪ್ಪತ್ತನೇ ಶತಮಾನದ ಆರಂಭದಲ್ಲಿ, ಬ್ರಿಟಿಷ್ ಸಾಮ್ರಾಜ್ಯಶಾಹಿ ಆಳ್ವಿಕೆಯು ಒಡೆದು ಆಳುವ ನೀತಿಯನ್ನು ಜಾರಿಗೆ ತಂದಿತು. ಲಾರ್ಡ್ ಕರ್ಜನ್‌ನ ನೇರ ಬೆಂಬಲ ಮತ್ತು ಆರ್ಥಿಕ ಪ್ರೋತ್ಸಾಹದೊಂದಿಗೆ, 1906ರಲ್ಲಿ "ಮುಸ್ಲಿಂ ಲೀಗ್" ಢಾಕಾದಲ್ಲಿ ಸ್ಥಾಪನೆಯಾಯಿತು. ದುರಂತವೆಂದರೆ ಸೈಯದ್ ಅಹ್ಮದ್‌ಖಾನ್ ಅವರಂತಹ ಪ್ರಗತಿಪರ ಮುಸ್ಲಿಂ ಸಾಮಾಜಿಕ ಸುಧಾರಣಾ ಚಳುವಳಿಗಳ ನಾಯಕರು ಈ ಸಂಚಿಗೆ ಬಲಿಯಾದರು. ದೇಶದ ಸ್ವಾತಂತ್ರ್ಯ ಸಂಗ್ರಾಮದ ರಾಷ್ಟ್ರೀಯ ನಾಯಕರೂ ಕೂಡ ಈ ಸಾಮ್ರಾಜ್ಯಶಾಹಿ ತಂತ್ರದಿಂದ ದಾರಿತಪ್ಪಿದರು.

**ಮಧ್ಯಕಾಲೀನ ಸಂಸ್ಕೃತಿ: ಹಿಂದೂ–ಮುಸ್ಲಿಂ ಸಂಘರ್ಷದ್ದಲ್ಲ, ಸಾಮರಸ್ಯದ್ದು**

ಪ್ರಾದೇಶಿಕ ಸಂಘರ್ಷಗಳು ಮತ್ತು ರಾಜಕೀಯ ಇತಿಹಾಸದ ವ್ಯಾಖ್ಯಾನಗಳನ್ನು ಬದಿಗಿಟ್ಟರೂ ಮೊಘಲ್ ಯುಗವು ಭಾರತದ ಸಾಂಸ್ಕೃತಿಕ ಬೆಳವಣಿಗೆಯಲ್ಲಿನ ಒಂದು ಉಜ್ವಲ ಅಧ್ಯಾಯವಾಗಿದೆ. ಮೊಘಲ್ ಆಶ್ರಯದಲ್ಲಿ ಚಿತ್ರಕಲೆ ಅಭೂತಪೂರ್ವವಾಗಿ ಪ್ರವರ್ಧಮಾನಕ್ಕೆ ಬಂದಿತು. ಅಬುಲ್ ಫಜಲ್ ಅವರ 'ಅಕ್ಬರ್‌ನಾಮಾ' ಮತ್ತು 'ಐನ್–ಇ–ಅಕ್ಬರಿ', ಬಾಬರನ 'ತಜುಕ್–ಇ–ಬಾಬರಿ', ಗುಲ್ಬದನ್ ಬೇಗಂ ಅವರ 'ಹುಮಾಯುನ್ನಾಮಾ' ಮತ್ತು ಸೂರ್‌ದಾಸ್, ತುಕಾರಾಂ ಹಾಗೂ ತುಳಸಿದಾಸರ ಕೃತಿಗಳು ಈ ಸಂಗತಿಯನ್ನು ದೃಢೀಕರಿಸುತ್ತವೆ. 'ವಾಕಿಯತ್–ಇ–ಬಾಬರಿ'ಯಲ್ಲಿ ಉಲ್ಲೇಖಿಸಲಾದ ಇಪ್ಪತ್ತೆರಡು ಕಲಾವಿದರಲ್ಲಿ ಮುಸ್ಲಿಮರು ಮೂವರು ಮಾತ್ರ. ಅಬುಲ್ ಫಜಲ್ ತನ್ನ ಸ್ವಂತ ಬರಹಗಳಲ್ಲಿ ಹದಿನೇಳು ಪ್ರಮುಖ ವರ್ಣಚಿತ್ರಕಾರರನ್ನು ಹೆಸರಿಸಿದ್ದಾನೆ, ಅವರಲ್ಲಿ ಕೇವಲ ನಾಲ್ವರು ಮುಸ್ಲಿಮರು. ಸಂಗೀತ ಕ್ಷೇತ್ರದಲ್ಲಿ, ಸಿತಾರ್ ವಾದನ ಹಿಂದೂ ಮತ್ತು ಮುಸ್ಲಿಂ ಸಂಗೀತ ಸಂಪ್ರದಾಯಗಳ ಸುಪ್ರಸಿದ್ಧ ಬೆಸುಗೆಯಾಗಿದೆ. ಎಸ್ರಾಜ್, ಸುರ್‌ಬಹಾರ್ ಮತ್ತು ಸಾರಂಗಿಯಂತಹ ವಾದ್ಯಗಳು ಎರಡೂ ಸಮುದಾಯಗಳ ಕಲಾತ್ಮಕ ಪ್ರಯತ್ನಗಳ ಉತ್ಪನ್ನಗಳಾಗಿವೆ.

ಭಾರತೀಯ ರಾಗಗಳಾದ ಹಿಂದೋಳ ಮತ್ತು ಪರ್ಷಿಯನ್ ರಾಗ ಮುಕಾಮಾಗಳನ್ನು ಒಟ್ಟುಗೂಡಿಸಿ ಯಮನ್ ರಾಗವನ್ನು ರಚಿಸಲಾಯಿತು. ಅಮೀರ್ ಖುಸ್ರೋ ಮೊದಲಾಗಿ ತಾನ್‌ಸೇನ್‌ವರೆಗೆ, ಮುಸ್ಲಿಂ ಸಂಗೀತ ಶಿಕ್ಷಕರು ತಮ್ಮ ಕಲಾತ್ಮಕತೆಯ ಗುಣಮಟ್ಟಕ್ಕಾಗಿ ಅಪಾರ ಜನಪ್ರಿಯತೆಯನ್ನು ಗಳಿಸಿದರು. ಭಾರತೀಯ ಶಾಸ್ತ್ರೀಯ ಸಂಗೀತದ ಅವಿಭಾಜ್ಯ ಸ್ವರೂಪಗಳಾದ ಧ್ರುಪದ್, ಖಯಾಲ್, ಟಪ್ಪಾ ಮತ್ತು ಟುಮ್ರಿಗಳಿಗೆ ಮುಸ್ಲಿಮರ ಕೊಡುಗೆಗಳನ್ನು ನಿರಾಕರಿಸುವುದು ಇತಿಹಾಸವನ್ನು ಉದ್ದೇಶಪೂರ್ವಕವಾಗಿ ವಿರೂಪಗೊಳಿಸಿದಂತಾಗುತ್ತದೆ. ಹಿಂದೂ ಮತ್ತು ಮುಸ್ಲಿಂ ಭಾಷಾ ಸಂಪ್ರದಾಯಗಳ ಪರಸ್ಪರ ಕೊಡುಕೊಳ್ಳುವಿಕೆಯ ಮೂಲಕ ಉರ್ದು ಭಾಷೆ ಹೊರಹೊಮ್ಮಿ ವಿಕಸನಗೊಂಡಿದ್ದು ಈ ಯುಗದಲ್ಲಿಯೇ. ಹೆಚ್ಚುಕಡಿಮೆ ಒಂದು ಶತಮಾನದ ಕಾಲ ಜಾಗತಿಕ ವೇದಿಕೆಯಿಂದ ದೂರವೇ ಇದ್ದ ಭಾರತೀಯ ನಾಗರಿಕತೆಯು, ಮೊಘಲ್ ಅವಧಿಯಲ್ಲಿ ವಿಶಾಲ ಜಗತ್ತಿನ ಸಂಪರ್ಕಕ್ಕೆ ತೆರೆದುಕೊಂಡಿತು. ಈ ಅವಧಿಯು ವಿವಿಧ ಪ್ರಾದೇಶಿಕ ಶಕ್ತಿಗಳು ಒಟ್ಟುಗೂಡುವುದಕ್ಕೂ ಸಾಕ್ಷಿಯಾಗಿ ರಾಷ್ಟ್ರೀಯ ಏಕತೆಯ ಪ್ರಜ್ಞೆಗೆ ಬುನಾದಿ ಹಾಕಿತು. ನೊಬೆಲ್ ಪ್ರಶಸ್ತಿ ವಿಜೇತ ಅಮರ್ತ್ಯ ಸೇನ್‌ರ ಅಜ್ಜ ಕ್ಷಿತಿಮೋಹನ್ ಸೇನ್ ಬರೆದ "ಹಿಂದೂ–ಮುಸ್ಲಿಮರ ಜಂಟಿ ಪ್ರಯತ್ನಗಳು" ಎಂಬ ಪುಸ್ತಕದಲ್ಲಿ ಇಂತಹ ಅನೇಕ ಉದಾಹರಣೆಗಳನ್ನು ಅವರು ವಿಸ್ತಾರವಾಗಿ ಪ್ರಸ್ತುತಪಡಿಸಿದ್ದಾರೆ.

**ಕುರುಡು ರಾಷ್ಟ್ರವಾದಕ್ಕೆ ಉತ್ತೇಜನ!**

ಮಂತ್ರಿಗಳು ಮತ್ತು ಅಧಿಕಾರಿಗಳು ಇತಿಹಾಸದ ಹೆಸರಿನಲ್ಲಿ ಸುಳ್ಳುಗಳನ್ನು ಪ್ರಚಾರ ಮಾಡಿ, ಅದಕ್ಕೆ ಧಾರ್ಮಿಕ ಗ್ರಂಥಗಳಲ್ಲಿ ವೈಜ್ಞಾನಿಕ ದೃಢೀಕರಣವನ್ನು ಕಂಡುಹಿಡಿಯಲು ಪ್ರಯತ್ನಿಸಿದಾಗ, ಅವರ ಕಾರ್ಯಸೂಚಿಯ ಆಳ ಸುಸ್ಪಷ್ಟವಾಗುತ್ತದೆ. ಪಶ್ಚಿಮ ಬಂಗಾಳದ ಹೌರಾದ ಐಐಇಎಸ್‌ಟಿ, ಶಿವಪುರದಂತಹ ಸಂಸ್ಥೆಗಳಲ್ಲಿ ಭಗವದ್ಗೀತೆಯ ಕುರಿತು ವಿಚಾರ ಸಂಕಿರಣಗಳು, ಇತಿಹಾಸ, ವಿಜ್ಞಾನ ಕಾಂಗ್ರೆಸ್‌ಗಳಲ್ಲಿ, ಪ್ರಾಚೀನ ಭಾರತವು ವಿಮಾನ, ಕಾಂಡಕೋಶ ಚಿಕಿತ್ಸೆ, ಪ್ಲಾಸ್ಟಿಕ್ ಸರ್ಜರಿ ಇತ್ಯಾದಿಗಳನ್ನು ಕಂಡು ಹಿಡಿದಿತ್ತು ಎಂಬ ಪ್ರಧಾನಿ ಮೋದಿ ಮತ್ತು ಅವರ ಅನುಯಾಯಿಗಳ ಹೇಳಿಕೆಗಳು; ಧಾರ್ಮಿಕ ಮೊಂಡುತನ ಮತ್ತು ಮತಾಂಧತೆಯ ಆಧಾರದ ಮೇಲೆ ವಾದಗಳ ನಿರೂಪಣೆ, ಚಲನಚಿತ್ರಗಳು ಮತ್ತು ದೂರದರ್ಶನಗಳಲ್ಲಿ ಮೂಢನಂಬಿಕೆಗಳು, ಹಿಂದೂ ಧರ್ಮಾಂಧತೆ, ಮತ್ತು ತಾಂತ್ರಿಕ ಆಚರಣೆಗಳ ವ್ಯಾಪಕ ಪ್ರಚಾರ; ಇವೆಲ್ಲವೂ ಜನರಲ್ಲಿ ತರ್ಕಬದ್ಧ ಚಿಂತನಾ ಪ್ರಕ್ರಿಯೆಯನ್ನು ಮೊಂಡಾಗಿಸುವ ಹಾಗೂ ಅಜ್ಞಾನ ಮತ್ತು ಕುರುಡು ನಂಬಿಕೆಗಳನ್ನು ಪ್ರಚೋದಿಸುವ ವ್ಯವಸ್ಥಿತ ಪ್ರಯತ್ನಗಳು–ಹೀಗೆ, ಹಿಂದುತ್ವ ಸಿದ್ಧಾಂತದ ಜೊತೆಗೆ ಹೊಂದಿಕೊಳ್ಳುವಂತೆ ಸಾಂಸ್ಕೃತಿಕ ಮತ್ತು ಸಾಮಾಜಿಕ ವಾತಾವರಣವನ್ನು ಮರುರೂಪಿಸುವ ಗುರಿ ಇದರಲ್ಲಿದೆ.

ಚಲನಚಿತ್ರಗಳು ಮತ್ತು ದೂರದರ್ಶನಗಳಲ್ಲಿ ಮುಸ್ಲಿಂ ಆಳ್ವಿಕರನ್ನು ಕ್ರೂರಿಗಳು ಹಾಗೂ ಸ್ವೇಚ್ಛಾಚಾರಿಗಳು ಎಂದೂ, ಇದಕ್ಕೆ ವ್ಯತಿರಿಕ್ತವಾಗಿ ಹಿಂದೂರಾಜರ ಶೌರ್ಯ ಮತ್ತು ಶ್ರೇಷ್ಠತೆಯನ್ನು ವೈಭವೀಕರಿಸುವುದೂ ಈ ಕಾರ್ಯಸೂಚಿಯ ಮುಂದುವರಿದ ಭಾಗವೇ ಆಗಿದೆ. ಪರಿಸ್ಥಿತಿ ಇಷ್ಟು ಆತಂಕಕಾರಿಯಾಗಿದ್ದರೂ, ದೇಶದ ಗಣ್ಯ

12ನೇ ಪುಟಕ್ಕೆ....

## ಅಸ್ಸಾಂ: ರಾಕ್ಷಸೀ ತೆರವು ಕಾರ್ಯಾಚರಣೆ ಮತ್ತು ಕೊಲೆಗಳು

# ಸರ್ಕಾರದ ಫ್ಯಾಸೀವಾದಿ ನಡೆಯನ್ನು ವಿರೋಧಿಸಿ!

ಅತಿಕ್ರಮಣಗೊಂಡ ಭೂಮಿಯನ್ನು ವಶಪಡಿಸಿಕೊಳ್ಳುವ ನೆಪದಲ್ಲಿ, ಬಿಜೆಪಿ ನೇತೃತ್ವದ ಅಸ್ಸಾಂ ಸರ್ಕಾರವು, ಹಲವು ವರ್ಷಗಳಿಂದ ಸರ್ಕಾರಿ ಭೂಮಿಯಲ್ಲಿ ವಾಸಿಸುತ್ತಿರುವ ಅಸಂಖ್ಯಾತ ಅಸಹಾಯಕ ಬಡ ಜನರನ್ನು ನಿರ್ದಾಕ್ಷಿಣ್ಯವಾಗಿ ಒಕ್ಕಲೆಬ್ಬಿಸುತ್ತಿದೆ. ಜೊತೆಗೆ ನದಿ ದಂಡೆ ಕುಸಿದು ಬಿದ್ದು ಸ್ಥಳಾಂತರಗೊಂಡ ಅಸಹಾಯಕ ಭೂಹೀನ ಜನರಿಗೆ ಪರ್ಯಾಯ ಪುನರ್ವಸತಿಗೆ ವ್ಯವಸ್ಥೆ ಮಾಡದೆ ಅವರನ್ನು ಸ್ಥಳಾಂತರಿಸುವ ಕಾರ್ಯದಲ್ಲಿ ತೊಡಗಿದೆ. ಅವರಲ್ಲಿ ಹೆಚ್ಚಿನವರು ಮುಸ್ಲಿಮರಾಗಿರುವುದರಿಂದ ಈ ಒಕ್ಕಲೆಬ್ಬಿಸುವಿಕೆಯು ಕೋಮುವಾದ–ಜಾತೀಯತೆ–ಸಂಕುಚಿತ ದ್ವೇಷ ಮತ್ತು ಅತ್ಯಂತ ವಿವಾದಾತ್ಮಕ ಎನ್‌ಆರ್‌ಸಿ ಜೊತೆಗೆ ತಳಕು ಹಾಕಿಕೊಂಡಿದೆ.

ಬಲವಂತವಾಗಿ ಒಕ್ಕಲೆಬ್ಬಿಸಲ್ಪಟ್ಟ ಬಡವರ ಗೋಳಾಟ ಮತ್ತು ದುಃಖ ಮುಗಿಲು ಮುಟ್ಟಿವೆ. ಆದರೂ, ಫ್ಯಾಸಿಸ್ಟ್ ಸರ್ವಾಧಿಕಾರಿ ಬಿಜೆಪಿ ಸರ್ಕಾರ ಜನರ ಮೇಲೆ ಗುಂಡು ಹಾರಿಸಿ ಅವರನ್ನು ಕೊಲ್ಲುತ್ತಿದೆ ಮತ್ತು ಸಂಭ್ರಮದಿಂದ ಮೆರೆಯುತ್ತಿದೆ. ಸರ್ಕಾರವು, ಅಸ್ಸಾಂ ಮಾತ್ರವಲ್ಲದೇ, ಇಡೀ ಭಾರತದ ಮಹಾನ್ ಹೆಮ್ಮೆಯ ಧಾರ್ಮಿಕ ಮತ್ತು ಸಾಮಾಜಿಕ ಸುಧಾರಕರಾದ ಶ್ರೀಮಂತ ಶಂಕರ್ ದೇವ್ ಅವರ ಬೋಧನೆಗಳ ವಿರುದ್ಧ ವರ್ತಿಸುತ್ತಿದೆ ಮತ್ತು ಈ ಎಲ್ಲಾ ಅನಾಗರಿಕ ಕೃತ್ಯಗಳನ್ನು ನಾಚಿಕೆಯಿಲ್ಲದೆ ಸಮರ್ಥಿಸಿಕೊಳ್ಳುತ್ತಿದೆ. ಸರ್ಕಾರದ ಈ ಕೃತ್ಯದ ಜೊತೆಗೆ ಆರ್‌ಎಸ್‌ಎಸ್–ಬಿಜೆಪಿಯ ಕೋಮು ದ್ವೇಷ ಅಭಿಯಾನವು ಸಾಮಾಜಿಕ ಪರಿಸರವನ್ನು ಎಷ್ಟರ ಮಟ್ಟಿಗೆ ಕಲುಷಿತಗೊಳಿಸಿದೆಯೆಂದರೆ, ಜನರ ಜೀವನದ ಜ್ವಲಂತ ಸಮಸ್ಯೆಗಳ ವಿರುದ್ಧ ಪ್ರಜಾಸತ್ತಾತ್ಮಕ ಚಳುವಳಿಯನ್ನು ಸಂಘಟಿಸುವುದು ಕ್ರಮೇಣ ಅಸಾಧ್ಯವಾಗುತ್ತಿದೆ. ಈ ಒಕ್ಕಲಿಬ್ಬಿಸುವಿಕೆಯು ಕೇವಲ ಅಲ್ಪಸಂಖ್ಯಾತರೇ ಹೆಚ್ಚಿರುವ ಪ್ರದೇಶಗಳಿಗೆ ಸೀಮಿತವಾಗಿರದೆ, ಶೀಘ್ರದಲ್ಲೇ ಕೊಕ್ರಾಝಾರ್, ಶಿಲ್‌ಸ್ಯಾಂಕೋ ಹಾಗೂ ಮತ್ತಿತರ ಪ್ರದೇಶಗಳಿಗೂ ಹರಡುತ್ತದೆ. ಈ ರೀತಿ ವಶಪಡಿಸಿಕೊಂಡ ಭೂಮಿಯನ್ನು ವಾಣಿಜ್ಯ ಉದ್ದೇಶಕ್ಕಾಗಿ ಬಳಸಲು ಅಂಬಾನಿ, ಅದಾನಿ ಮುಂತಾದ ಕೈಗಾರಿಕಾ ಉದ್ಯಮಿಗಳಿಗೆ ಹಸ್ತಾಂತರಿಸಲಾಗುವುದು.

ಎಸ್‌ಯುಸಿಐ(ಸಿ)ನ ಅಸ್ಸಾಂ ರಾಜ್ಯ ಕಾರ್ಯದರ್ಶಿ ಕಾಮ್ರೇಡ್ ಚಂದ್ರಲೇಖಾ ದಾಸ್‌ರವರು ಜುಲೈ 13 ರಂದು ಬಿಡುಗಡೆ ಮಾಡಿದ ಪತ್ರಿಕಾ ಹೇಳಿಕೆಯಲ್ಲಿ, ಇತರ ರಾಜಕೀಯ ಪಕ್ಷಗಳ, ಪ್ರಜಾಸತ್ತಾತ್ಮಕ ಮನಸ್ಸುಳ್ಳ ಬುದ್ಧಿಜೀವಿಗಳ ಹಾಗೂ ಗಾಢ ಮಾನವತಾವಾದಿ ಭಾವನೆಗಳುಳ್ಳ ಜನರ ತೀವ್ರ ಆತಂಕ ಮತ್ತು ದಿಗ್ಭ್ರಮೆಯನ್ನು ನಿರ್ಲಕ್ಷಿಸುತ್ತಿರುವ ರಾಜ್ಯ ಸರ್ಕಾರದ ಈ ಅತ್ಯಂತ ಅಮಾನವೀಯ ಕೃತ್ಯದ ಬಗ್ಗೆ ತೀವ್ರ ನೋವು ಮತ್ತು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಅತ್ಯಂತ ಸಂವೇದನಾಶೀಲ, ಮಾನವೀಯ ನೆಲೆಯುಳ್ಳ ಅಸ್ಸಾಂ ಜನರ ನೈಜ ಆಕಾಂಕ್ಷೆಗಳನ್ನು ಸಂಪೂರ್ಣವಾಗಿ ಅರಿತುಕೊಳ್ಳಬೇಕು ಹಾಗೂ ಅವರಲ್ಲಿ ತರ್ಕಬದ್ಧವಲ್ಲದ ಭಾವನೆಗಳನ್ನು ತುಂಬಿ ಸಂಪೂರ್ಣ ಸುಳ್ಳು ಕಲ್ಪನೆಗಳನ್ನು ಮೂಡಿಸಿ ಮತ್ತು ಅವರ ಭವಿಷ್ಯವನ್ನು ರಕ್ಷಿಸುವ ಹೆಸರಿನಲ್ಲಿ ಸರ್ಕಾರವು ಅನುಸರಿಸುತ್ತಿರುವ ಫ್ಯಾಸಿಸ್ಟ್ ಮಾರ್ಗವನ್ನು ಕೈ ಬಿಡಬೇಕೆಂದು ಮನವಿ ಮಾಡಿದರು. ಅನ್ಯಾಯ ಮಾಡುವುದರಿಂದ ಅಥವಾ ಅನೈತಿಕ ಮಾರ್ಗವನ್ನು ಅನುಸರಿಸುವುದರಿಂದ ಜನರಿಗೆ ಯಾವುದೇ ಕಲ್ಯಾಣವನ್ನು ಮಾಡಲು ಸಾಧ್ಯವಿಲ್ಲ. ಬದಲಿಗೆ ಅದು ಅನಿವಾರ್ಯವಾಗಿ ತೀವ್ರ ವಿಪತ್ತನ್ನು ಉಂಟುಮಾಡುತ್ತದೆ ಎಂಬುದು ಇತಿಹಾಸದ ಪಾಠವಾಗಿದೆ. ಇದಲ್ಲದೆ, ಇತ್ತೀಚೆಗೆ ಅಸ್ಸಾಂನ ಬಿಜೆಪಿ ಮುಖ್ಯಮಂತ್ರಿ ನೇತೃತ್ವದಲ್ಲಿ ನಡೆದ ಪ್ರಚಾರದಲ್ಲಿ ಬಂಗಾಳಿ ಮಾತನಾಡುವ ಎಲ್ಲಾ ಜನರು ಬಾಂಗ್ಲಾ ದೇಶೀಯರು ಎಂದು ಹೇಳಲಾಗಿದ್ದು, ಇದು ಅಸ್ಸಾಂನಲ್ಲಿ ತಲೆತಲಾಂತರಗಳಿಂದ ಶಾಂತಿ, ಸಾಮರಸ್ಯ ಮತ್ತು ಭ್ರಾತೃತ್ವದಿಂದ ವಾಸಿಸುವ ವಿವಿಧ ಶಾಂತಿಪ್ರಿಯ ಸಮುದಾಯಗಳು ಭಾಷೆಯ ಆಧಾರದ ಮೇಲೆ ವಿಭಜನೆಯಾಗಲು ಕಾರಣವಾಗುತ್ತದೆ. ಭಾಷೆಯಂತಹ ಸೂಕ್ಷ್ಮ ಮತ್ತು ಭಾವನಾತ್ಮಕ ವಿಷಯದ ಬಗ್ಗೆ ಮಾತನಾಡುವ ಪ್ರತಿಯೊಬ್ಬರೂ ಸಂಯಮವನ್ನು ಹೊಂದಿರಬೇಕು. ಆದ್ದರಿಂದ, ಈ ಅಮಾನವೀಯ ಒಕ್ಕಲಿಬ್ಬಿಸುವಿಕೆಯನ್ನು ತಕ್ಷಣವೇ ನಿಲ್ಲಿಸಬೇಕು, ಒಕ್ಕಲೆಬ್ಬಿಸಲಾಗಿರುವ ಸಾವಿರಾರು ಅತ್ಯಂತ ಕಡುಬಡ ಜನರನ್ನು ಹಸಿವಿಗೆ ದೂಡಿ ಅವರನ್ನು ಕೊಲ್ಲುವ ಕೆಲಸವನ್ನು ಕೈಬಿಡಬೇಕು, ಆ ಮೂಲಕ ಮಹಾನ್ ಪುರುಷ ಶ್ರೀಮಂತ ಶಂಕರ ದೇವ್ ಅವರ ಬೋಧನೆಗಳು, ಸಂಸ್ಕೃತಿ ಮತ್ತು ಏಕತೆಯ ಕರೆಯನ್ನು ಗೌರವಿಸಬೇಕು ಎಂದು ಬಲವಾಗಿ ಒತ್ತಾಯಿಸಿದರು.

ಅಸ್ಸಾಂನ ಸಾಮಾಜಿಕ ಪರಿಸರವು ಗಂಭೀರವಾದ ಮಾನವೀಯ ಬಿಕ್ಕಟ್ಟಿನಿಂದ ತುಂಬಿರುವ ಈ ಸಮಯದಲ್ಲಿ, ಯಾವುದೇ ಜಾತಿ, ಧರ್ಮ, ಭಾಷೆಗಳಿಗೆ ಸೇರಿದ ಜನರಿರಲಿ, ಅವರೆಲ್ಲರೂ, ಎಲ್ಲಾ ರೀತಿಯ ವಿಭಜನೆಗಳನ್ನು, ಸಂಕುಚಿತ ಮನೋಭಾವಗಳನ್ನು, ಪ್ರತ್ಯೇಕತಾವಾದವನ್ನು, ಛಿದ್ರವಾದ ಆಲೋಚನೆಗಳನ್ನು, ಕೋಮುವಾದವನ್ನು ಮೀರಬೇಕು; ಪ್ರಜಾಪ್ರಭುತ್ವ, ಮಾನವೀಯ ಮೌಲ್ಯಗಳ ಆಧಾರದ ಮೇಲೆ ತಮ್ಮ ಐಕ್ಯಮತವನ್ನು ಗಟ್ಟಿ ಪಡಿಸಿಕೊಂಡು ಬೃಹತ್ ಜನಾಂದೋಲನದ ಮೂಲಕ ಒತ್ತಡ ಹೇರಿ ಈ ವಿನಾಶಕಾರಿ ಒಕ್ಕಲಿಬ್ಬಿಸುವಿಕೆಯನ್ನು ತಡೆಯಬೇಕು ಮತ್ತು ಎಲ್ಲಾ ವಿಭಾಗದ ಜನರ ನಡುವಿನ ಒಗ್ಗಟ್ಟನ್ನು ಕಾಪಾಡಲು ಅಸ್ಸಾಂ ಸರ್ಕಾರವನ್ನು ಒತ್ತಾಯಿಸಬೇಕು ಎಂಬುದು ನಮ್ಮ ಹೃದಯಪೂರ್ವಕ ಮನವಿಯಾಗಿದೆ. ■

## ಒಡಿಸ್ಸಾದ ವಿದ್ಯಾರ್ಥಿನಿಯ ಆತ್ಮಾಹುತಿ!

# ನ್ಯಾಯಕ್ಕಾಗಿಯ ವಿಫಲ ಹೋರಾಟದ ಫಲಶ್ರುತಿ!!

ಒಡಿಶಾದ ಬಾಲಸೋರ್‌ನ ಫಕೀರ್ ಮೋಹನ್ ಕಾಲೇಜಿನ ವಿದ್ಯಾರ್ಥಿನಿ ಸೌಮ್ಯಶ್ರೀ ಬಿಸಿ, ಪ್ರಾಂಶುಪಾಲರ ಕಚೇರಿಯ ಮುಂದೆಯೇ ಹಾಡು ಹಗಲೇ ಆತ್ಮದಹನ ಮಾಡಿಕೊಂಡ ಭೀಕರ ಘಟನೆ ದೇಶವನ್ನು ಬೆಚ್ಚಿಬೀಳಿಸಿದೆ. ಶೇ. 95ರಷ್ಟು ಸುಟ್ಟ ಗಾಯದಿಂದ 3 ದಿನಗಳ ನಂತರ, ಕಳೆದ ಜುಲೈ 14 ರಂದು ಭುವನೇಶ್ವರದಲ್ಲಿ ಆಕೆ ಕೊನೆಯುಸಿರೆಳೆದಳು. ಮಹಿಳಾ ಶಿಕ್ಷಣವನ್ನು ಪ್ರತಿಪಾದಿಸಿದ ಒಡಿಯಾದ ಸಮಾಜ ಸುಧಾರಕರಾದ ಫಕೀರ್ ಮೋಹನ್ ಸೇನಾಪತಿ ಅವರ ನೆನಪಿನಲ್ಲಿ ಸ್ಥಾಪಿಸಿದ ವಿದ್ಯಾಸಂಸ್ಥೆಯಲ್ಲಿ ಈ ದುರ್ಘಟನೆ ನಡೆದಿರುವುದು ನಿಜಕ್ಕೂ ಖೇದಕರ.

### ಹಿನ್ನೆಲೆ

ತನ್ನೊಂದಿಗೆ ಲೈಂಗಿಕವಾಗಿ ಸಹಕರಿಸಬೇಕೆಂದು ಸೌಮ್ಯಶ್ರೀಯನ್ನು ಸ್ವತಃ ಅವಳ ವಿಭಾಗದ ಮುಖ್ಯಸ್ಥರೇ ನಿರಂತರವಾಗಿ ಒತ್ತಾಯಿಸುತ್ತಿದ್ದರು. ಇಲ್ಲಿಂದ ಪ್ರಾರಂಭವಾದ ಅವಳ ಕರಾಳ ಕಥೆ, ನಂತರ ಬೆದರಿಕೆ, ದೌರ್ಜನ್ಯ, ಕಿರುಕುಳಕ್ಕೆ ತಿರುಗಿತು. ಎಲ್ಲರೆದುರು ಅವಳನ್ನು ಅವಮಾನಗೊಳಿಸಿ, ತಕ್ಕ ಶಿಕ್ಷೆ ನೀಡಲು, ಸೌಮ್ಯಶ್ರೀಯನ್ನು ಸೆಮಿಸ್ಟರ್ ಪರೀಕ್ಷೆಗೆ ಹಾಜರಾಗದಂತೆ ತಡೆಯಲಾಯಿತು. ಇದು ಅವಳಲ್ಲಿ ಆಳವಾದ ಆಘಾತವನ್ನು ಸೃಷ್ಟಿಸಿತು. ಧೈರ್ಯ ತಂದುಕೊಂಡು ಅವಳು ಪ್ರಾಂಶುಪಾಲರಿಗೆ ದೂರು ನೀಡಿದಳು. ಅದರಿಂದ ಪ್ರಯೋಜನವಾಗದೆ, ಸ್ಥಳೀಯ ಬಿಜೆಪಿ ಶಾಸಕರಿಂದ ಹಿಡಿದು, ಬಿಜೆಪಿ ಸಂಸದ ಮತ್ತು ಮಾಜಿ ಕೇಂದ್ರ ಸಚಿವ ಶ್ರೀ ಪ್ರತಾಪ್ ಸಾರಂಗಿಯವರೆಗೂ ಅವಳು ಎಲ್ಲರಿಗೂ ದೂರು ನೀಡಿದಳು, ಎಲ್ಲ ಅಧಿಕಾರದ ಬಾಗಿಲುಗಳನ್ನು ತಟ್ಟಿದಳು. ಎಸ್‌ಪಿಗೆ ಮತ್ತು ಉನ್ನತ ಶಿಕ್ಷಣ ಸಚಿವ, ಕೇಂದ್ರ ಶಿಕ್ಷಣ ಸಚಿವ ಶ್ರೀ ಧರ್ಮೇಂದ್ರ ಪ್ರಧಾನ್ ಮತ್ತು ಒಡಿಶಾದ ಮುಖ್ಯಮಂತ್ರಿಗಳಿಗೆ ತನ್ನ ದೂರನ್ನು ಟ್ವೀಟ್ ಮಾಡಿದಳು. ಎಲ್ಲಾವೂ ಅರಣ್ಯರೋದನವಾಯಿತು ಅಷ್ಟೇ! ಸೌಮ್ಯಶ್ರೀ ಆರ್‌ಎಸ್‌ಎಸ್–ಬಿಜೆಪಿಯ ವಿದ್ಯಾರ್ಥಿ ಸಂಘಟನೆ ಎಬಿವಿಪಿಯ ಸಕ್ರಿಯ ಸದಸ್ಯೆ ಆಗಿದ್ದರೂ, ಈ ಸಂಘಟನೆಗಳ ಯಾವ ಮುಖಂಡರೂ ಅವಳ ಸಮಸ್ಯೆಯನ್ನು ಬಗೆಹರಿಸುವ ಗೋಜಿಗೆ ಹೋಗಲಿಲ್ಲ. ಅವಳ ಎಲ್ಲಾ ಪ್ರಯತ್ನಗಳು ನಿರಾಶೆಯಲ್ಲಿ ಅಂತ್ಯಗೊಂಡವು!

ಫಕೀರ್ ಮೋಹನ್ ಕಾಲೇಜಿನ ಆಂತರಿಕ ದೂರು ಸಮಿತಿ(ಐಸಿಸಿ), ಕಣ್ಣೊರೆಸುವಂತಹ ತನಿಖೆಯನ್ನು ನಡೆಸಿ, ಆಪಾದಿತನನ್ನು ಖುಲಾಸೆ ಮಾಡಿತು; ಅವರನ್ನು ಇಲಾಖೆಯ ಮುಖ್ಯಸ್ಥರಾಗಿ ಮುಂದುವರಿಸಲು ಅನುಮತಿಸಿತು. ದಶದಿಕ್ಕುಗಳಿಂದಲೂ ಸೌಮ್ಯಶ್ರೀ ಅವಮಾನವನ್ನು ಎದುರಿಸಬೇಕಾಯಿತು. ಇಷ್ಟೊಂದು ಕಿರುಕುಳ ಮತ್ತು ಅವಮಾನಕ್ಕೊಳಗಾದ ಸೌಮ್ಯಶ್ರೀ ಕೊನೆಗೆ ಆತ್ಮಾಹುತಿ ಮಾಡಿಕೊಳ್ಳುವ ಕಠಿಣ ನಿರ್ಧಾರ ತೆಗೆದುಕೊಂಡಳು.

### ನಿರಾಕರಿಸಲಾದ ನ್ಯಾಯದಿಂದಾದ ಆಹುತಿ!

ಎಂತಹ ದುರಂತ! ನ್ಯಾಯವನ್ನು ನೀಡುವಲ್ಲಿ ವ್ಯವಸ್ಥೆಯ ಸಂಪೂರ್ಣ ವೈಫಲ್ಯ ಇಲ್ಲಿ ಸುಸ್ಪಷ್ಟವಾಗಿದೆ, ಅಲ್ಲವೇ? ಈ ಯುವತಿ, ತನ್ನ ಭವಿಷ್ಯದ ವೃತ್ತಿಜೀವನವನ್ನೇ ಕಳೆದುಕೊಂಡಳು. ತನ್ನ ಸ್ನೇಹಿತರು ಮತ್ತು ಕುಟುಂಬದವರ ಮುಂದೆ ಪದೇ ಪದೇ ಅವಮಾನಕ್ಕೊಳಗಾದಳು. ಈ ಎಲ್ಲ ಸಂಕಷ್ಟಗಳನ್ನು ಅವಳು ಎದುರಿಸಿದ್ದಾದರೂ ಹೇಗೆ? ಸಮಸ್ಯೆಗಳ ಸುಳಿಯಿಂದ ಹೊರಬರುವ ದಾರಿಯನ್ನು ಕಾಣದೆ ಅದೆಷ್ಟು ರಾತ್ರಿಗಳನ್ನು ಸೌಮ್ಯಶ್ರೀ ನಿದ್ದೆಯಿಲ್ಲದೆ ಕಳೆದಳೋ ಎಂಬುದನ್ನು ಊಹಿಸಿಕೊಂಡರೆ ನಮ್ಮ ಎದೆ ತಣ್ಣಗಾಗುತ್ತದೆ.

### ಹೆಣ್ಣುಮಕ್ಕಳಿಗೆ ಎಲ್ಲಿದೆ ಸುಭದ್ರತೆ?

ನಮ್ಮ ಹೆಣ್ಣುಮಕ್ಕಳು ಯಾವ ರಾಜ್ಯದಲ್ಲಿ ತಾನೇ ಸುರಕ್ಷಿತರು! ಉತ್ತರ ಪ್ರದೇಶ, ಮಧ್ಯಪ್ರದೇಶ, ಬಿಹಾರ, ಗುಜರಾತ್, ಅಸ್ಸಾಂ ಮತ್ತು ಹರಿಯಾಣದಂತಹ ಬಿಜೆಪಿ ಆಡಳಿತದ ರಾಜ್ಯಗಳಲ್ಲಿ ಮಹಿಳೆಯರಿಗೆ ಯಾವುದೇ ಭದ್ರತೆಯಿಲ್ಲ. ಕಾಂಗ್ರೆಸ್ ಆಡಳಿತದ ರಾಜ್ಯಗಳಾಗಲಿ, ಟಿಎಂಸಿ ಆಡಳಿತದ ಪಶ್ಚಿಮ ಬಂಗಾಳವಾಗಲಿ, ಇದೀಗ ಒಡಿಶಾದಲ್ಲಿ, ಎಲ್ಲೆಡೆ ಮಹಿಳೆಯರ ಮೇಲಿನ ದೌರ್ಜನ್ಯ–ಕ್ರೌರ್ಯಗಳು ವಿಜೃಂಭಿಸುತ್ತಿವೆ!

ಹತ್ರಾಸ್‌ನಿಂದ ಹಿಡಿದು ಉನ್ನಾವ್‌ನ ಸಾಮೂಹಿಕ ಅತ್ಯಾಚಾರ ಮತ್ತು ಕೊಲೆಯವರೆಗೆ ಎಲ್ಲೆಡೆ ಅತ್ಯಾಚಾರಗಳು ನಿರ್ಭೀತಿಯಿಂದ ಜರುಗುತ್ತಿವೆ. ರಾಜಸ್ಥಾನದ ಸರ್ಕಾರಿ ಆಸ್ಪತ್ರೆಯ ನರ್ಸಿಂಗ್ ಅಧಿಕಾರಿಯ ಕಿರುಕುಳದಿಂದ ವಾರ್ಡ್ ಸಹಾಯಕಿ ವಿಷ ಸೇವಿಸಿ ಆತ್ಮಹತ್ಯೆಗೆ ಪ್ರಯತ್ನಿಸಿದರು. ಮಧ್ಯಪ್ರದೇಶದಲ್ಲಿ ಅತ್ಯಾಚಾರ ಮತ್ತು ಅಪಹರಣಕ್ಕೆ ಒಳಗಾದ 16 ವರ್ಷದ ಬಾಲಕಿ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡಳು. ಅತ್ಯಾಚಾರಕ್ಕೆ ಒಳಗಾದ 26 ವರ್ಷದ ಹೆಣ್ಣುಮಗಳು, 'ನ್ಯಾಯ ವಿಳಂಬ'ದಿಂದ ಗುಜರಾತ್ ಹೈಕೋರ್ಟಿನಲ್ಲೇ ವಿಷ ಸೇವನೆ ಮಾಡಿದಳು! ಅಸ್ಸಾಂನಲ್ಲಿ ಶಿಕ್ಷಕನಿಂದಲೇ ಲೈಂಗಿಕ ದೌರ್ಜನ್ಯಕ್ಕೆ ಒಳಗಾಗಿದ್ದ ವಿದ್ಯಾರ್ಥಿನಿ ಆತ್ಮಹತ್ಯೆಗೆ ಮೊರೆಹೋದಳು. ಹರಿಯಾಣದಲ್ಲಿ ನೆರೆಮನೆಯವನಿಂದ ತಿಂಗಳುಗಟ್ಟಲೆ ಲೈಂಗಿಕ ದೌರ್ಜನ್ಯವನ್ನು ಸಹಿಸಿಕೊಂಡ ನಂತರ ಕೀಟನಾಶಕ ಸೇವಿಸಿದ 16 ವರ್ಷದ ಬಾಲಕಿ ಆತ್ಮಹತ್ಯೆಯ ದಾರಿ ಹಿಡಿದಳು. ಹೀಗೆ "ಡಬಲ್ ಎಂಜಿನ್" ಬಿಜೆಪಿ ಸರ್ಕಾರಗಳು ಲೈಂಗಿಕ ಹಲ್ಲೆ, ಅತ್ಯಾಚಾರ, ಸಾಮೂಹಿಕ ಅತ್ಯಾಚಾರಗಳ ದಾಖಲೆಗಳನ್ನು ಸೃಷ್ಟಿಸಿವೆ. ಈ ಹೆಣ್ಣುಮಕ್ಕಳು ಸರ್ಕಾರಗಳ ಪರಿಹಾರವನ್ನು ನಿರಾಕರಿಸಿ, ತಮ್ಮ ಜೀವನವನ್ನು ಕೊನೆಗೊಳಿಸುವ ದಾರಿಯನ್ನು ಆಯ್ಕೆ ಮಾಡಿಕೊಂಡರು. ಈಗ, ಕಳೆದ ಒಂದು ವರ್ಷದಿಂದ ಬಿಜೆಪಿ ಅಧಿಕಾರದಲ್ಲಿರುವ ಒಡಿಶಾ ಈ ಪಟ್ಟಿಗೆ ಸೇರಿದೆ. ಸೌಮ್ಯಶ್ರೀ ಘಟನೆಯ ಬೆನ್ನಲ್ಲೇ ಹತ್ತಿರದ ಪುರಿ ಜಿಲ್ಲೆಯ ಮತ್ತೊಬ್ಬ ಬಾಲಕಿ ದುಷ್ಕರ್ಮಿಗಳಿಂದ ಜೀವಂತವಾಗಿ ಸುಟ್ಟು ಕರಕಲಾಗಿದ್ದು ಪ್ರಾಣ ನೀಗಿದ್ದಾಳೆ. ಈ ಲೇಖನ ಮುದ್ರಣವಾಗುವಷ್ಟರಲ್ಲಿ ದೇಶದ ವಿವಿಧ ಭಾಗಗಳಿಂದ ಮಹಿಳೆಯರ ಮೇಲಿನ ಭೀಕರ ದೌರ್ಜನ್ಯದ ಇನ್ನೆಷ್ಟು ಸುದ್ದಿಗಳು ವರದಿಯಾಗುತ್ತವೆಯೋ?

ಆರ್‌ಎಸ್‌ಎಸ್–ಬಿಜೆಪಿ ನಾಯಕರು, ಬಿಜೆಪಿಯೇತರ ರಾಜ್ಯಗಳಲ್ಲಿ ಮಹಿಳಾ ಕಿರುಕುಳದ ಘಟನೆ ಸಂಭವಿಸಿದರೆ, ಬಲಿಪಶುಗಳ ಬಗ್ಗೆ ಧ್ವನಿ ಎತ್ತುತ್ತಾರೆ, ಸಹಾನುಭೂತಿ ತೋರುತ್ತಾರೆ. ಆದರೆ ಕೇಂದ್ರ ಮತ್ತು ವಿವಿಧ ರಾಜ್ಯಗಳಲ್ಲಿ ತಮ್ಮದೇ ಸರ್ಕಾರಗಳು ಅಧಿಕಾರದಲ್ಲಿರುವಲ್ಲಿ ಯಾವಾಗಲೂ ಅಪರಾಧಿಗಳ ಪರವಾಗಿ ನಿಲ್ಲುತ್ತಾರೆ. ಸೌಮ್ಯಶ್ರೀ ಪ್ರಕರಣದಲ್ಲಿ ಸರ್ಕಾರ, ಆಡಳಿತ ಪಕ್ಷದ ಜನ ಪ್ರತಿನಿಧಿಗಳು, ಶೈಕ್ಷಣಿಕ ಅಧಿಕಾರಶಾಹಿ ಮತ್ತು ಕಾನೂನು ಜಾರಿ ಸಂಸ್ಥೆಗಳು ನಡೆದುಕೊಂಡ ರೀತಿಯನ್ನು ಗಮನಿಸಿದರೆ ಮಹಿಳೆಯರ ಘನತೆಯ ಪ್ರಶ್ನೆ ಉದ್ಭವಿಸಿದಾಗ, ಇವರೆಲ್ಲರೂ ಎಷ್ಟು ಕೆಳಮಟ್ಟಕ್ಕೆ ಇಳಿಯಲು ಸಾಧ್ಯ ಎಂಬುದು ಸ್ಪಷ್ಟವಾಗುತ್ತದೆ. ಸೌಮ್ಯಶ್ರೀ ಘಟನೆ ಆತ್ಮಹತ್ಯೆಯಲ್ಲ, ಬದಲಿಗೆ ಕೊಳೆತ ವ್ಯವಸ್ಥೆ ಮತ್ತು ಅದರ ಬಂಟರಿಂದ ನಡೆದ ಕಗ್ಗೊಲೆ ಎಂದರೆ ಅತಿಶಯೋಕ್ತಿಯಾಗಲಾರದು. ಸೌಮ್ಯಶ್ರೀ ಸಾವು ಒಡಿಶಾದಲ್ಲಿ ಕೋಲಾಹಲವನ್ನು ಸೃಷ್ಟಿಸಿತು. ಈ ಭೀಕರ ಘಟನೆಯ ನಂತರ, ಸೌಮ್ಯಶ್ರೀಗೆ ನ್ಯಾಯ ಒದಗಿಸುವಂತೆ ಮತ್ತು ಅಂತಹ ಘೋರ ಕೃತ್ಯದ ಅಪರಾಧಿಗಳಿಗೆ ನಿದರ್ಶನೀಯ ಶಿಕ್ಷೆ ವಿಧಿಸುವಂತೆ ಒತ್ತಾಯಿಸಿ ಸೋಷಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ(ಕಮ್ಯುನಿಸ್ಟ್) ಪಕ್ಷವು ಹಲವು ಹೋರಾಟಗಳಿಗೆ ಕರೆ ನೀಡಿತು. ಜುಲೈ 14 ರಂದು, 'ಒಡಿಶಾ ರಾಜ್ಯವ್ಯಾಪಿ ಪ್ರತಿಭಟನಾ ದಿನ'ಕ್ಕೆ ಅಭೂತಪೂರ್ವ ಜನ ಪ್ರತಿಕ್ರಿಯೆ ದೊರೆಯಿತು. ಜುಲೈ 15 ರಂದು ಶೋಕಾಚರಣೆಯ ದಿನವನ್ನಾಗಿ ಆಚರಿಸಲಾಯಿತು. ನಂತರ, ಜುಲೈ 17 ರಂದು ಒಡಿಶಾ ಬಂದ್‌ಗೆ ಕರೆ ನೀಡಲಾಯಿತು. ಎಐಡಿಎಸ್‌ಓ, ಎಐಡಿವೈಓ ಮತ್ತು ಎಐಎಂಎಸ್‌ಎಸ್ ಸಹ ಸೌಮ್ಯಶ್ರೀಗೆ ನ್ಯಾಯ ಒದಗಿಸಬೇಕೆಂದು ಹಲವು ಪ್ರತಿಭಟನೆಗಳನ್ನು ನಡೆಸಿದವು. ಜೀವನದ ಪ್ರತಿಯೊಂದು ಕ್ಷೇತ್ರದಲ್ಲಿಯೂ ಅಸಹನೀಯ ಆರ್ಥಿಕ ಸಂಕಷ್ಟ ಮತ್ತು ಉಸಿರುಗಟ್ಟಿಸುವ ಪರಿಸ್ಥಿತಿಗಳಲ್ಲಿ ನರಳುತ್ತಿದ್ದ ಒಡಿಶಾದ ಜನತೆ ಸ್ವಯಂಪ್ರೇರಿತವಾಗಿ ಬಂದ್‌ಗೆ ಬೆಂಬಲ ನೀಡಿದರು.

ಆಡಳಿತಾರೂಢ ಬಿಜೆಪಿಯು ಅರಿಶಿನ, ಮಂಗಳಸೂತ್ರ ಮತ್ತು "ಬೇಟಿ ಬಚಾವೋ ಬೇಟಿ ಪಡಾವೋ" ಎಂಬ ಘೋಷಣೆಗಳನ್ನು ಎತ್ತುತ್ತದೆ. ಆದರೆ ಬಿಜೆಪಿ ಆಡಳಿತವಿರುವ ರಾಜ್ಯಗಳಲ್ಲೇ ಮಹಿಳೆಯರ ವಿರುದ್ಧದ 12ನೇ ಪುಟಕ್ಕೆ....

## ಜಿಲ್ಲಾ ಕೇಂದ್ರಗಳಲ್ಲಿ ಆಶಾಗಳ ಅಹೋರಾತ್ರಿ ಧರಣಿ

# ರಾಜಿರಹಿತ ಹೋರಾಟದ ಹೊಸ ಅಧ್ಯಾಯ ಬರೆದ ದಿಟ್ಟೆಯರು

ಎಐಯುಟಿಯುಸಿಗೆ ಸಂಯೋಜನೆಗೊಂಡ ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘದ ನೇತೃತ್ವದಲ್ಲಿ ಈ ಬಾರಿ ಆಗಸ್ಟ್ 12,13,14ರಂದು ಆಶಾ ಕಾರ್ಯಕರ್ತೆಯರು ಮತ್ತೊಮ್ಮೆ ಬೀದಿಗಿಳಿದು ಅಹೋ ರಾತ್ರಿ ಹೋರಾಟದಲ್ಲಿ ತೊಡಗಿದ್ದರು. ಎಂದಿನಂತೆ



ಬಳ್ಳಾರಿ: ಎಐಯುಟಿಯುಸಿ ರಾಜ್ಯಾಧ್ಯಕ್ಷರಾದ ಕಾ. ಕೆ. ಸೋಮಶೇಖರ್ ಮಾತನಾಡುತ್ತಿರುವುದು

ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಅಲ್ಲ! ಬದಲಿಗೆ ರಾಜ್ಯದ 31 ಜಿಲ್ಲೆಗಳಲ್ಲಿ, 3 ದಿನಗಳ ಕಾಲ 42,000 ಆಶಾ ಕಾರ್ಯರ್ತೆಯರು ಕೆಲಸ ಸ್ಥಗಿತಗೊಳಿಸಿ, ಬೃಹತ್ ಅಹೋರಾತ್ರಿ ಧರಣಿಯಲ್ಲಿ ಭಾಗವಹಿಸಿದ್ದು ಅಭೂತಪೂರ್ವವಾಗಿತ್ತು!

ಯಾಕೆ ಈ ಹೋರಾಟ? ಇದೇ ವರ್ಷ ಜನವರಿಯಲ್ಲಿ ಬೆಂಗಳೂರಿನಲ್ಲಿ ನಡೆದ ಅನಿರ್ದಿಷ್ಟ ಮುಷ್ಕರದ ಸಂದರ್ಭದಲ್ಲಿ, ಮುಖ್ಯಮಂತ್ರಿಗಳು ರೂ.10,000 ನಿಶ್ಚಿತ ಗೌರವ ಧನ ನೀಡುವ ಕುರಿತಂತೆ ಏಪ್ರಿಲ್‌ನಲ್ಲೇ ಆದೇಶ ಹೊರಡಿಸುವುದಾಗಿ ಭರವಸೆ ನೀಡಿದ್ದರು. ಬಜೆಟ್‌ನಲ್ಲೂ ರೂ.1000



ಗದಗ: ಪ್ರತಿಭಟನೆಯನ್ನು ಮುಂದಕ್ಕೆ ಕೊಂಡೊಯ್ಯಲು ಸುರಿ ಮಳೆಯಲ್ಲೇ ಸಂಕಲ್ಪ

ಹೆಚ್ಚಳ ಮಾಡುವುದಾಗಿ ಘೋಷಣೆ ಮಾಡಿದ್ದರು. ಆದರೆ 8 ತಿಂಗಳು ಕಳೆದರೂ ರಾಜ್ಯ ಕಾಂಗ್ರೆಸ್ ಸರ್ಕಾರ, ತಾನೇ ನೀಡಿದ ಭರವಸೆಯನ್ನು ಕಸದ ಬುಟ್ಟಿಗೆಸೆದು, 42,000 ಆಶಾಗಳಿಗೆ ದ್ರೋಹವೆಸಗಿತು. ಅಷ್ಟೇ ಅಲ್ಲದೆ, ಆಶಾಗಳ ಹೋರಾಟಕ್ಕೆ ಹೃತ್ಪೂರ್ವಕ ಬೆಂಬಲ ನೀಡಿದ ಸಾಹಿತಿಗಳು, ಬರಹಗಾರರು, ಬುದ್ಧಿ ಜೀವಿಗಳು ಸೇರಿದಂತೆ ಕೋಟ್ಯಂತರ ಜನತೆಯ ಭಾವನೆಗಳೊಂದಿಗೆ ಚಲ್ಲಾಟವಾಡಿತು. ಅಂತೆಯೇ ಕೊಟ್ಟ ಮಾತನ್ನು ಮುಖ್ಯಮಂತ್ರಿಗಳು ಉಳಿಸಿಕೊಳ್ಳಬೇಕು!! ಹಾಗೆಯೇ ಆಶಾಗಳನ್ನು ಕೆಲಸದಿಂದ ತೆಗೆಯುವ ಯಾವುದೇ ಕ್ರಮ ಕೈಗೊಳ್ಳಬಾರದು!! ಇದು ಜಿಲ್ಲಾ ಕೇಂದ್ರಗಳಲ್ಲಿ ನಡೆದ ಆಶಾಗಳ ಅಹೋರಾತ್ರಿ ಧರಣಿಯ ಪ್ರಮುಖ ಬೇಡಿಕೆಗಳಾಗಿದ್ದವು.

**ಮಳೆ, ಚಳಿ, ಬೆದರಿಕೆ ತಂತ್ರಗಳಿಗೆ ಜಗ್ಗದ ದಿಟ್ಟ ವನಿತೆಯರು**

ಕರ್ನಾಟಕದ ಕಾರ್ಮಿಕ ಹೋರಾಟದ ಇತಿಹಾಸದಲ್ಲೇ ಈ ಹೋರಾಟವು ಮೈಲಿಗಲ್ಲು ಸ್ಥಾಪಿಸಿತು ಎಂದು ಹೇಳಬಹುದು. ಏಕಕಾಲಕ್ಕೆ, ಒಂದೇ ಸಂಘಟನೆಯ ನೇತೃತ್ವದಲ್ಲಿ ರಾಜ್ಯದ 31 ಜಿಲ್ಲೆಗಳಲ್ಲೂ 42,000 ಆಶಾಗಳು ರಸ್ತೆಗಿಳಿದಿದ್ದು, ಸಾಮಾನ್ಯ ಸಂಗತಿಯಲ್ಲ. ಈ ಹೋರಾಟದಲ್ಲಿ, ಬೀದರ್‌ನಿಂದ ಚಾಮರಾಜನಗರದವರೆಗೆ, ದಕ್ಷಿಣ ಕನ್ನಡದಿಂದ ಬಳ್ಳಾರಿಯವರೆಗೆ ಆಶಾ ಕಾರ್ಯಕರ್ತೆಯರು ಎದೆಗುಂದದೆ ಎಲ್ಲಾ ಅಡೆ ತಡೆಗಳನ್ನು ಎದುರಿಸಿ ಸಕ್ರಿಯವಾಗಿ ಭಾಗವಹಿಸಿದ್ದು, ಎಂತಹವರಿಗಾದರೂ ಹುರುಪು ತುಂಬುವಂತದ್ದು. ಇಂದಿನ ದಿನಗಳಲ್ಲಿ ಕಾರ್ಮಿಕ ಹೋರಾಟಗಳು ದಿಕ್ಕುಗೆಡುತ್ತಿರುವಾಗ, ರಾಜಿಯಲ್ಲಿ ಕೊನೆಗೊಳ್ಳುತ್ತಿರುವಾಗ, ಆಶಾಗಳ ಈ ರಾಜಿರಹಿತ ಹೋರಾಟವು, ಕಾರ್ಮಿಕ ಹೋರಾಟಗಳಿಗೆ ಹೊಸ ಸ್ಫೂರ್ತಿ ತುಂಬಿರುವುದಂತೂ ನಿಜ. ಹಲವಾರು ಕಡೆ ಆಡಳಿತ ಹಾಗೂ ಪೋಲೀಸ್ ಕಡೆಯಿಂದ ಪ್ರತಿಭಟನೆಗೆ ಸ್ಥಳ ನೀಡುವುದಕ್ಕೆ, ಅನುಮತಿ ನೀಡುವುದಕ್ಕೆ, ಶಾಮಿಯಾನ ಹಾಕುವುದಕ್ಕೆ ಸಾಕಷ್ಟು ಸಮಸ್ಯೆ ಉಂಟು ಮಾಡಲಾಯಿತು. ಆಶಾಗಳು ಇಂತಹ ಯಾವುದೇ ಸಮಸ್ಯೆಗಳಿಗೆ ಜಗ್ಗಲಿಲ್ಲ. 'ಪ್ರತಿಭಟನೆ ಮಾಡುವುದು ನಮ್ಮ ಹಕ್ಕು, ಅಹೋರಾತ್ರಿ ಧರಣಿ ಮಾಡಿಯೇ ತೀರುತ್ತೇವೆ. ನಮ್ಮನ್ನು ಬಂಧಿಸಿದರೂ ಸರಿಯೇ' ಎಂಬ ಹೋರಾಟದ ಕೆಚ್ಚು ಆಶಾಗಳಲ್ಲಿ ಮನೆ ಮಾಡಿತ್ತು. ಕೊನೆಗೂ ತಾವು ಅಂದುಕೊಂಡಂತೆ ಅಹೋರಾತ್ರಿ ಧರಣಿ ಮಾಡಿಯೇಬಿಟ್ಟರು. ಜಿಲ್ಲೆಗಳಲ್ಲಿ ಆರೋಗ್ಯ ಇಲಾಖೆ, ಪ್ರತಿಭಟನೆಯಲ್ಲಿ ಭಾಗವಹಿಸುವುದನ್ನು ತಡೆಯಲು, ಸುತ್ತೋಲೆ ಜಾರಿ ಮಾಡಿತು. ಇಂತಹ ಯಾವುದೇ ಬೆದರಿಕೆ ತಂತ್ರಗಳಿಗೆ ಜಗ್ಗದೆ ಆಶಾಗಳು ಮತ್ತಷ್ಟು ಉತ್ಸಾಹದಿಂದ ಹೋರಾಟದಲ್ಲಿ ಭಾಗವಹಿಸಿದರು. 'ಧೋ' ಎಂದು ಸುರಿಯುವ ಮಳೆಗೂ ಕೂಡ ಅವರನ್ನು ಹೋರಾಟದ ಹೆಜ್ಜೆಯಿಂದ ಹಿಂದೆ ಸರಿಸಲು ಸಾಧ್ಯವಾಗಲಿಲ್ಲ. ಛತ್ರಿಯನ್ನು ಹಿಡಿದು ಹಗಲು ಹಾಗೂ ರಾತ್ರಿ ಧರಣಿಯ ಸ್ಥಳದಲ್ಲೇ ಕೂತಿದ್ದರು. ಅವರ ಹೋರಾಟದ ಕಿಚ್ಚಿಗೆ ಚಳಿಯ ವಾತಾವರಣವೂ ಬಿಸಿಯಾಗತೊಡಗಿತ್ತು. ಹಲವಾರು ಜಿಲ್ಲೆಗಳಲ್ಲಿ ಧರಣಿ ಸ್ಥಳದ ಸುತ್ತಮುತ್ತಲೇ ತಾವೇ ಅಡುಗೆ ಮಾಡಿ, ಆಶಾಗಳು ಊಟವನ್ನು ಬಡಿಸಿದರು.


ತುಮಕೂರು: ಆಶಾ ಕಾರ್ಯಕರ್ತೆಯರ ಸಂಘದ ಅಧ್ಯಕ್ಷ ಕಾ. ಸೋಮಶೇಖರ ಯಾದಗಿರಿ ಅವರಿಂದ ಜಿಲ್ಲಾಧಿಕಾರಿ ಶ್ರೀಮತಿ ಶುಭಾ ಕಲ್ಯಾಣ್ ಅವರಿಗೆ ಮನವಿ ಪತ್ರ ಸಲ್ಲಿಕೆ

ಕೆಲವು ಕಡೆ ಕರ್ನಾಟಕ ರಾಜ್ಯ ವಸತಿ ನಿಲಯ ಕಾರ್ಮಿಕ ಸಂಘದ ಸದಸ್ಯರು 3 ದಿನಗಳೂ ತಮ್ಮ ಕೆಲಸಗಳನ್ನು ಬದಿಗೊತ್ತಿ, ಆಶಾ ಹೋರಾಟಕ್ಕೆ ಅಡುಗೆ ಮಾಡಿದ್ದು, ಹೃದಯಸ್ಪರ್ಶಿಯಾಗಿತ್ತು. ಒಟ್ಟಿನಲ್ಲಿ ಜಿಲ್ಲಾಧಿಕಾರಿಗಳ ಕಛೇರಿಗಳು, ಪ್ರಮುಖ ವೃತ್ತಗಳು ಆಶಾ ಹೋರಾಟದ ಕಣವಾಗಿ ಮಾರ್ಪಟ್ಟಿದ್ದವು. ಈ ಹೋರಾಟದ ಕಾವು ಜಿಲ್ಲೆಯಾದ್ಯಂತ ಸಂಪೂರ್ಣವಾಗಿ ವ್ಯಾಪಿಸಿತ್ತು. ಲಕ್ಷಾಂತರ ಜನರ ಹೃದಯವನ್ನು ತಟ್ಟಿತ್ತು.

ಸಾಮಾಜಿಕ ಹೋರಾಟಗಾರರಾದ ಶ್ರೀ.ಎಸ್. ಆರ್ ಹಿರೇಮಠ್, ಬಂಡಾಯ ಸಾಹಿತಿಗಳಾದ ಶ್ರೀ. ಅಲ್ಲಮಪ್ರಭು ಬೆಟ್ಟದೂರು, ಲೇಖಕಿ ಶ್ರೀಮತಿ ರೂಪಾ ಹಾಸನ ಒಳಗೊಂಡಂತೆ ಇತರ ಬರಹಗಾರರು,



ಹಾಸನ: ಲೇಖಕಿ, ಸಾಮಾಜಿಕ ಕಾರ್ಯಕರ್ತೆ ಶ್ರೀಮತಿ ರೂಪ ಹಾಸನ ಅವರಿಂದ ಬೆಂಬಲ

ಪ್ರೊ. ಕಾಳಚನ್ನೇಗೌಡ ಸೇರಿದಂತೆ ಇತರೆ ನಿವೃತ್ತ ಪ್ರಾಧ್ಯಾಪಕರು, ವಿವಿಯ ಸಿಂಡಿಕೇಟ್ ಸದಸ್ಯರು, ಶ್ರೀ. ಚಾಮರಸ ಮಾಲೀಪಾಟೀಲ್ ಒಳಗೊಂಡಂತೆ ವಿವಿಧ ರೈತ ಸಂಘಟನೆಯ ಮುಖಂಡರುಗಳು, ಬ್ಯಾಂಕ್ ಹಾಗೂ ಎಲ್‌ಐಸಿ ಯೂನಿಯನ್ ಮುಖಂಡರು, ದಲಿತ ಸಂಘಟನೆಗಳ ಮುಖಂಡರು, ಮಾಜಿ ಹಾಗೂ ಹಾಲಿ ಶಾಸಕರು, ಸಂಸದರು, ರಾಜ್ಯಸಭಾ ಸದಸ್ಯರು, ಎಐಡಿಎಸ್‌ಓ, ಎಐಡಿವೈಓ, ಎಐಎಂಎಸ್‌ಎಸ್, ಎಐಕೆಕೆಎಂಎಸ್ ಸಂಘಟನೆಗಳ ಮುಖಂಡರು, ವಿವಿಧ ಜಿಲ್ಲೆಗಳಲ್ಲಿ ಧರಣಿಯ ಸ್ಥಳಕ್ಕೆ ಆಗಮಿಸಿ, ಹೋರಾಟಕ್ಕೆ ತಮ್ಮ ಸಂಪೂರ್ಣ



ಮಂಗಳೂರು: ಪ್ರತಿಭಟನಾ ರ್‍ಯಾಲಿ

ಬೆಂಬಲವನ್ನು ಸೂಚಿಸಿದರು. ಈ ಸಂದರ್ಭದಲ್ಲಿ ರಾಜ್ಯವ್ಯಾಪಿ ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘದ ರಾಜ್ಯ ಹಾಗೂ ಜಿಲ್ಲಾ ಮುಖಂಡರುಗಳು, ಎಐಯುಟಿಯುಸಿ ರಾಜ್ಯ ಸಮಿತಿ ಸದಸ್ಯರು ಪ್ರತಿಭಟನಾ ನಿರತ ಆಶಾಗಳನ್ನು ಉದ್ದೇಶಿಸಿ ಮಾತನಾಡಿದರು. ಇದರ ನಡುವೆ ಹೋರಾಟದ ಒತ್ತಡಕ್ಕೆ ಮಣಿದು ಆಶಾಗಳನ್ನು ತೆಗೆಯುವ ಕ್ರಮಗಳನ್ನು ಹಿಂಪಡೆಯುದಾಗಿ ಆರೋಗ್ಯ ಇಲಾಖೆ ತಿಳಿಸಿದ್ದಲ್ಲದೆ, ಈ ಕುರಿತು ನಡೆದ ಸಭೆಯ ನಡಾವಳಿಯಲ್ಲೂ ದಾಖಲಿಸಿತು. ಇದು ಹೋರಾಟಕ್ಕೆ ದೊರೆತ ಮೊದಲ ಜಯವಾಗಿದೆ. ಕೊನೆಯದಾಗಿ ಆಶಾಗಳ ಬೇಡಿಕೆಗಳ ಕುರಿತಂತೆ ಹೋರಾಟವನ್ನು ಇನ್ನಷ್ಟು ತೀವ್ರಗೊಳಿಸುವ, ಸಂಘಟನೆಯನ್ನು ಬಲಗೊಳಿಸುವ ಪ್ರತಿಜ್ಞಾ ವಿಧಿಯನ್ನು ಸ್ವೀಕರಿಸುವುದರೊಂದಿಗೆ ಅಹೋರಾತ್ರಿ ಧರಣಿ ಅಂತ್ಯಗೊಂಡಿತು. ಹಲವು ಜಿಲ್ಲೆಗಳಲ್ಲಿ ಪ್ರಮುಖ ವೃತ್ತಗಳಲ್ಲಿ ಮಾನವ ಸರಪಳಿ ರಚಿಸಿ, ಧರಣಿಗೆ ಮುಕ್ತಾಯ ಹಾಡಿದರು.

ಎಐಯುಟಿಯುಸಿ ರಾಜ್ಯ ಅಧ್ಯಕ್ಷರಾದ ಕಾ.ಕೆ.ಸೋಮಶೇಖರ್ ಮಾತನಾಡುತ್ತಾ, "ಆಶಾ ಕಾರ್ಯಕರ್ತೆಯರನ್ನು ಕಾರ್ಮಿಕರೆಂದು ಪರಿಗಣಿಸಿ ಕನಿಷ್ಠ ವೇತನ, ಪಿಎಫ್ ಇಎಸ್‌ಐ, ಗ್ರಾಚ್ಯುಟಿ ಇತ್ಯಾದಿ ಸಾಮಾಜಿಕ ಭದ್ರತೆಗಳನ್ನು ಕಲ್ಪಿಸಬೇಕೆಂದು ILO ಹಾಗೂ ಇತರ ಸಾಂವಿಧಾನಿಕ ಸಂಸ್ಥೆಗಳು ಶಿಫಾರಸ್ಸು ಮಾಡಿರುವುದನ್ನು ಸರ್ಕಾರಗಳು ಅಲಕ್ಷಿಸುತ್ತಾ ಬಂದಿವೆ. ಇಂತಹ ಸಂದರ್ಭದಲ್ಲಿ ತಾಯಿ–ಮಕ್ಕಳ ಆರೈಕೆ, ಸಾಂಕ್ರಾಮಿಕಗಳ ಬಗ್ಗೆ ಜಾಗೃತಿ, ಪರಿಸರ ನೈರ್ಮಲ್ಯ, ಹತ್ತಾರು ಸರ್ವೆ ಕೆಲಸ ಕಾರ್ಯಗಳನ್ನು ಹಗಲು ರಾತ್ರಿ ನಿರ್ವಹಿಸುವ ಬಹುತೇಕ ತಳ ಸಮುದಾಯದ ಒಂಟಿ ಮಹಿಳೆಯರಾದ ಆಶಾ ಕಾರ್ಯಕರ್ತೆಯರಿಗೆ ಕನಿಷ್ಠ ರೂ. 15000 ಮಾಸಿಕ ಗೌರವಧನವನ್ನು ಕೇಳುವುದರಲ್ಲಿ ನ್ಯಾಯವಿಲ್ಲವೇ? ಬದಲಿಗೆ, ಆಶಾ ಕಾರ್ಯಕರ್ತೆಯರ ಹೋರಾಟವನ್ನು ಬಗ್ಗು ಬಡಿಯಲು, ಅವರನ್ನು ಕೆಲಸದಿಂದ ತೆಗೆದುಹಾಕುವ ಕ್ರಮಕ್ಕೆ ರಾಜ್ಯ ಸರ್ಕಾರ ಮುಂದಾಗಿರುವುದು ಅತ್ಯಂತ ಖಂಡನೀಯ" ಎಂದರು.

ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘದ ರಾಜ್ಯ ಅಧ್ಯಕ್ಷರಾದ ಕಾ.ಕೆ.ಸೋಮಶೇಖರ್ ಯಾದಗಿರಿ, "ಮುಖ್ಯಮಂತ್ರಿಗಳು ಮಾತು ಕೊಟ್ಟ ಮೇಲೆ, ಬೇಡಿಕೆ ಈಡೇರಿದ ಸಂತೋಷಕ್ಕೆ, ಆಶಾ ಕಾರ್ಯಕರ್ತೆಯರ ಜೊತೆಗೆ ಇಡೀ ನಾಡೇ ಸಂಭ್ರಮಿಸಿತ್ತು. ಈಗ 7 ತಿಂಗಳು ಕಳೆದರೂ ಸರ್ಕಾರ ಕೊಟ್ಟ ಮಾತಿನಂತೆ ಆದೇಶ ಮಾಡುವುದು ಒತ್ತಟ್ಟಿಗಿರಲಿ, ಅವರು ಕಾರ್ಯನಿರ್ವಹಿಸುವ ಪ್ರದೇಶದಲ್ಲಿ, ಕಡಿಮೆ ಜನಸಂಖ್ಯೆಯಿರುವಲ್ಲಿ ಆಶಾಗಳ ಸಂಖ್ಯೆಯನ್ನು ತರ್ಕಬದ್ಧಗೊಳಿಸುವ ಹೆಸರಿನಲ್ಲಿ, ಜನಸಂಖ್ಯೆ ಮಿತಿಯನ್ನು ಹೆಚ್ಚಿಸಲು ಹೊರಟಿದೆ. ಇದಲ್ಲದೆ, ಆಶಾಗಳ ಕಾರ್ಯಕ್ಷಮತೆಯನ್ನು ಮೌಲ್ಯಮಾಪನ ಮಾಡಲು ಹೊರಟಿದೆ. ಈ ಕುತರ್ಕದ ಕ್ರಮಗಳು ದೊಡ್ಡ ಸಂಖ್ಯೆಯ ಆಶಾಗಳನ್ನು ಕೆಲಸದಿಂದ ಹೊರಗಿಡುವ ಉದ್ದೇಶ ಹೊಂದಿವೆ ಎಂಬುದರಲ್ಲಿ ಅನುಮಾನವಿಲ್ಲ" ಎಂದರು.

ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘದ ರಾಜ್ಯ ಕಾರ್ಯದರ್ಶಿಗಳಾದ ಕಾ.ಡಿ.ನಾಗಲಕ್ಷ್ಮಿ ಮಾತನಾಡುತ್ತಾ, "ರಾಷ್ಟ್ರೀಯ ಆರೋಗ್ಯ ಅಭಿಯಾನದ ಅಡಿಯಲ್ಲಿ ಕಳೆದ 17 ವರ್ಷ ಹಗಲಿರುಳು ಸೇವೆಗೈದ ಆಶಾ ಕಾರ್ಯಕರ್ತೆಯರ ಪರಿಶ್ರಮದಿಂದ, ಕರೋನ ಕಾಲದಲ್ಲಿ ಕೋಟ್ಯಂತರ ಜನರ

11ನೇ ಪುಟಕ್ಕೆ....

## ಬ್ಯಾಂಕ್ ಬಡ್ಡಿದರ ಕಡಿತ:

# ಬಂಡವಾಳಿಗರ ಕಣ್ಣಿಗೆ ಬೆಣ್ಣೆ–ಜನ ಸಾಮಾನ್ಯರ ಕಣ್ಣಿಗೆ ಸುಣ್ಣ!

ಜೂನ್ 6, 2025ರಂದು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ, ತನ್ನ ಪ್ರಮುಖ ಬಡ್ಡಿ ದರವನ್ನು ಶೇ. 0.5ರಷ್ಟು ಕಡಿತಗೊಳಿಸುವುದಾಗಿ ಘೋಷಿಸಿದೆ. ಇಷ್ಟು ದಿನ ಹಣದುಬ್ಬರದಿಂದಾಗಿ ಆರ್‌ಬಿಐಗೆ ಇದನ್ನು ಮಾಡಲಾಗಿರಲಿಲ್ಲ ಎನ್ನಲಾಗಿದೆ. ಆದರೆ ಈಗ ಸರ್ಕಾರ ಹಾಗೂ ಆರ್‌ಬಿಐ ನಿಂದ ನಿಯೋಜಿತರಾದ ತಜ್ಞರು ಜನಸಾಮಾನ್ಯರಿಗೆ ತಿಳಿಯದ ವಿಚಿತ್ರ ವಾದಗಳ ಮೂಲಕ ಹಣದುಬ್ಬರ ಸಾಕಷ್ಟು ಇಳಿದಿದೆ ಎಂದು ತೀರ್ಪು ನೀಡಿದ್ದಾರೆ. ಜೊತೆಗೆ ಮನೆ, ಕಾರು, ಇತ್ಯಾದಿಗಳನ್ನು ಕೊಂಡುಕೊಂಡಿರುವ ಅನೇಕ ಜನರಿಗೆ ಸಾಲದ ಮಾಸಿಕ ಕಂತುಗಳ ಬಡ್ಡಿದರ ಕಡಿಮೆಯಾಗುತ್ತದೆ, ವ್ಯಾಪಾರಸ್ಥರು ಬಂಡವಾಳಿಗರು ಹೆಚ್ಚು ಸಾಲ ಪಡೆದು ಹೆಚ್ಚು ಹೂಡಿಕೆ ಮಾಡುತ್ತಾರೆ, ಇದರಿಂದ ಭಾರತದ ಆರ್ಥಿಕತೆ ವೇಗವಾಗಿ ಬೆಳೆಯುತ್ತದೆ ಎಂದೆಲ್ಲಾ ಹೇಳುವ 'ಬಂಡವಾಳ'ದ ಪರವಾದ ಅಥವಾ ಕೇವಲ ಈ ಕುರಿತಾದ ಪುಸ್ತಕಗಳನ್ನು ನೆಚ್ಚಿಕೊಂಡಿರುವ ಬಂಡವಾಳಶಾಹಿ ಅರ್ಥಶಾಸ್ತ್ರಜ್ಞರೂ ಇದ್ದಾರೆ. ಆದರೆ ಇದೆಲ್ಲವೂ ಈಗಾಗಲೇ ದಿವಾಳಿಯಾಗಿರುವ ಜನಸಾಮಾನ್ಯರಿಗೆ ಹೇಗೆ ಅನ್ವಯಿಸುತ್ತದೆ? ಬಂಡವಾಳಶಾಹಿ ವ್ಯವಸ್ಥೆಯಲ್ಲಿನ ನಾಮಕಾವಸ್ತೆ 'ಆರ್ಥಿಕ ಬೆಳವಣಿಗೆ'ಯು ದುಡಿಯುವ ಜನರ ಸಮೃದ್ಧತೆಯ ಸೂಚಕವೇ?

### ಬಡ್ಡಿದರ ಕಡಿತದ ಪ್ರಭಾವ

ಆರ್‌ಬಿಐನ 'ರೆಪೋ' ದರ ಕಡಿಮೆಯಾದಾಗ ಕೈಗಾರಿಕಾ ಮನೆತನಗಳು ಹೆಚ್ಚು ಹೂಡಿಕೆ ಮಾಡುತ್ತವೆ, ಇದರಿಂದ ಆರ್ಥಿಕತೆ ವೃದ್ಧಿಯಾಗುತ್ತದೆ, ಜನರು ಮನೆ ಅಥವಾ ಕಾರು ಇತ್ಯಾದಿ ಕೊಂಡುಕೊಳ್ಳುತ್ತಾರೆ ಎಂದು ಆಳ್ವಿಕರು ಹೇಳುತ್ತಾರೆ.

ಆದರೆ ಇದು ನಿಜವೇ? 145 ಕೋಟಿ ಭಾರತೀಯರಲ್ಲಿ ಎಷ್ಟು ಜನರು ಬ್ಯಾಂಕಿನಲ್ಲಿ ಸಾಲ ಪಡೆದು ಕಾರು ಕೊಳ್ಳಬಲ್ಲರು? ಅವರು ಸಾಲ ಪಡೆದರೂ, ಈ ನಿರುದ್ಯೋಗದ ಯುಗದಲ್ಲಿ ಎಷ್ಟು ಜನ ಅದನ್ನು ಹಿಂದಿರುಗಿಸಬಲ್ಲರು? ಭಾರತದ ಬಹುತೇಕ ದುಡಿಯುವ ಜನ ನಿರುದ್ಯೋಗಿಗಳು ಅಥವಾ ಅರೆ ಉದ್ಯೋಗಿಗಳು ಅಥವಾ ಗುತ್ತಿಗೆ ಕಾರ್ಮಿಕರು. ಇವರೆಲ್ಲಾ ಅಸಂಘಟಿತ ಕ್ಷೇತ್ರದಲ್ಲಿದ್ದು ದೇಶದ ದುಡಿಯುವ ವರ್ಗದ ಶೇ 93ರಷ್ಟಿದ್ದಾರೆ, ಅತ್ಯಂತ ಕಡಿಮೆ ಸಂಬಳಕ್ಕೆ ದುಡಿಯುತ್ತಿದ್ದಾರೆ. ಮತ್ತೊಂದೆಡೆ ರೈತರು, ತಾವು ಬೆಳೆದ ಬೆಳೆಗೆ ಕನಿಷ್ಠ ಬೆಲೆ ದೊರೆಯದೆ, ಗಿರವಿದಾರರ ಕಪಿಮುಷ್ಟಿಯಲ್ಲಿ ಸಿಲುಕಿಕೊಂಡು ಸಂಕಷ್ಟದಲ್ಲಿರುವವರು. ಇವರೆಲ್ಲಾ ಈ ಬ್ಯಾಂಕ್‌ಗಳಿಂದ ಸುಲಭವಾಗಿ ಸಾಲ ಪಡೆಯುವರೇ?

ಎರಡನೆಯದಾಗಿ ಹಿರಿಯ ಹಾಗೂ ನಿವೃತ್ತ ನಾಗರಿಕರು, ತಮ್ಮ ಜೀವನೋಪಾಯಕ್ಕಾಗಿ ಬ್ಯಾಂಕ್‌ಗಳಲ್ಲಿ ಇಟ್ಟಿದ್ದ ಹಣಕ್ಕೆ ಇನ್ನು ಮುಂದೆ ಕಡಿಮೆ ಬಡ್ಡಿ ಪಡೆಯುತ್ತಾರೆ. ಇದಕ್ಕೆ ಪರ್ಯಾಯವೆಂಬಂತೆ ಅವರಿಗೆ ಷೇರು ಮಾರುಕಟ್ಟೆ ಆಧಾರಿತ ಹೂಡಿಕೆಗಳಲ್ಲಿ ಠೇವಣಿ ಇಡಲು ಸಲಹೆ ನೀಡುತ್ತಾರೆ. ಅದರಿಂದಾಗಬಹುದಾದ ನಷ್ಟ, ದುರಂತಗಳಿಗೆ ಅವರು ಉತ್ತರದಾಯಿಯಾಗಿರುವುದಿಲ್ಲ.

ಮೂರನೆಯದಾಗಿ ಈ ಬಡ್ಡಿ ದರ ಇಳಿಕೆಯನ್ನು ಕೇಳುತ್ತಿರುವವರು ಸಾಮಾನ್ಯ ಜನರಲ್ಲ, ಬದಲಿಗೆ ಬಂಡವಾಳಿಗರು. ಅವರ ಉತ್ಪಾದನಾ ಹೂಡಿಕೆ ಬೀಳುತ್ತಿರುವುದಕ್ಕೆ ಕಾರಣ ಅವರಲ್ಲಿ ಹಣದ ಕೊರತೆ ಇದೆ ಎಂದಲ್ಲ. ಬದಲಿಗೆ ಅವರ ವಸ್ತುಗಳಿಗೆ ಮಾರುಕಟ್ಟೆ ಇಲ್ಲ; ಅಂದರೆ ಜನರ ಹತ್ತಿರ ವಸ್ತುಗಳನ್ನು ಕೊಳ್ಳಲು ಹಣವಿಲ್ಲ ಎಂದರ್ಥ. ಮಾಧ್ಯಮಗಳ ವರದಿಯಂತೆ, ಬಡ್ಡಿದರ ಕಡಿಮೆಯಾದ ಮೇಲೂ ಮನೆ ಅಥವಾ ಕಾರು ಕೊಳ್ಳಲು ಬೇಡಿಕೆಯಲ್ಲಿ ಹೆಚ್ಚಳವಾಗಿಲ್ಲ. ಈ ಬಗ್ಗೆ ಬಡ್ಡಿ ದರವನ್ನು ಕಡಿಮೆ ಮಾಡುವುದನ್ನು ಬೆಂಬಲಿಸಿವವರು, ದಿನ ಕಳೆದಂತೆ ಜನರಿಗೆ ಭರವಸೆ ಮೂಡುತ್ತದೆ, ಕಾಯಿರಿ ಎಂದು ಸಮಜಾಯಿಸಿ ನೀಡುತ್ತಾರೆ.

### ಹಣದುಬ್ಬರ ನಿಜವಾಗಲೂ ಕುಸಿದಿದೆಯೇ?

ಸರ್ಕಾರವು ಚಿಲ್ಲರೆ ಹಣದುಬ್ಬರ ಇಳಿಮುಖವಾಗಿದೆ ಎಂದು ಕೊಚ್ಚಿಕೊಳ್ಳುತ್ತಿರುವಾಗಲೇ, ಜನರು ತಮ್ಮ ದಿನನಿತ್ಯದ ಜೀವನದಲ್ಲಿ ಎಲ್ಲಾ ಅವಶ್ಯಕ ವಸ್ತುಗಳ ಬೆಲೆ ಏರಿಕೆ ಆಗುತ್ತಿರುವುದನ್ನು ಅನುಭವಿಸುತ್ತಿದ್ದಾರೆ. ಅತ್ಯಾವಶ್ಯಕ ವಸ್ತುಗಳನ್ನು ಬಿಟ್ಟು ಇತರ ಗ್ರಾಹಕ ವಸ್ತುಗಳೆಡೆ ಅವರ ಚಿತ್ತ ಹರಿಯುತ್ತಿಲ್ಲ. ಸಣ್ಣ ಪ್ರಮಾಣದಲ್ಲಿ ಕೊಳ್ಳುವ ತಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ ಅವರು ಕೊಳ್ಳಲು ಬಯಸುತ್ತಿದ್ದಾರೆ. ಇಂದು ಆಹಾರ ಪದಾರ್ಥಗಳು ಮಾತ್ರವಲ್ಲದೆ, ಶಿಕ್ಷಣ, ಆರೋಗ್ಯ, ಸಾರಿಗೆ, ಎಲ್‌ಪಿಜಿ ಮುಂತಾದವುಗಳ ದರ ಏರುತ್ತಿದ್ದರೂ, ಹಣದುಬ್ಬರ ಇಳಿಯುತ್ತಿದೆ ಎಂದರೆ ಹೇಗೆ ನಂಬುವುದು? ಇದು ಅಂಕಿ ಅಂಶಗಳ ಕೈಚಳಕವಲ್ಲದೆ ಮತ್ತೇನು?

### ಹಣದುಬ್ಬರ ಇಳಿಯುತ್ತಿದೆ ಎಂದು ಕೊಚ್ಚಿಕೊಳ್ಳಲು ಒತ್ತಡವೇನು?

ಈಗಾಗಲೇ ಹೇಳಿರುವಂತೆ ಕೈಗಾರಿಕಾಪತಿಗಳು ಬ್ಯಾಂಕಿನಿಂದ ಪಡೆದ ಸಾಲವನ್ನು ಉತ್ಪಾದನೆಯಲ್ಲಿ ತೊಡಗಿಸಲು ತಯಾರಿಲ್ಲ. ಆದ್ದರಿಂದ ಬ್ಯಾಂಕಿನಿಂದ ಪಡೆದ ಬಹುದೊಡ್ಡ ಮೊತ್ತವನ್ನು ಅವರು ಶಸ್ತ್ರಾಸ್ತ್ರಗಳ ಉತ್ಪಾದನೆಯಲ್ಲಿ ಅಥವಾ ಷೇರು ಮಾರುಕಟ್ಟೆಯಲ್ಲಿ ಅಥವಾ ಕ್ರೀಡೆ ಮತ್ತು ಮನೋರಂಜನಾ ಉದ್ಯಮದಲ್ಲಿ ತೊಡಗಿಸಲು ಬಯಸುತ್ತಾರೆ. ಬಹುದೊಡ್ಡ ಏಕಸ್ವಾಮ್ಯ ಮನೆತನಗಳು ಇಂದು ರಕ್ಷಣಾ ವಸ್ತುಗಳ ಉತ್ಪಾದನೆಯಲ್ಲಿ, ಯುದ್ಧವಿಮಾನ, ನೌಕಾ ಹಡಗು, ಅಥವಾ ಭೂ ಯುದ್ಧ ಶಸ್ತ್ರಾಸ್ತ್ರಗಳ ತಯಾರಿಕೆಯಲ್ಲಿ ತೊಡಗಿದ್ದಾರೆ. ಟಾಟಾ ಅಡ್ವಾನ್ಸ್ಡ ಸಿಸ್ಟಮ್ಸ್, ಮಹೀಂದ್ರ ಡಿಫೆನ್ಸ್ ಸಿಸ್ಟಮ್, ಭಾರತ್ ಪೋರ್ಟ್ ಹಾಗೂ ರಿಲಯನ್ಸ್ ನೇವಲ್ ಮತ್ತು ಇಂಜಿನಿಯರಿಂಗ್ ಮುಂತಾದ ಸಂಸ್ಥೆಗಳು ಇದರಲ್ಲಿ ತೊಡಗಿವೆ. ಮತ್ತೊಂದೆಡೆ ಭಾರತದ ಬಂಡವಾಳ ಮಾರುಕಟ್ಟೆ ಬಹಳಷ್ಟು ಬೆಳೆದಿದೆ. ವಿದೇಶಿ ಸಾಂಸ್ಥಿಕ ಹೂಡಿಕೆಗಾರರು ಭಾರತದ ಶೇರು ಮಾರುಕಟ್ಟೆಯ 'ಊಹಾತ್ಮಕ' (Speculative) ವ್ಯವಹಾರದಲ್ಲಿ ಹೆಚ್ಚು ಹಣ ಹೂಡುತ್ತಿರುವುದರಿಂದ, 'ಊಹಾತ್ಮಕ ಮಾರುಕಟ್ಟೆ'ಯ (Speculative Market) ವ್ಯವಹಾರಕ್ಕೆ ಅವಕಾಶ ಹೆಚ್ಚಾಗಿದೆ. ಇಕ್ವಿಟಿ ಶೇರುಗಳಲ್ಲಿ ಹೂಡಿಕೆ ಮಾಡಿದ ಬಾಂಡುಗಳ ಮಾರಾಟದ ಮೂಲಕ ಲಾಭ ಮಾಡುವ ಅವಕಾಶ ಹೆಚ್ಚಾಗಿದೆ.

ಬ್ಯಾಂಕಿನ ಬಡ್ಡಿ ದರದ ಕುಸಿತ ಇಂತಹ ಬಾಂಡ್ ವ್ಯವಹಾರಗಳ ಮೇಲೆ ಪ್ರಭಾವ ಬೀರುತ್ತದೆ. ಬಾಂಡ್ ವ್ಯವಹಾರಗಳ ಮೂಲಕ ಹೆಚ್ಚು ಲಾಭ ಮಾಡಬಹುದೆಂದು ಕಾರ್ಪೊರೇಟ್‌ಗಳು, ಶ್ರೀಮಂತರು ಯೋಚಿಸುತ್ತಾರೆ. ಅವರು ಬ್ಯಾಂಕ್‌ಗಳಿಂದ ಕಡಿಮೆ ಬಡ್ಡಿ ದರದಲ್ಲಿ ಹಣ ಪಡೆದು ಊಹಾತ್ಮಕ ಬಂಡವಾಳ ಮಾರುಕಟ್ಟೆಯಲ್ಲಿ ಹೆಚ್ಚು ಹಣ ಮಾಡಲು ಹೂಡುತ್ತಾರೆ. ಇವರಿಗೆ ಈ ಹಣ ಮರುಪಾವತಿಯ ಬಗ್ಗೆ ಕಾಳಜಿ ಇಲ್ಲ, ಸರ್ಕಾರ ಸಂತೋಷದಿಂದ ಇವುಗಳನ್ನು ಮಾಫಿ ಮಾಡುತ್ತದೆ. ಕಳೆದ ಹತ್ತು ವರ್ಷಗಳಲ್ಲಿ ಬಿಜೆಪಿ ಸರ್ಕಾರವು ಸುಮಾರು 16.35 ಲಕ್ಷ ಕೋಟಿ ಅಷ್ಟು ಹಣವನ್ನು ಮಾಫಿ ಮಾಡಿದೆ.

### ಸಂಕಷ್ಟಗಳನ್ನು ಎದುರಿಸುವುದು ಸಾಮಾನ್ಯ ಜನತೆ!

ಒಂದೆಡೆ ಜನರ ಹಣಕ್ಕೆ ಬ್ಯಾಂಕಿನಲ್ಲಿ ಕಡಿಮೆ ಬಡ್ಡಿ ದೊರೆಯುತ್ತದೆ, ಮತ್ತೊಂದೆಡೆ ಅದೇ ಬ್ಯಾಂಕುಗಳಿಂದ ಕಾರ್ಪೊರೇಟ್ ಮನೆತನಗಳು ಕಡಿಮೆ ಬಡ್ಡಿ ದರದಲ್ಲಿ ಸಾಲ ಪಡೆಯುತ್ತಾ, ವಿವಿಧ ಉತ್ಪಾದನಾ ಕ್ಷೇತ್ರದಲ್ಲಿ ಅದನ್ನು ಹೂಡದೇ, 'ಊಹಾತ್ಮಕ ಮಾರುಕಟ್ಟೆ'ಯಲ್ಲಿ ಗರಿಷ್ಠ ಲಾಭ ಮಾಡಿಕೊಳ್ಳುವರು. ನೈಜವಾಗಿ ದೇಶದ ಆರ್ಥಿಕತೆ ನೆಲಕಚ್ಚಿ, ಹಣದುಬ್ಬರ ಹೆಚ್ಚಾಗಿ, ಎಲ್ಲಾ ಅವಶ್ಯಕ ವಸ್ತುಗಳ ಬೆಲೆ ಏರಿಕೆ ಆಗುತ್ತಿದೆ. ಇದನ್ನು ಮರೆಮಾಚಲು ಬಡ್ಡಿದರ ಇಳಿತದ ಕಟ್ಟುಕಥೆಗಳನ್ನು ಹೆಣೆದು ಜನರ ಕಣ್ಣಿಗೆ ಮಣ್ಣೆರೆಚಲಾಗುತ್ತಿದೆ. ಈ ಸತ್ಯವನ್ನು ನಾವು ಮನಗಾಣಬೇಕಿದೆ. ■

---

# ಟ್ರಂಪ್–ಎಪ್‌ಸ್ಟೀನ್ ಸಂಬಂಧ ಮತ್ತು ಮರೆಮಾಚಿದ ಸತ್ಯಗಳು

ಎಪ್‌ಸ್ಟಿನ್ ಹಗರಣದಲ್ಲಿ ಅಮೇರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೆಸರು ಮತ್ತೊಮ್ಮೆ ಹೊರಗೆ ಬಂದಿದೆ. ವ್ಯವಹಾರಸ್ಥ ಜೆಫ್ರಿ ಎಪ್‌ಸ್ಟಿನ್ ಮಾಡಿದ ಎಲ್ಲ ಅಪರಾಧಗಳ ಭೂತ ಟ್ರಂಪ್‌ಅನ್ನು ಈಗ ಮತ್ತೆ ಕಾಡುತ್ತಿದೆ. ಹಲವಾರು ರೀತಿಯ ಲೈಂಗಿಕ ಅಪರಾಧಗಳಲ್ಲಿ ಭಾಗಿಯಾಗಿದ್ದಾತ ಜೆಫ್ರಿ ಎಪ್‌ಸ್ಟಿನ್. ಬಹಳ ವರ್ಷಗಳ ಕಾಲ ಎಪ್‌ಸ್ಟಿನ್ ಜೊತೆ ಟ್ರಂಪ್ ಸಂಬಂಧವು ಕಂಡೂ ಕಾಣದಂತ್ತಿದ್ದು, ಈಗ 'ಎಪ್‌ಸ್ಟಿನ್ ಕಡತ'ಗಳು ಭಾರಿ ಸದ್ದು ಮಾಡತೊಡಗಿ ಪತ್ರಿಕೆಗಳ ತಲೆಬರಹವಾಗಿವೆ. ಭಾರಿ ಲೈಂಗಿಕ ದುರಾಚಾರಗಳು, ಹಣಕಾಸಿನ ಅವ್ಯವಹಾರಗಳು, ಬೆದರಿಕೆಗಳು, ಇನ್ನೂ ಹಲವಾರು ರೀತಿಯ ಅಪರಾಧಗಳನ್ನು ಎಸಗಿದ್ದ ಅಪರಾಧಿ ಎಪ್‌ಸ್ಟಿನ್ ಜೊತೆಯಲ್ಲಿ ಟ್ರಂಪ್ ಹೊಂದಿದ್ದ ಅತಿ ನಿಕಟ ಸಂಬಂಧ ಕೂಡ ಹೊಸದಾಗಿ ಮುನ್ನೆಲೆಗೆ ಬಂದಿದೆ.

### ಹಳೆಯ ಗೆಳೆತನದ ಛಾಯೆ

ಟ್ರಂಪ್ ಮತ್ತು ಎಪ್‌ಸ್ಟಿನ್ ನಿಕಟ ಒಡನಾಟ 1980ರ ದಶಕದ ಅಂತ್ಯದಲ್ಲಿ ಆರಂಭವಾಗಿತ್ತು. ಎರಡು ದಶಕಗಳ ಕಾಲ ರಿಯಲ್ ಎಸ್ಟೇಟ್ ವ್ಯವಹಾರದಲ್ಲಿ, ಸಾಮಾಜಿಕ ಪಾರ್ಟಿಗಳ ವರ್ತುಲದಲ್ಲಿ, ತಮ್ಮ ಖಾಸಗಿ ವಿಮಾನಗಳಲ್ಲಿ ಅವರಿಬ್ಬರು ಜೊತೆಜೊತೆಯಾಗಿ ಸುತ್ತುತ್ತಿದ್ದರು. 2002ರಲ್ಲಿ 'ಸುಂದರ ಮಹಿಳೆಯರನ್ನು ಇಷ್ಟಪಡುವ ಭಯಂಕರ ವ್ಯಕ್ತಿ' ಎನ್ನುವಂತಹ ಎಪ್‌ಸ್ಟಿನ್ ಬಗ್ಗೆ ಟ್ರಂಪ್‌ರ 'ಮೆಚ್ಚುಗೆಯ ಮಾತು'ಗಳ ಬೈಟ್‌ಗಳನ್ನು ಯಾರಿಗೂ ಕಾಣದಂತೆ ಕಾಯ್ದಿಡಲಾಗಿತ್ತು. ಇವರು ತಮ್ಮ ಖಾಸಗಿ ಬದುಕಿನಲ್ಲಿ ನೈತಿಕವಾಗಿ ಎಂತಹ ಹೀನಮಟ್ಟವನ್ನು ತಲುಪಿದ್ದರು ಎಂದು ಇದರಿಂದ ಅರ್ಥ ಮಾಡಿಕೊಳ್ಳಬಹುದು. ನಂತರ 2004ರಲ್ಲಿ ರಿಯಲ್ ಎಸ್ಟೇಟ್ ವ್ಯವಹಾರವನ್ನು ಸುತ್ತುವರಿದಂತೆ ಮನಸ್ತಾಪವಾಗಿ ಎಪ್‌ಸ್ಟಿನ್ ಜೊತೆ ಸಂಬಂಧ ಕಡಿದು ಹೋಯಿತೆಂದು ಟ್ರಂಪ್ ಈಗ ಹೇಳಿಕೊಳ್ಳುತ್ತಿದ್ದಾರೆ. ಆದರೆ 'ವಾಲ್‌ಸ್ಟ್ರೀಟ್ ಜರ್ನಲ್' ಇತ್ತೀಚೆಗೆ ಮತ್ತೆ ಬಹಿರಂಗಪಡಿಸಿದಂತೆ, ಅವರಿಬ್ಬರ ಸ್ನೇಹ ಮುಂದುವರೆದಿತ್ತು ಮತ್ತು ಎಪ್‌ಸ್ಟಿನ್ ಜನ್ಮದಿನದ ಸಂದರ್ಭದಲ್ಲಿ ಟ್ರಂಪ್ ಅಸಭ್ಯ ಸಂದೇಶಗಳನ್ನು ಕಳುಹಿಸಿದ್ದು ಕಂಡು ಬಂದಿದೆ ಎಂದು ಹೇಳಲಾಗುತ್ತಿದೆ. ಕಾಕತಾಳೀಯವಾಗಿಯೋ ಅಥವಾ ಎಚ್ಚರ ತಪ್ಪಿಯೋ ಹೊರಬಿದ್ದಿರುವ ಈ ವಿವರಗಳಿಂದ, ಎಪ್‌ಸ್ಟಿನ್ ವಲಯದಲ್ಲಿ ಟ್ರಂಪ್ ಕೇವಲ 'ದಾರಿಹೋಕ ವೀಕ್ಷಕ'ನಂತೆ ಇದ್ದರು ಎಂದು ಬಹಳ ಜಾಗರೂಕತೆಯಿಂದ ಹೆಣೆದಿದ್ದ ಕಥೆಗಳ ಸುತ್ತ ಅನುಮಾನದ ಹುತ್ತ ಬೆಳೆದಿದೆ.

2006ರಲ್ಲಿ, ವೇಶ್ಯಾವಾಟಿಕೆ ದಂಧೆಗೆ ಸಂಬಂಧಪಟ್ಟಂತೆ ಫ್ಲೋರಿಡಾದ ಪ್ರಕರಣವೊಂದರಲ್ಲಿ ತಾನು ಅಪರಾಧವೆಸಗಿದ್ದಾಗಿ ಎಪ್‌ಸ್ಟೀನ್ ಒಪ್ಪಿಕೊಂಡಿದ್ದ. ನಂತರ 2019ರಲ್ಲಿ ವೇಶ್ಯಾವಾಟಿಕೆಗಾಗಿ ಹೆಣ್ಣುಗಳ ಕಳ್ಳ ಸಾಗಾಣಿಕೆಯಲ್ಲಿ, ಅದರಲ್ಲೂ ಅಪ್ರಾಪ್ತರನ್ನು ಬಳಸಿಕೊಂಡಿದ್ದ ಆರೋಪದ ಮೇಲೆ ಆತನನ್ನು ಬಂಧಿಸಲಾಗಿತ್ತು ಮತ್ತು ವಿಚಾರಣೆಗೂ ಮುನ್ನವೇ ಆತ ಜೈಲಿನಲ್ಲಿ ಆತ್ಮಹತ್ಯೆ ಮಾಡಿಕೊಂಡ ಸುದ್ದಿ ಬಿತ್ತರವಾಗಿತ್ತು.

### ಸತ್ಯವನ್ನು ಹೊರಗೆಡಹುತ್ತೇವೆ ಎನ್ನುತ್ತಲೇ ಹಿಂಜರಿದರು

ಈ ನಾಚಿಕೆಗೇಡಿತನದ ಅಧ್ಯಾಯಗಳು ರಾಜಕೀಯ ಹಗರಣವಾಗಿ ಕಂಡಿರುವುದು, ಅವು ಹಾಗೆ ಈ ಹಿಂದೆ ನಡೆದಿದ್ದವು ಎನ್ನುವುದಕ್ಕಷ್ಟೇ ಅಲ್ಲ. ಈಗ ವರ್ತಮಾನದಲ್ಲಿ, ಅವನ್ನು ಬಹಿರಂಗಪಡಿಸುವುದರ ಹಿಂದಿರುವ ಲೆಕ್ಕಾಚಾರದ ರಾಜಕೀಯದ ಮೇಲಾಟಗಳಿಂದಾಗಿ. ಟ್ರಂಪ್ ಕೂಟವು, ಮೊದಲಿಗೆ ಸತ್ಯವನ್ನು ಹೊರಗೆಳೆಯುತ್ತೇವೆ ಎಂದು ಎದೆತಟ್ಟಿಕೊಂಡು ಅಬ್ಬರಿಸಿತು. ಎಪ್‌ಸ್ಟಿನ್‌ನ 'ಗ್ರಾಹಕರ ಪಟ್ಟಿ'ಯು ತಮ್ಮ ಮೇಜಿನ ಮೇಲೆ ಇದೆ ಎಂದು ಅಟಾರ್ನಿ ಜನರಲ್ ಪಾಮ್ ಬೊಂದಿ ಹೇಳಿದ್ದರು. ಅಪ್ರಾಪ್ತರನ್ನು ಬಳಸಿಕೊಂಡಿರುವ 'ಸಾವಿರಾರು ವಿಡಿಯೋ'ಗಳಿವೆ ಎನ್ನುವ ಸುದ್ದಿಗಳೂ ಯಥೇಚ್ಛವಾಗಿ ಹರಿದಾಡಿದ್ದವು.

### ಆದರೆ, ನಂತರ... ಎಲ್ಲವೂ ಗಪ್‌ಚುಪ್...

ನ್ಯಾಯಾಂಗ ಇಲಾಖೆಯು ದಿಢೀರನೆ ಯೂಟರ್ನ್ ಹೊಡೆಯಿತು. 'ಗ್ರಾಹಕರ ಪಟ್ಟಿ'ಯಾಗಲಿ, 'ಸ್ಫೋಟಕ ಸಾಕ್ಷ್ಯ'ಗಳಾಗಲಿ, ಹೊಗೆಯಾಡುತ್ತಿರುವ ಬಂದೂಕು ಆಗಲಿ, ಎಲ್ಲದರ ಬಗ್ಗೆಯೂ ಮೌನವೇ ಉತ್ತರವಾಯಿತು. ಕೆಲವು ಕಡತಗಳೇನೋ ಹೊರಗೆ ಬಂದವು. ಆದರೆ, ಅವೆಲ್ಲವೂ ಕೇವಲ ತಿದ್ದಿದ್ದ, ಯಾರಿಗೂ ಅರ್ಥವಾಗದ ಕಾನೂನಿನ ಪರಿಭಾಷೆ ತುಂಬಿದ್ದ ದಾಖಲೆಗಳು ಅಷ್ಟೇ! ದೊಡ್ಡ ನ್ಯಾಯ ಮಂಡಳಿಯೊಂದು ಸರ್ಕಾರಿ ರಹಸ್ಯಕ್ಕೆ ಸಂಬಂಧಪಟ್ಟ ಕಾನೂನುಗಳನ್ನು ಉದ್ಧರಿಸಿ, ಜನರ ನಿರೀಕ್ಷೆಗಳನ್ನು ಹುಸಿಗೊಳಿಸಿ, ನ್ಯಾಯದ ಬಾಗಿಲು ಮುಚ್ಚಿತು; ಫ್ಲೋರಿಡಾದ ನ್ಯಾಯಾಧೀಶರೊಬ್ಬರು ಕಾನೂನು ಪ್ರಕ್ರಿಯೆ ಮತ್ತು ಮೃತನ ಹಕ್ಕು ಮುಂತಾದ ಕಟ್ಟಳೆಗಳನ್ನು ಮುಂದಿಟ್ಟು ಸಾಕ್ಷ್ಯಾಧಾರಗಳನ್ನು ತೆರೆದಿಡಲು ನಿರಾಕರಿಸಿದರು. ಇದರೊಂದಿಗೆ ಪ್ರಕರಣವು ಅಧಿಕಾರಶಾಹಿಯ ತೆಕ್ಕೆಗೆ ಜಾರಿ ಬಿತ್ತು. ನಿಜವಾಗಿ ಹೇಳುವುದಾದರೆ, ಟ್ರಂಪ್ ಈ ಹಗರಣದಲ್ಲಿ ಸರಿಯಾಗಿಯೇ ಸಿಲುಕಿಕೊಂಡಿದ್ದರು. ಎಪ್‌ಸ್ಟಿನ್ ವಿದ್ಯಮಾನವು ಒಂದು 'ಹಗರಣವಾಗಿದೆ', ಅದು 'ಎಡವಾದಿಗಳ ದಿಕ್ಕುತಪ್ಪಿಸುವ ಚಾಲಾಕಿತನ' ಎಂದು ಅದನ್ನು ಜರೆದು ಟ್ರಂಪ್ ಪ್ರಚಾರವನ್ನು ನಡೆಸಿದರು. ಆದರೆ ಅವರದ್ದೇ ಎಷ್ಟೋ ಜನ ಬೆಂಬಲಿಗರಿಗೂ ಕೂಡ ಇದೊಂದು ದ್ರೋಹ ಎಂದೆನಿಸಿದೆ.

### ಪಾರದರ್ಶಕತೆಯೇ ಕಳಂಕ ಎನ್ನುವಂತಾದಾಗ...

ವಿಷಯದ ಅಂತರಾಳದಲ್ಲಿ ನ್ಯಾಯ ಮತ್ತು ಮಾಹಿತಿಯ ಬಗ್ಗೆಯ ಆಳವಾದ ಪ್ರಶ್ನೆಗಳು ಹಾಗೆಯೇ ಉಳಿದು ಬಿಡುತ್ತವೆ. ಅನುಮಾನ ಹಾಗೂ ಅಪನಂಬಿಕೆ ಹಬ್ಬಿರುವ ಇಂದಿನ ಕಾಲಘಟ್ಟದಲ್ಲಿ ಸತ್ಯವು 'ಸರ್ಕಾರಿ ರಹಸ್ಯ' ಮತ್ತು ಕಾನೂನುಗಳ ಗೋಡೆಗಳನ್ನು ತಳ್ಳಿಕೊಂಡು ಹೊರಬರಲು ಸಾಧ್ಯವೇ? ಎಪ್‌ಸ್ಟೀನ್ ಕಡತಗಳು ಸ್ಫೋಟಕವಾಗುವ

11ನೇ ಪುಟಕ್ಕೆ....

## ಜನರ ಧ್ವನಿಯನ್ನು ಹತ್ತಿಕ್ಕುವ

# ಮಹಾರಾಷ್ಟ್ರ ವಿಶೇಷ ಸಾರ್ವಜನಿಕ ಸುರಕ್ಷತಾ ಮಸೂದೆ –2024

2025ರ ಜುಲೈ 10ರಂದು ಬಿಜೆಪಿ ನೇತೃತ್ವದ ಮಹಾರಾಷ್ಟ್ರ ಸರ್ಕಾರವು ಮಹಾರಾಷ್ಟ್ರ ವಿಶೇಷ ಸಾರ್ವಜನಿಕ ಸುರಕ್ಷತಾ ಮಸೂದೆ 2024 ಅನ್ನು ಅಂಗೀಕರಿಸಿದೆ. ಇದು ಕೇಂದ್ರ ಸರ್ಕಾರದ ಯುಎಪಿಎಗಿಂತಲೂ ಕ್ರೂರ ಅಂಶಗಳನ್ನು ಹೊಂದಿದ್ದು, ಯಾವುದೇ ವಿರೋಧದ ಧ್ವನಿಯನ್ನು ಹತ್ತಿಕ್ಕುವುದೇ ಇದರ ಉದ್ದೇಶವಾಗಿದೆ. ಇದರೊಂದಿಗೆ, ಛತ್ತೀಸ್‌ಗಢ, ತೆಲಂಗಾಣ, ಆಂಧ್ರಪ್ರದೇಶ ಮತ್ತು ಒರಿಸ್ಸಾ ನಂತರ ಈ ರೀತಿಯ ಸಾರ್ವಜನಿಕ ಸುರಕ್ಷತಾ ಕಾನೂನನ್ನು ಜಾರಿಗೊಳಿಸಿದ ಐದನೇ ರಾಜ್ಯ ಮಹಾರಾಷ್ಟ್ರ ಆಗಿದೆ.

ಮಸೂದೆಯ ಕೊನೆಯಲ್ಲಿ ನೀಡಿರುವ ಹೇಳಿಕೆಯೇ ಸ್ಪಷ್ಟಪಡಿಸುವಂತೆ ಈ ಕಾನೂನು, ಸಾಮಾನ್ಯ ಶೋಷಿತ ಜನರು – ಕಾರ್ಮಿಕರು, ರೈತರು, ವಿದ್ಯಾರ್ಥಿಗಳು, ಯುವಕರು, ಬುದ್ಧಿಜೀವಿಗಳು – ವಿಶೇಷವಾಗಿ ಎಡಪಂಥೀಯ ಚಿಂತನೆ ಹೊಂದಿರುವವರಿಗೆ ಅನ್ವಯವಾಗುತ್ತದೆ. ಇದರಲ್ಲಿ "ಸಾರ್ವಜನಿಕ ಸುರಕ್ಷತೆ" ಎಂಬ ಅಂಶವೇ ಇಲ್ಲ.

**ಈ ಮಸೂದೆಯು "ಅನಧಿಕೃತ" ಎಂದು ವ್ಯಾಖ್ಯಾನಿಸಿರುವುದೆಂದರೆ:**

1. **ಸಾರ್ವಜನಿಕ ಶಾಂತಿ, ಸುವ್ಯವಸ್ಥೆ, ನೆಮ್ಮದಿಗೆ ಅಪಾಯ ಅಥವಾ ತಡೆ ಉಂಟುಮಾಡುವುದು,**
2. **ಸಾರ್ವಜನಿಕ ಸುವ್ಯವಸ್ಥೆ ಅಥವಾ ಕಾನೂನು ನಿರ್ವಹಣೆಗೆ ಅಡ್ಡಿಯಾಗುವುದು ಅಥವಾ ಅಡ್ಡಿಪಡಿಸುವ ಪ್ರಯತ್ನ ಮಾಡುವುದು,**
3. **ಸರ್ಕಾರಿ ಅಧಿಕಾರಿಗಳಿಗೆ ಭಯ ಹುಟ್ಟಿಸುವುದು,**
4. **ಹಿಂಸೆ, ಧ್ವಂಸಾತ್ಮಕ ಚಟುವಟಿಕೆಗಳ ಮೂಲಕ ಜನರಲ್ಲಿ ಭಯ ಉಂಟುಮಾಡುವುದು,**
5. **ಶಸ್ತ್ರಾಸ್ತ್ರ, ಸ್ಫೋಟಕಗಳ ಬಳಕೆ ಅಥವಾ ಅದನ್ನು ಪ್ರೋತ್ಸಾಹಿಸುವುದು,**
6. **ರೈಲು, ರಸ್ತೆ, ವಿಮಾನ ಅಥವಾ ನದಿ ಮಾರ್ಗದ ಸಂಚಾರ ವ್ಯತ್ಯಯಗೊಳಿಸುವುದು,**
7. **ಕಾನೂನು ಮತ್ತು ಅದರ ಸಂಸ್ಥೆಗಳಿಗೆ ಅವಿಧೇಯತೆಯನ್ನು ಬೋಧಿಸುವುದು,**
8. **ಇಂತಹ ಚಟುವಟಿಕೆಗಳಿಗೆ ಹಣ ಅಥವಾ ಸಾಮಗ್ರಿಗಳನ್ನು ಸಂಗ್ರಹಿಸುವುದು.**

ಈ ವ್ಯಾಖ್ಯಾನಗಳು ಅತ್ಯಂತ ಅಸ್ಪಷ್ಟವಾಗಿವೆ. ಮತ್ತು ಭಾರತದ ಸಂವಿಧಾನವು ನೀಡಿರುವ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಹಾನಿಕಾರಕವಾಗಿವೆ.

"ಅವಿಧೇಯತೆ", "ಅಡ್ಡಿಪಡಿಸುವುದು", "ತಡೆಯೊಡ್ಡಲು ಪ್ರಚೋದನೆ", ಇಂತಹ ಪದಗಳ ಕುರಿತು ಯಾವುದೇ ಸ್ಪಷ್ಟತೆಯನ್ನು ಈ ಮಸೂದೆಯಲ್ಲಿ ವ್ಯಾಖ್ಯಾನಿಸಿಲ್ಲ, ಆದ್ದರಿಂದ ಕಾನೂನು ಜಾರಿಗೆ ತರುವ ಅಧಿಕಾರಿಗಳ ಇಚ್ಛೆಯಂತೆ ಈ ಪದಗಳಿಗೆ ಅರ್ಥ ನೀಡಬಹುದು. ಇದು ಮೂಲಭೂತ ಹಕ್ಕುಗಳ ಮೇಲಿನ ಏಕಪಕ್ಷೀಯ ನಿರ್ಬಂಧವಾಗಿದೆ.

2015ರಲ್ಲಿ ಸುಪ್ರೀಂ ಕೋರ್ಟ್, ಐಟಿ ಕಾಯಿದೆ 2000ರ 66ಎ ಕಲಂ ಅನ್ನು ರದ್ದುಮಾಡಿತ್ತು. ಅಲ್ಲಿ ಕೂಡ "ಬೆದರಿಸುವ", "ತೀವ್ರ ಆಕ್ರಮಣಕಾರಿ" ಎಂಬ ಪದಗಳಿಗೆ ವ್ಯಾಖ್ಯಾನ ನೀಡದೆ, ಅಸ್ಪಷ್ಟವಾಗಿದ್ದುದರಿಂದ ಅದನ್ನು ದುರುಪಯೋಗ ಮಾಡಬಹುದು ಎಂದು ತೀರ್ಪಿನಲ್ಲಿ ಹೇಳಲಾಗಿತ್ತು.

1960ರಲ್ಲಿ ಕೂಡ, ಮಾತನಾಡುವ ಸ್ವಾತಂತ್ರ್ಯದ ಮೇಲೆ ನಿರ್ಬಂಧ ಹೇರಬೇಕಾದರೆ, 'ಅದು ಸಾರ್ವಜನಿಕ ಅಶಾಂತಿಯುಂಟು ಮಾಡುವುದಕ್ಕೆ ಸಂಬಂಧಿಸಿದಿರಬೇಕು', ದೂರದ ಅಥವಾ ಊಹಾತ್ಮಕ ಅಪಾಯ ಯಾವುದೇ ಆಧಾರವಾಗಲಾರದು ಎಂದು ಸುಪ್ರೀಂ ಕೋರ್ಟ್ ಹೇಳಿತ್ತು. ಆದ್ದರಿಂದ ಈ ಮಸೂದೆಯಲ್ಲಿ ಬಳಸಿರುವ "ಅಡ್ಡಿಪಡಿಸಬಹುದಾದ" ಮುಂತಾದ ಪದಗಳು ಕಾನೂನುಬದ್ಧವಲ್ಲ.

**ಯುಎಪಿಎಯನ್ನು ಮೀರಿದ ಕ್ರೌರ್ಯ**

1967ರ ಯುಎಪಿಎ ಅಡಿಯಲ್ಲಿ "ಅನಧಿಕೃತ ಕ್ರಿಯೆ" ಎಂದರೆ –(i) ಪ್ರತ್ಯೇಕತೆಗೆ ಬೆಂಬಲ, (ii) ಭಾರತದ ಭೌಗೋಳಿಕ ಅಖಂಡತೆಗೆ ಧಕ್ಕೆ, (iii) ಭಾರತದ ವಿರುದ್ಧ ದ್ವೇಷ ಉಂಟುಮಾಡುವುದು. ಆದರೆ ಮಹಾರಾಷ್ಟ್ರದ ಈ ಮಸೂದೆಯಡಿ, ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ನಡೆದ ಮೋಸದ ವಿರುದ್ಧ ಪ್ರತಿಭಟನೆ ಮಾಡಿದರೂ ಅದನ್ನು "ಶಾಂತಿಯ ಭಂಗ" ಎಂದು ಹೇಳಬಹುದು. ಒಂದು ರಾಜಕೀಯ ಪಕ್ಷ ಬಂದ್ ಕರೆಕೊಟ್ಟರೆ ಸಂಚಾರ ವ್ಯತ್ಯಯ ಮಾಡಿದಂತೆ; ಅದನ್ನು "ಅನಧಿಕೃತ"ವೆಂದು ಘೋಷಿಸಬಹುದು. ಒಂದು ನಾಟಕ ಮಂಡಳಿ ಪೊಲೀಸರ ದೌರ್ಜನ್ಯವನ್ನು ವಿರೋಧಿಸಿದ ನಾಟಕವಾಡಿದರೂ ಅದನ್ನು "ಕಾನೂನು ವಿರೋಧಿ" ಎಂದು ಘೋಷಿಸಬಹುದು.

**ಆಳ್ವಿಕರು ಮರೆತ ಇತಿಹಾಸ**

1932ರ ಉತ್ತರ ಪ್ರದೇಶ ವಿಶೇಷ ಅಧಿಕಾರ ಕಾಯಿದೆ ಕೂಡ ಇದೇ ರೀತಿಯ "ಕಾನೂನು ಪಾಲಿಸಬೇಡಿ" ಎಂಬ ಮಾತುಗಳನ್ನು ನಿಷೇಧಿಸಿತ್ತು. ರಾಮ ಮನೋಹರ್ ಲೋಹಿಯಾ, ರೈತರಿಗೆ ನೀರಾವರಿ ತೆರಿಗೆ ಕೊಡಬೇಡಿ ಎಂದ ಕಾರಣ ಅದರಲ್ಲಿ ಸಿಲುಕಿದ್ದರು. ಆದರೆ, 'ಕೆಟ್ಟ ಕಾನೂನಿಗೆ ವಿರೋಧವಾಗಿ ಹೋರಾಡುವುದು ಪ್ರಜಾಪ್ರಭುತ್ವದಲ್ಲಿ ಅಪರಾಧವಲ್ಲ' ಎಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿತ್ತು.

**ಸಲಹಾ ಮಂಡಳಿ**

ಇದು ಹೈಕೋರ್ಟ್ ನ್ಯಾಯಾಧೀಶರಾಗಿರುವವರು, ಆಗಬಹುದಾದವರು ಅಥವಾ ಹಿಂದೆ ಆಗಿದ್ದವರಾದ ಮೂವರಿಂದ ಕೂಡಿರುತ್ತದೆ. ನ್ಯಾಯದಾನದ ಅನುಭವ ಇಲ್ಲದ ವಕೀಲರೂ ಇದರಲ್ಲಿರಬಹುದು. ಅವರನ್ನು ನೇಮಿಸುವ ಅಧಿಕಾರ ಸಂಪೂರ್ಣವಾಗಿ ಸರ್ಕಾರಕ್ಕೇ ಸೀಮಿತ. ಇದು ಕಾರ್ಯಾಂಗದ ಹಿಡಿತವನ್ನು ತೋರಿಸುತ್ತದೆ. ನ್ಯಾಯಾಂಗದ ಸ್ವಾತಂತ್ರ್ಯವನ್ನು ಹಾಳುಮಾಡುತ್ತದೆ. ಬದಲಾಗಿ, ಯುಎಪಿಎಯಲ್ಲಿ ಇದೇ ರೀತಿಯ ಮಂಡಳಿಯ ಮುಖ್ಯಸ್ಥರು ಹೈಕೋರ್ಟಿನ ನ್ಯಾಯಾಧೀಶರಾಗಿರುತ್ತಾರೆ. ಮತ್ತು ಅವರನ್ನು ಹೈಕೋರ್ಟಿನ ಮುಖ್ಯ ನ್ಯಾಯಮೂರ್ತಿಗಳು ನೇಮಿಸುತ್ತಾರೆ.

**ಸಂಪತ್ತು ಮತ್ತು ನಿಧಿಗಳ ವಶ**

ಅನಧಿಕೃತ ಸಂಸ್ಥೆಯ ಆಸ್ತಿಪಾಸ್ತಿ, ಹಣವನ್ನು ಸರ್ಕಾರ/ಪೊಲೀಸರು ವಶಪಡಿಸಿಕೊಳ್ಳಬಹುದು. ಹೈಕೋರ್ಟ್‌ನಲ್ಲಿ ಅಪೀಲು ಹೋಗುವ ಅವಕಾಶ ಬಹಳ ಕಡಿಮೆ. ಯುಎಪಿಎಯಲ್ಲಿ "ಭಯೋತ್ಪಾದನಾ ಚಟುವಟಿಕೆ"ಗಳಿಗೆ ಸಂಬಂಧಿಸಿದ ಆಸ್ತಿಯನ್ನು ವಶಪಡಿಸಿಕೊಳ್ಳಬಹುದು ಮತ್ತು ಜಿಲ್ಲಾ ನ್ಯಾಯಾಧೀಶರ ಮುಂದೆ ಅಪೀಲು ಹೋಗುವ ಅವಕಾಶ ಇರುತ್ತದೆ. ಮಹಾರಾಷ್ಟ್ರ ಬಿಲ್ ಅಡಿಯಲ್ಲಿ ಸಬ್‌–ಇನ್‌ಸ್ಪೆಕ್ಟರ್ ಮಟ್ಟದವರು ತನಿಖೆ ನಡೆಸಬಹುದು – ಇದು ಅಧಿಕಾರದ ಗಂಭೀರ ದುರುಪಯೋಗಕ್ಕೆ ಕಾರಣವಾಗಬಹುದು.

**ದಂಡನೆಗಳು**

1. **ಅನಧಿಕೃತ ಸಂಸ್ಥೆಗೆ ಹಣ ಕೊಡುವುದು/ಸಹಾಯ ಮಾಡುವುದು –2 ವರ್ಷ ಜೈಲು + ರೂ. 2 ಲಕ್ಷದವರೆಗೆ ದಂಡ.**
2. **ಸದಸ್ಯರಾಗಿರುವುದು, ಸಭೆಗಳಲ್ಲಿ ಪಾಲ್ಗೊಳ್ಳುವುದು, ಸಭೆಗಳನ್ನು ಪ್ರಚಾರ ಮಾಡುವುದು, ನಿರ್ವಹಣೆ ಮಾಡುವುದು – 3 ವರ್ಷ ಜೈಲು + ರೂ. 3 ಲಕ್ಷದವರೆಗೆ ದಂಡ.**
3. **ಅನಧಿಕೃತ ಚಟುವಟಿಕೆಗಳನ್ನು ರೂಪಿಸುವುದು/ಬೆಂಬಲಿಸುವುದು – 7 ವರ್ಷ ಜೈಲು + ರೂ. 5 ಲಕ್ಷದವರೆಗೆ ದಂಡ.**

ಎಲ್ಲ ಪ್ರಕರಣಗಳು ಜಾಮೀನುರಹಿತ ಮತ್ತು ಸಂಜ್ಞೇಯ(Cognizable) ಅಪರಾಧ ಆಗಿವೆ. ಅಂದರೆ ಯಾವುದೇ ಸಾಮಾನ್ಯ ವ್ಯಕ್ತಿಯನ್ನೇ "ಸಂಸ್ಥೆಗೆ ಸಹಾನುಭೂತಿ ತೋರಿದ್ದೀರಿ" ಎಂದು ಬಂಧಿಸಬಹುದು.

ಈ ಮಸೂದೆಯು ಕಾನೂನಿನ ಮುಂದೆ ಸಮಾನತೆಯ ಹಕ್ಕನ್ನು ಹಾಗೂ ಜೀವ ಮತ್ತು ಸ್ವಾತಂತ್ರ್ಯದ ಹಕ್ಕಿನ ವಿಷಯದಲ್ಲಿ ನ್ಯಾಯಯುತ ಮತ್ತು ಮುಕ್ತ ವಿಚಾರಣೆಯ ಹಕ್ಕನ್ನು ಉಲ್ಲಂಘಿಸುತ್ತದೆ. ಇದರರ್ಥ, ರಾಜ್ಯ ಸರ್ಕಾರದ ಜನ ವಿರೋಧಿ ನೀತಿಗಳನ್ನು ಯಾವುದೇ ರೀತಿಯಲ್ಲಿ ಟೀಕಿಸಲು ಅಥವಾ ವಿರೋಧಿಸಲು ಸಾಧ್ಯವಿಲ್ಲ. ಈ ನಿಬಂಧನೆಗಳು ಜನರ ಮೂಲಭೂತ ಹಕ್ಕುಗಳಾದ ವಾಕ್ ಸ್ವಾತಂತ್ರ್ಯ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ ಹಾಗೂ ಸಂಘಟನೆಗಳನ್ನು ರಚಿಸುವ ಸ್ವಾತಂತ್ರ್ಯದ ಮೇಲೆ ನೇರ ದಾಳಿಯಾಗಿವೆ. ಸುಪ್ರೀಂ ಕೋರ್ಟ್ ಈ ಹಿಂದೆ, "ಈ ಮೂಲಭೂತ ಹಕ್ಕುಗಳ ಮೇಲಿನ ಯಾವುದೇ ನಿರ್ಬಂಧಗಳು ಸಂವಿಧಾನದ ಮಿತಿಯನ್ನು ಮೀರಬಾರದು" ಎಂದು ಹೇಳಿದೆ ಮತ್ತು ಅಸ್ಪಷ್ಟ ಮಾನದಂಡಗಳು ಒಂದು ಭಯದ ವಾತಾವರಣಕ್ಕೆ ಕಾರಣವಾಗಬಹುದು ಎಂದು ಅಭಿಪ್ರಾಯಪಟ್ಟಿದೆ. ಅಲ್ಲದೆ, ಕಾನೂನಿನ ಅಡಿಯಲ್ಲಿ ಯಾವುದೇ ನಿರ್ಬಂಧವು ಅಸ್ಪಷ್ಟವಾಗಿದ್ದರೆ ಅದು ಖಂಡಿತವಾಗಿಯೂ ಅಮಾಯಕ ಜನರಿಗೆ ಶಿಕ್ಷೆಗೆ ಮತ್ತು ಅಧಿಕಾರಿಗಳ ವೈಯಕ್ತಿಕ ಅಥವಾ ಅನಿಯಂತ್ರಿತ ನಿರ್ಧಾರಗಳನ್ನು ತೆಗೆದುಕೊಳ್ಳಲು ಕಾರಣವಾಗುತ್ತದೆ.

ಹಾಗಾಗಿ, ಈ ಮಸೂದೆಯ ಅಡಿಯಲ್ಲಿ ಹೇರಲಾದ ನಿರ್ಬಂಧಗಳು ಪ್ರಜಾತಾಂತ್ರಿಕ ತತ್ವಗಳಿಗೆ ವಿರುದ್ಧವಾಗಿವೆ ಮತ್ತು ಜನರ ಮೂಲಭೂತ ಹಕ್ಕುಗಳನ್ನು ಉಲ್ಲಂಘಿಸುತ್ತವೆ. ಈ ಮಸೂದೆಯ ಅಪಾಯವನ್ನು ಅರಿತುಕೊಳ್ಳುವಂತೆ ಮತ್ತು ಮಹಾರಾಷ್ಟ್ರ ಸರ್ಕಾರದ ಈ ಕ್ರೂರ ವಿಶೇಷ ಭದ್ರತಾ ಮಸೂದೆ 2024 ಅನ್ನು ಹಿಂತೆಗೆದುಕೊಳ್ಳುವಂತೆ ಒತ್ತಾಯಿಸಿ ಹೋರಾಡಲು ಎಲ್ಲಾ ಪ್ರಜಾತಾಂತ್ರಿಕ ಶಕ್ತಿಗಳು, ಜನಸಾಮಾನ್ಯರು, ಸ್ವಾತಂತ್ರ್ಯಪ್ರಿಯರು ಮತ್ತು ನಾಗರಿಕ ಹಕ್ಕುಗಳ ಸಂಘಟನೆಗಳಿಗೆ ನಾವು ಕರೆ ನೀಡುತ್ತೇವೆ.

## ಆಶಾಗಳ ಅಹೋರಾತ್ರಿ ಧರಣಿ

9ನೇ ಪುಟದಿಂದ ಪ್ರಾಣ ಉಳಿದಿದ್ದು ಅಷ್ಟೇ ಅಲ್ಲದೇ, ತಾಯಿ ಮರಣ ಪ್ರಮಾಣ 83% ದಷ್ಟು, ಶಿಶು ಮರಣ ಪ್ರಮಾಣ 69% ದಷ್ಟು, ಸಾಂಕ್ರಾಮಿಕ ಸಾವುಗಳು ಸೇರಿದಂತೆ ಇತರ ಸಾವಿನ ಪ್ರಮಾಣ 75%ದಷ್ಟು ತಗ್ಗಿರುವುದನ್ನು ಸ್ವತಃ ಸರ್ಕಾರವೇ ದೃಢಪಡಿಸಿದೆ. ಇವರಿಗೆ ಕನಿಷ್ಠ ರೂ. 10,000 ಗೌರವಧನವನ್ನು ನೀಡದ ರಾಜ್ಯ ಸರ್ಕಾರ ಸದ್ದಿಲ್ಲದೆ ಶಾಸಕರ ಭತ್ಯೆ – ಸಂಬಳವನ್ನು ಮಾತ್ರ ಲಕ್ಷ ಲಕ್ಷದಷ್ಟು ಹೆಚ್ಚಿಸಿದೆ." ಎಂದು ಟೀಕಿಸಿದರು.

ಇದೀಗ, ಆಶಾಗಳು ಮಾತ್ರವಲ್ಲದೆ, ಇಡೀ ರಾಜ್ಯದ ಜನತೆ ರಾಜ್ಯ ಸರ್ಕಾರ ಈಗಲಾದರೂ ತಾನೇ ಕೊಟ್ಟ ಮಾತಿಗೆ ಬದ್ಧತೆ ತೋರುತ್ತದೆಯೋ ಎಂದು ನೋಡುತ್ತಿದ್ದಾರೆ. ಆಶಾಗಳ ಹೋರಾಟ ಈ ಸಲವಾದರೂ ಫಲಪ್ರದವಾಗಲಿ ಎಂದು ಕಾರ್ಮಿಕ ದೃಷ್ಟಿಕೋನ ಹಾರೈಸುತ್ತದೆ.



ಶಹಾಬಾದ್ ತಾಲೂಕಿನ ಹೊನಗುಂಟಾ ಗ್ರಾಮಕ್ಕೆ ಮೂಲ ಸೌಕರ್ಯ ಒದಗಿಸುವಂತೆ ಒತ್ತಾಯಿಸಿ ಹೊನಗುಂಟಾ ನಾಗರಿಕ ಹೋರಾಟ ಸಮಿತಿ ನೇತೃತ್ವದಲ್ಲಿ ಪ್ರತಿಭಟನೆ

## ಟ್ರಂಪ್–ಎಪಸ್ಟೀನ್ ಸಂಬಂಧ

10ನೇ ಪುಟದಿಂದ ಬದಲು ಎಫ್‌ಬಿಐನ ಸಾಬೀತುಪಡಿಸಲಾಗದಂತಹ ಹಾಗೂ ಗಾಳಿಸುದ್ದಿಯಂತಹ ಹಗುರವಾದ ಆರೋಪಗಳು ಎನ್ನುವಂತಾದವಷ್ಟೇ! ಟ್ರಂಪ್ ಮೌನದಿಂದ ತನ್ನನ್ನು ತಾನು ಕಾಪಾಡಿಕೊಂಡಿದ್ದೇನೆ ಎಂದು ಕೊಂಡಿರಬಹುದು. ಆದರೆ, 'ಆತ ಭ್ರಷ್ಟಾಚಾರದ ವಿರುದ್ಧ ನಿಲ್ಲುವ ವ್ಯಕ್ತಿ' ಎಂದು ನಂಬಿದ್ದ ಆತನ ಅನುಯಾಯಿಗಳಲ್ಲಿಯೂ ಸಹ ಈಗ ಅನುಮಾನದ ಹೊಗೆಯಾಡುತ್ತಿದೆ.

**ಢಾಳಾಗಿ ಕಣ್ಣಿಗೆ ಕಟ್ಟುವಂತೆ ಕಾಣುವ ಕಾಲದಲ್ಲಿ ರಹಸ್ಯಗಳ ರಾಜಕಾರಣ**

ಎಪ್‌ಸ್ಟೀನ್ ಕಡತಗಳಲ್ಲಿ ಹುದುಗಿರುವುದು ಕೇವಲ ಪಾಶವೀ ಭಕ್ಷಕರ ಕಥೆಗಳೋ ಅಥವಾ ಅವನ್ನು ಆಗಗೊಡಿಸಿದವರ ಕಥೆಗಳೋ ಅಷ್ಟೇ ಅಲ್ಲ. ಅವು, ಇಂದು ರಹಸ್ಯಗಳು ಮತ್ತು ಕಣ್ಣಿಗೆ ಕಾಣುವಂತಹವೂ ಸಹ ಹೇಗೆ ರಾಜಕೀಯ ಅಧಿಕಾರವನ್ನು ರೂಪಿಸುತ್ತವೆ ಎನ್ನುವುದರ ಕುರಿತಾಗಿವೆ. ಸತ್ಯವು ತಿರುಚುವಿಕೆಗೆ ಒಳಪಡುವ ಮತ್ತು ನಂಬಿಕೆಯು ವ್ಯಾವಹಾರಿಕವೂ ಆಗಿರುವ ಇಂದಿನ ಟ್ರಂಪ್‌ರ ಅಮೆರಿಕದಲ್ಲಿ ಮೌನದ ಮಾತುಗಳು ಕಿವಿಗಡಚಿಕ್ಕುವಂತೆ ಶಬ್ದ ಮಾಡುತ್ತಿವೆ. ಪೂರ್ವಯೋಜಿತವಾಗಿಯೋ ಅಥವಾ ತನ್ನಿಂದತಾನಾಗಿಯೋ ಎಪ್‌ಸ್ಟೀನ್ ಪ್ರಕರಣದಲ್ಲಿ ಟ್ರಂಪ್ ತಳುಕುಹಾಕಿಕೊಂಡಿರುವುದು ದೋಷಾರೋಪಣೆ ಅಥವಾ ಚುನಾವಣಾ ಸೋಲಿಗಿಂತಲೂ ಹೆಚ್ಚು ಹಾನಿಯನ್ನುಂಟು ಮಾಡಬಹುದು. ಏಕೆಂದರೆ ಅದು ಟ್ರಂಪ್‌ನ ಜನಪ್ರಿಯತೆ ಮತ್ತು ಬೆಳವಣಿಗೆಗಳ ವ್ಯಂಗ್ಯವನ್ನು ತೆರೆದಿಡುತ್ತದೆ. ಕಟ್ಟಕಡೆಯಲ್ಲಿ, ಎಪ್‌ಸ್ಟೀನ್ ಹೊಂದಿದ್ದ ಗ್ರಾಹಕರ ಬಗ್ಗೆ ಜನರಿಗೆ ಸಂಪೂರ್ಣ ಸತ್ಯವು ಎಂದೂ ತಿಳಿಯದೇ ಹೋಗಬಹುದು. ಆದರೆ, ಡೊನಾಲ್ಡ್ ಟ್ರಂಪ್ ಯಾರನ್ನು ಆಯ್ಕೆ ಮಾಡಿಕೊಂಡರು ಎಂಬ ಪ್ರಶ್ನೆಯ ಬಗ್ಗೆ ಜನರ ಮನಸ್ಸಿನಲ್ಲಿ ಯಾವುದೇ ಸಂದೇಹ ಇಂದು ಉಳಿದಿಲ್ಲ. ಅಂತಹ ಲೈಂಗಿಕ ಹಗರಣಗಳ ನೆರಳಿದ್ದೂ, ಕಳಂಕಿತನ ಜೊತೆ ಸ್ನೇಹವಿದ್ದೂ, ಟ್ರಂಪ್ ಹೇಗೆ ಅಮೆರಿಕಾದ ಅಧ್ಯಕ್ಷ ಸ್ಥಾನಕ್ಕೆ ಏರಿದರು ಹಾಗೂ ಇದೀಗ ಹೇಗೆ ಅವರ ಹೊಗಳುಭಟ್ಟರಿಂದ ನೊಬೆಲ್ ಪ್ರಶಸ್ತಿಗೆ ಶಿಫಾರಸ್ಸಾಗಿದ್ದಾರೆ ಎಂಬುದೇ ಯಾರಿಗಾದರೂ ಸೋಜಿಗದ ವಿಷಯವಾಗಿ ಉಳಿಯುತ್ತದೆ.

Registered Newspaper

Karmika Drushtikona RNI. KARKAN/45551/88 Reg. No. CPMG/KA/BGW-62/2021-2023. Posted at Bangalore PSO, Mysore Road, Bangalore-26 (20th & 25th of every month)

## ಕಾಶ್ಮೀರದ ಕುರಿತಾದ 25 ಪುಸ್ತಕಗಳ ನಿಷೇಧ: ಭಾರತ ಸರ್ಕಾರದ ದಮನಕಾರಿ ಕ್ರಮ: ಎಸ್‌ಯುಸಿಐ(ಸಿ)

ಕೋಲ್ಕತ್ತಾದಲ್ಲಿ ನೀಡಿದ ಹೇಳಿಕೆಯಲ್ಲಿ, ಎಸ್‌ಯುಸಿಐ(ಸಿ) ಪಕ್ಷದ ಪ್ರಧಾನ ಕಾರ್ಯದರ್ಶಿಗಳಾದ ಕಾ. ಪ್ರವಾಶ್ ಘೋಷ್, ಕಾಶ್ಮೀರದ ಬಗ್ಗೆ ಪ್ರಖ್ಯಾತ ವಿದ್ವಾಂಸರು, ಬರಹಗಾರರು ಮತ್ತು ಪತ್ರಕರ್ತರು ಬರೆದ 25 ಪ್ರತಿಷ್ಠಿತ ಪುಸ್ತಕಗಳನ್ನು ನಿಷೇಧಿಸುವ ಕೇಂದ್ರ ಸರ್ಕಾರದ ನಿರ್ಧಾರವನ್ನು ಖಂಡಿಸಿದರು. ಅವರು, ಆಗಿನ ಭಾರತ ಸರ್ಕಾರ ಕಾಶ್ಮೀರವನ್ನು ಭಾರತಕ್ಕೆ ಸೇರಿಸಿಕೊಳ್ಳುವಾಗ ಅಲ್ಲಿನ ಜನರಿಗೆ ನೀಡಿದ ಯಾವುದೇ ಭರವಸೆಗಳನ್ನು ಈಡೇರಿಸಲಿಲ್ಲ ಎಂದು ಹೇಳಿದರು. ಈಗ, ಭಯೋತ್ಪಾದನೆಯನ್ನು ನಿರ್ಮೂಲನೆ ಮಾಡುವ ಹೆಸರಿನಲ್ಲಿ, ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರವು ಸಂವಿಧಾನದ 370ನೇ ವಿಧಿಯನ್ನು ರದ್ದುಗೊಳಿಸಿದೆ, ರಾಜ್ಯವನ್ನು ಎರಡಾಗಿ ವಿಭಜಿಸಿದೆ ಮತ್ತು ಕಾಶ್ಮೀರದಲ್ಲಿ ಒಂದರ ನಂತರ ಒಂದರಂತೆ ಕಠಿಣ ಕಾನೂನುಗಳನ್ನು ಹೇರಿದೆ. ಇದು, ಈ ಪ್ರದೇಶವು ದೇಶದ ಮುಖ್ಯವಾಹಿನಿಯೊಂದಿಗೆ ವಿಲೀನಗೊಳ್ಳುವುದನ್ನು



ತಡೆಯುತ್ತಿದೆ. ಅಲ್ಲದೆ, ಭಾರತ ಸರ್ಕಾರವು 25 ಪುಸ್ತಕಗಳನ್ನು ನಿಷೇಧಿಸಿರುವ ಇತ್ತೀಚಿನ ಘಟನೆಯು ಕಾಶ್ಮೀರದ ಜನರನ್ನು ಮತ್ತಷ್ಟು ದೂರ ಮಾಡುತ್ತದೆ ಎಂದು ಆತಂಕ ವ್ಯಕ್ತ ಪಡಿಸಿದ್ದಾರೆ.

## ಇತಿಹಾಸ ಪಠ್ಯಪುಸ್ತಕದಿಂದ ಮೊಘಲ್ ಕಾಲಕ್ಕೆ ಖೊಕ!

7ನೇ ಪುಟದಿಂದ

ಇತಿಹಾಸಕಾರರು ಈಗಾಗಲೇ ತಮ್ಮ ಭಿನ್ನಾಭಿಪ್ರಾಯವನ್ನು ವ್ಯಕ್ತಪಡಿಸುತ್ತಿದ್ದಾರೆ ಎಂಬುದು ಭರವಸೆ ಮೂಡಿಸುವ ಅಂಶ. ಇರ್ಫಾನ್ ಹಬೀಬ್, ರೊಮಿಲಾ ಥಾಪರ್‌ರಂತಹ ಇತಿಹಾಸಕಾರರು ಮತ್ತು ಇತರ ಗಣ್ಯ ವ್ಯಕ್ತಿಗಳು ಮತ್ತು ಶಿಕ್ಷಣಪ್ರೇಮಿಗಳು ಇತಿಹಾಸದ ಈ ವಿಕೃತಿಯ ವಿರುದ್ಧ ಪ್ರತಿಭಟನೆ ನಡೆಸುತ್ತಿರುವ ಸುದ್ದಿ ಪತ್ರಿಕೆಗಳಲ್ಲಿ ವರದಿಯಾಗಿದೆ. ದೇಶದ ಎಲ್ಲಾ ಪ್ರಜಾತಾಂತ್ರಿಕ ಮನೋಭಾವದ ನಾಗರಿಕರು ಈಗ ಜಾಗೃತರಾಗುವುದು ಮತ್ತು ಇತಿಹಾಸವನ್ನು ತಿರುಚುವ ಹುನ್ನಾರವನ್ನು ವಿರೋಧಿಸುವಲ್ಲಿ ಸಕ್ರಿಯ ಪಾತ್ರ ವಹಿಸುವುದು ಅತ್ಯಗತ್ಯ.

## ಒಡಿಸ್ಸಾದ ವಿದ್ಯಾರ್ಥಿನಿಯ ಆತ್ಮಾಹುತಿ!

8ನೇ ಪುಟದಿಂದ

ದೌರ್ಜನ್ಯಗಳು ಎಲ್ಲಾ ದಾಖಲೆಗಳನ್ನು ಮೀರಿಸಿವೆ. ಬಿಜೆಪಿ ಅಥವಾ ಕಾಂಗ್ರೆಸ್ ಅಥವಾ ಯಾವುದೇ ಇತರ ಪ್ರಾದೇಶಿಕ ಪಕ್ಷಗಳು ಶ್ರೀಮಂತರ ಸೇವಕರಾಗಿವೆ. ಈ ಪಕ್ಷಗಳ ಸರ್ಕಾರಗಳಿಂದ ಜನರಿಗೆ ನ್ಯಾಯ ಸಿಗುವುದಿಲ್ಲ. ಈ ಶೋಷಿತ, ಭ್ರಷ್ಟ ಮತ್ತು ಪುರುಷ ಪ್ರಧಾನ ಬಂಡವಾಳಶಾಹಿ ಸಮಾಜದಲ್ಲಿ ಮಹಿಳೆಯರ ಘನತೆಯನ್ನು ಕಾಪಾಡಲು ಸಾಧ್ಯವಿಲ್ಲ. ಕೊಳೆತ ಅಮಾನವೀಯ ಆಲೋಚನೆಗಳಿಂದ ಸಮಾಜವನ್ನು ಮುಕ್ತಗೊಳಿಸುವ ಬದಲು, ಬಂಡವಾಳಶಾಹಿ ವ್ಯವಸ್ಥೆ ಮತ್ತು ಅದರ ಸೇವಕರು, ಅಶ್ಲೀಲತೆ, ನಗ್ನತೆ ಮತ್ತು ಪೋರ್ನೋಗ್ರಫಿಯ ಅಡೆತಡೆಯಿಲ್ಲದ ಪ್ರಚಾರದ ಮೂಲಕ ಯುವಕರಿಗೆ ಅಮಲೇರಿಸುತ್ತಿದ್ದಾರೆ. ಜೀವನದ ಎಲ್ಲಾ ಕ್ಷೇತ್ರಗಳಲ್ಲಿ ಮೌಲ್ಯಗಳು ಮತ್ತು ನೈತಿಕ ಮಟ್ಟದ ಅಧಃಪತನವು ಅತ್ಯಂತ ಕಳವಳಕಾರಿ ಸಂಗತಿಯಾಗಿದೆ. ಬಂಡವಾಳಶಾಹಿ ವ್ಯವಸ್ಥೆ ಮತ್ತು ಅದರಿಂದ ಪೋಷಿಸಲ್ಪಟ್ಟ ಸಾಂಸ್ಕೃತಿಕ ಅವನತಿಯ ವಿರುದ್ಧದ ಸರ್ವವ್ಯಾಪಿ, ಸೈದ್ಧಾಂತಿಕ–ಸಾಂಸ್ಕೃತಿಕ ಚಳುವಳಿ ಮಾತ್ರವೇ ಈಗ ಮಹಿಳೆಯರ ವಿರುದ್ಧ ಹೆಚ್ಚುತ್ತಿರುವ ಅಪರಾಧಗಳನ್ನು ತಡೆಯುವ ಏಕೈಕ ಮಾರ್ಗವಾಗಿದೆ.

## ನೃಪತುಂಗ ವಿಶ್ವವಿದ್ಯಾಲಯದ ಶುಲ್ಕ ಹೆಚ್ಚಳ ವಾಪಸ್ – ವಿದ್ಯಾರ್ಥಿಗಳ ಹೋರಾಟಕ್ಕೆ ಸಂದ ಜಯ.!!

ನಮ್ಮ ವಿದ್ಯಾರ್ಥಿ ಮುಂದಳ, ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ಸ್ ಆರ್ಗನೈಸೇಶನ್ (ಎಐಡಿಎಸ್‌ಓ) ಮತ್ತು ನೃಪತುಂಗ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಹೋರಾಟ ಸಮಿತಿ (NUSSC) ನೇತೃತ್ವದಲ್ಲಿ ಆಗಸ್ಟ್ 25 ರಂದು ನೃಪತುಂಗ ವಿಶ್ವವಿದ್ಯಾಲಯದ ಆವರಣದಲ್ಲಿ, ನೂರಾರು ವಿದ್ಯಾರ್ಥಿಗಳು ಶುಲ್ಕ ಹೆಚ್ಚಳದ ವಿರುದ್ಧ ಪ್ರತಿಭಟನೆ ನಡೆಸಿದರು. ವಿದ್ಯಾರ್ಥಿಗಳ ಹೋರಾಟದ ಪರಿಣಾಮವಾಗಿ



ನೃಪತುಂಗ ವಿಶ್ವವಿದ್ಯಾಲಯದ ಉಪಕುಲಪತಿಗಳು ಹೆಚ್ಚಿಸಿದ್ದ ಶುಲ್ಕವನ್ನು ಹಿಂಪಡೆದರು ಮತ್ತು ಈಗಾಗಲೇ ಶುಲ್ಕ ಪಾವತಿಸಿದ್ದ ವಿದ್ಯಾರ್ಥಿಗಳ ಹೆಚ್ಚುವರಿ ಶುಲ್ಕವನ್ನು ಹಿಂದಿರುಗಿಸುವುದಾಗಿ ಸ್ಪಷ್ಟಪಡಿಸಿದರು. ಈ ಯಶಸ್ವಿ ಹೋರಾಟದಲ್ಲಿ ಬೆಂಗಳೂರು ಜಿಲ್ಲಾ ಅಧ್ಯಕ್ಷರಾದ ಕಾ. ಅಪೂರ್ವ ಸಿ ಎಂ, ಜಿಲ್ಲಾ ಕಾರ್ಯದರ್ಶಿಗಳಾದ ಕಾ. ಕಲ್ಯಾಣ್ ಕುಮಾರ್, ಖಜಾಂಚಿ ಕಾ. ನವಾಜ್, ಹಾಗೂ ನೂರಾರು ವಿದ್ಯಾರ್ಥಿಗಳು ಭಾಗವಹಿಸಿದ್ದರು.

## ಅತಿಥಿ ಉಪನ್ಯಾಸಕರನ್ನು ಈ ಕೂಡಲೇ ನೇಮಿಸಿ–ಎಐಡಿಎಸ್‌ಓ ಆಗ್ರಹ!

ರಾಜ್ಯಾದ್ಯಂತ ಪದವಿ ತರಗತಿಗಳು ಪ್ರಾರಂಭವಾಗಿ ತಿಂಗಳು ಕಳೆದರೂ ಇಲ್ಲಿಯವರೆಗೂ ಕಾಲೇಜುಗಳಲ್ಲಿ ಅತಿಥಿ ಉಪನ್ಯಾಸಕರಿಲ್ಲದ ಕಾರಣ, ತರಗತಿಗಳು ಸರಿಯಾಗಿ ನಡೆದಿಲ್ಲ; ಕೆಲ ದಿನಗಳಲ್ಲೇ ಆಂತರಿಕ ಪರೀಕ್ಷೆಗಳನ್ನು ಸಹ ಅವರು ಎದುರಿಸಬೇಕಾಗಿದ್ದು, ಇದು ಅವರ ಶೈಕ್ಷಣಿಕ ಭವಿಷ್ಯವನ್ನು ಅತಂತ್ರವನ್ನಾಗಿಸಿದೆ. ಈ ನಿಟ್ಟಿನಲ್ಲಿ ಸೂಕ್ತ ಕ್ರಮ ಕೈಗೊಳ್ಳಲು ಆಗ್ರಹಿಸಿ ಎಐಡಿಎಸ್‌ಓ ನೇತೃತ್ವದಲ್ಲಿ ವಿದ್ಯಾರ್ಥಿಗಳ ಪ್ರತಿಭಟನೆ.




ತುಮಕೂರು




ರಾಯಚೂರು




ಬೆಂಗಳೂರು




ಚಿಕ್ಕಬಳ್ಳಾಪುರ




ಹಾಸನ

Published by: K.Uma on behalf of SOCIALIST UNITY CENTRE OF INDIA-COMMUNIST, Karnataka State Committee, No.31, 3rd Cross, Malleswaram, Bangalore-03 Ph: 080-23561443. E-mail: karmikadrushtikona@gmail.com and Printed at : MNS Printers Private Limited, 345/4, Bhattarahalli, Old Madras Raad, Bengaluru, Karnataka - 560 049. Website: www.sucic.org & www.sucic-karnataka.org EDITOR: K.Uma